
# ಸಂಜೀವಪ್ಪ ಗಬ್ಬೂರ

ರಮೇಶ ಗಬ್ಬೂರ



ಕರ್ನಾಟಕ ನಾಟಕ ಅಕಾಡೆಮಿ

ರಂಗ ಸಂಪನ್ನರು ಮಾಲಿಕೆ

♦

# ಸಂಜೀವಪ್ಪ ಗಬ್ಬೂರ

ರಮೇಶ ಗಬ್ಬೂರ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು - ೫೬೦ ೦೦೨

**SANJEEVAPPA (Rangasampannaru Malike)**
by **Ramesha Gabbura**,
Published by **Mr. Siddaraju**, Registrar, Karnataka Nataka Academy,
Kannada Bhavana, J.C.Road, Bengaluru - 560 002.
Phone: 080-22237848

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧೦೦೦
ಪುಟಗಳು : xiv + ೭೪
ಬೆಲೆ : ರೂ. ೬೦/-

**ಪ್ರಕಾಶಕರು**
**ಸಿದ್ದರಾಜು, ರಿಜಿಸ್ಟ್ರಾರ್**
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡಭವನ, ಜೆ.ಸಿ.ರಸ್ತೆ
ಬೆಂಗಳೂರು - ೫೬೦ ೦೦೨
ದೂರವಾಣಿ: ೦೮೦ - ೨೨೨೩೭೮೪೮

ರಕ್ಷಾಪುಟ ವಿನ್ಯಾಸ:
ಕೃಷ್ಣ ರಾಯಚೂರು

ಮುದ್ರಕರು:
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ ರ ವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟಣೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯ ಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

**ಕ**ರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗ ಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟಣೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ ೨೩ ಜುಲೈ ೨೦೧೪ ರಂದು ನಡೆದ ಪ್ರಕಟಣಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟಣೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. ೫-೬ ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟಣೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ

ಲೇಖಿಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

೨೦೧೫ರಲ್ಲಿ ಪ್ರಕಟಣಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಸಂಪಾದಕನ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟಣೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

## ಗಂಡು ಹೆಣ್ಣಾಗುವ ಪರಿ

ಗಂಡು ಹೆಣ್ಣಾಗುವ ಪರಿ ಸಂಜೀವಪ್ಪ ದಾಸರ ಅವರಂತಹ ಅಭಿಜಾತ ಕಲಾವಿದರಿಗೆ ಸಾಧ್ಯ. ಸ್ತ್ರೀಯರೇ ನಾಚುವಂತಹ ಸ್ತ್ರೀಪಾತ್ರ ಅವರದು! ಗದಗದ ಡಾ. ಪುಟ್ಟರಾಜ ಗವಾಯಿಗಳ ನಾಟಕ ಕಂಪನಿಯಲ್ಲಿ ೪೦ ಕ್ಕೂ ಅಧಿಕ ವರ್ಷ ಸ್ತ್ರೀ ಪಾತ್ರದಲ್ಲಿ ಮನೆ ಮಾತಾದವರು ಅವರು.

ಗಂಗಾವತಿಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಗ್ರಂಥಪಾಲಕರಾಗಿರುವ ಕವಿ, ಹಾಡುಗಾರ ರಮೇಶ ಗಬ್ಬೂರ ಅವರು; ಸಂಜೀವಪ್ಪನವರ ರಾಯಚೂರು ಜಿಲ್ಲೆಯ ಗಬ್ಬೂರು ಪರಿಸರದಲ್ಲಿ ಬೆಳೆದವರು. ಸಹಜ ಕಲಾವಂತರಾದ ದಾಸ ಜನಾಂಗದ ಸೂಕ್ಷ್ಮ ವಿವರಗಳನ್ನು ನಿರುದ್ವಿಗ್ನವಾಗಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಸಂಜೀವಪ್ಪನೊಳಗಿನ ಕಲಾವಿದ ಹಂತ ಹಂತವಾಗಿ ಬೆಳೆದ ಬಗೆಯನ್ನು ಅತ್ಯಂತ ಸಂಯಮದಿಂದ ನಿರೂಪಿಸಿದ್ದಾರೆ.

**– ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು:
**ಜಗುಚಂದ್ರ ಕೆ.**
**ಉಮೇಶ ಸಾಲಿಯಾನ**
**ಶಿವಶಂಕರ ಹಾಲ್ಕುರಿಕೆ**

# ಕರ್ನಾಟಕ ನಾಟಕ ಅಕಾಡೆಮಿ

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

ರಾಜಪ್ಪ ಕಿರಗಸೂರು
ಕಲ್ಪನಾ ನಾಗನಾಥ್
ಪಿ. ತಿಪ್ಪೇಸ್ವಾಮಿ
ಎಂ.ಎಸ್. ಗುಣಶೀಲನ್
ಮುದ್ದಣ್ಣ ರಟ್ಟೆಹಳ್ಳಿ
ಅನ್ನಪೂರ್ಣ ಸಾಗರ
ಗುಡಿಹಳ್ಳಿ ನಾಗರಾಜ
ಎಚ್. ಷಡಾಕ್ಷರಪ್ಪ ಹೊಸಮನಿ
ಶ್ರೀಪಾದ ಭಟ್
ಉಮೇಶ ಸಾಲಿಯಾನ್
ವಿ.ಎನ್. ಅಕ್ಕಿ
ಬಿ.ಎಂ. ರಾಮಚಂದ್ರ
ಎನ್.ಕೆ. ರಾಮಕೃಷ್ಣ
ಎ. ವರಲಕ್ಷ್ಮಿ
ಎಸ್.ಕೆ. ಕೊನೆಸಾಗರ
ಹಾಲ್ಕುರಿಕೆ ಶಿವಶಂಕರ್
ಎಲ್.ಎಚ್. ರಂಗನಾಥಪ್ಪ
ಕೆ. ಜಗುಚಂದ್ರ

ರಿಜಿಸ್ಟ್ರಾರ್:
ಸಿದ್ದರಾಜು

ಯೋಜನಾ ಸಹಾಯಕರು:
ಕೆ. ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ

# ಪಾತ್ರವನು ಪುಸ್ತಕ ರೂಪವಾಗಿಸಿದವರ ನೆನೆಯುತ್ತಾ....

ಬಾಲಕನಾಗಿದ್ದಾಗ ನಾನು ಒಂದು ಗುಡಿಸಿಲಿನ ಮುಂದಿನ ಜಾಲಿಮರದ ಕೆಳಗೆ ಮೈತುಂಬಾ ಮಣ್ಣನ್ನು ಹಚ್ಚಿಕೊಂಡು ಆಟ ಆಡುತ್ತಿದ್ದಾಗ 'ಅಪ್ಪಾಜಿ ಬಿಸಿಲು ಬಹಳಿದೆ ಆಟ ಸಾಕು ಮಾಡ್ರಪ್ಪ, ಸ್ವಲ್ಪ ಹೊತ್ತು ಪುಸ್ತಕ ಹಿಡಿದು ಅಭ್ಯಾಸ ಮಾಡ್ರಿ' ಎಂಬ ಮಾತನ್ನು ಕೇಳಿದ ಕೂಡಲೇ ಇದು ಸಂಜೀವಪ್ಪ ಕಾಕಾನ ಮಾತಿರಬೇಕು ಅಂದುಕೊಂಡು ತಿರುಗಿ ನೋಡಿ ಅವರ ಮಾತನ್ನು ಗೌರವಿಸಿ ಗುಡಿಸಿಲಿನ ಒಳಗೆ ಹೋಗಿ ಓದುತ್ತಾ ಕುಳಿತುಕೊಳ್ಳುತ್ತಿದ್ದೆವು. ಅವರ ಗುಡಿಸಲಿನ ಪಕ್ಕದಲ್ಲಿ ನಮ್ಮ ಗುಡಿಸಿಲು ಇತ್ತು. ಅವರನ್ನು ನೋಡುತ್ತಾ ಬೆಳೆದವನು.

ಸಂಜೀವಪ್ಪನವರನ್ನು ನೋಡಿ ಇಡೀ ಓಣಿಯ ಜನ ಬಹಳ ಗೌರವ ಕೊಡುತ್ತಿದ್ದರು. ಅಂತೆಯೇ ಊರವರು ಇವರನ್ನು ಗೌರವಿಸುವ ರೀತಿ, ಹತ್ತಿರ ಕರೆದು ಅವರನ್ನು ಕೂಡಿಸಿ ಮಾತನಾಡಿಸುವ ರೀತಿ ಗಮನಿಸುತ್ತಿದ್ದೆ. ಆಗ ನನಗನಿಸಿದ್ದು ಏನೆಂದರೆ ಓದಿಗೆ ಎಷ್ಟೊಂದು ಗೌರವ ಸಿಗುತ್ತದಲ್ಲವೇ? ಎಂದು. ಅವರ ಸಂಗೀತ ಕಛೇರಿಗಳ ಭಾಗವಹಿಸುವಿಕೆ ಮತ್ತು ಅವರ ನಾಟಕ ಕಂಪನಿಯಲ್ಲಿನ ಪಾತ್ರಗಳು ನನ್ನ ಮೇಲೆಯೂ ಕೂಡಾ ಪ್ರಭಾವ ಬೀರಿದ್ದವು. ಊರಿಗೆ ಬಂದಾಗ ಓಣಿಯಲ್ಲಿನ ಜನರನ್ನು ಮಾತಾಡಿಸುವಾಗ ಮಗುವಿನಂತಹ ಅವರ ಮುಗ್ದತೆ. ಅಪ್ಪಾಜಿ, ಬುದ್ಧಿ, ಶರಣ್ರಿ ಎನ್ನದೆ ಮಾತೇ ಇಲ್ಲ. ಅವರಲ್ಲಿ ವಿಶಾಲವಾದ ಮಾನವೀಯ ಕಳಕಳಿಯನ್ನು ಗಮನಿಸಿದ್ದೆ. ಓದುವ ಮಕ್ಕಳಿಗೆ ಬಹಳ ಪ್ರೋತ್ಸಾಹ ನೀಡುತ್ತಿದ್ದ ಅವರನ್ನು ಕಂಡು ಮಾತನಾಡಿಸುವ ಹಂಬಲ ನನ್ನದಾಗಿರುತ್ತಿತ್ತು.

ಅವರು ತಮ್ಮ ಬದುಕಿನೊಂದಿಗೆ ಹಲವು ಬಗೆಯ ಬದುಕುಗಳಿಗೆ ಪ್ರೇರಣೆಯಾಗಿದ್ದವರು. ಸದಾ ಸರಳವಾದ ವ್ಯಕ್ತಿತ್ವ ಆಡಂಬರವಿಲ್ಲದ ಜೀವನವಾಗಿತ್ತು. ಓಣಿಯಲ್ಲಿ ಯಾರನ್ನಾದರು ಮಾತನಾಡಿಸುವಾಗಲೆಲ್ಲಾ ನಾಟಕದ ಪಾತ್ರವಾಗಿಯೇ ಕಾಣಿಸಿಕೊಳುವ ಬಗೆ ಇದೆಯಲ್ಲ ಅದೊಂದು ತಪಸ್ಸು ಎಂದು ನಾನಂದುಕೊಳ್ಳುತ್ತೇನೆ. ಯಾವುದೇ ವ್ಯಕ್ತಿ ತನ್ನಿರುವಿಕೆಯನ್ನು ಬಲವಂತವಾಗಿ ಸೃಷ್ಟಿಸಿಕೊಳಲಾಗುವುದಿಲ್ಲ. ಬದಲಾಗಿ ವ್ಯಕ್ತಿಯೇ ಹಾಗೆ ಇರುವ ಬಗೆ ಇದೆಯಲ್ಲ ಇದು ಸಂಜೀವಪ್ಪನವರಂತಹ ಸಾಧಕರಿಗೆ ಮಾತ್ರ ಸಿದ್ದಿಸಲು ಸಾಧ್ಯ.

ಕೆಲವು ನಾಟಕಗಳನ್ನು ಆಡಿ ಬಲವಂತವಾಗಿ ಗುರುತಿಸಿಕೊಳುವ ಎಷ್ಟೋ ಜನರ ಮಧ್ಯೆ ಸಂಜೀವಪ್ಪನಂತಹವರು ಕಳೆದುಹೋಗುತ್ತಾರೆ. ಸಾವಿರಾರು ನಾಟಕಗಳಿಗೆ ಬಣ್ಣ ಹಚ್ಚಿಕೊಂಡು ಪ್ರಶಸ್ತಿಗಾಗಿ ಆಶೆ ಪಡದೆ, ಗರ್ವವಿರದೆ ಸುಮಾರು ನಲವತ್ತೈದು

ವರ್ಷಗಳ ಕಾಲ ರಂಗಭೂಮಿಗೆ ಸೇವೆ ಸಲ್ಲಿಸಿದವರನ್ನು ಯಾರೂ ಗುರುತಿಸಲಿಲ್ಲ ಎಂಬ ಕೊರಗು ನನ್ನಲ್ಲಿತ್ತು. ಅದಕ್ಕೆ ನೆರವಾದವರು ನಾಟಕ ಅಕಾಡೆಮಿ ಸದಸ್ಯರಾದ ರಾಯಚೂರಿನ ವಿ.ಎನ್.ಅಕ್ಕಿ ರವರು. ಅವರು ಸಂಜೀವಪ್ಪನವರನ್ನು ಗುರುತಿಸಿದರು. ಇಷ್ಟು ವರ್ಷ ರಂಗಭೂಮಿಗಾಗಿ ದುಡಿದವರಿಗೆ ಒಂದು ಒಳ್ಳೆ ಕಾರ್ಯ ಮಾಡೋಣ ಎಂದು ಪುಸ್ತಕ ಬರೆಯುವ ಜವಾಬ್ದಾರಿ ನೀಡಿದರು. ಅವರಿಗೆ ನನ್ನ ಧನ್ಯವಾದಗಳು. ಎಲ್ಲಿಗೆ ಬಂದಿದೆ ಬರವಣಿಗೆ ಎಂದು ಪ್ರೀತಿಯಿಂದ ಫೋನ್ ಮೂಲಕ ಕೇಳುತ್ತಾ ಪ್ರೋತ್ಸಾಹಿಸುತ್ತಿದ್ದ ಹಿರಿಯರಾದ ಗುಡಿಹಳ್ಳಿ ನಾಗರಾಜ ಸರ್‌ರವರಿಗೆ ಧನ್ಯವಾದಗಳು.

ಸಂಜೀವಪ್ಪರವರಿಗೆ ಸದಾ ಪ್ರೋತ್ಸಾಹಿಸಿದ ಊರಿನ ಸಮಸ್ತ ಹಿರಿಯರ, ಗಬ್ಬೂರಿನ ನಿಜಾನಂದಾಶ್ರಮದ ಪಂಚಯ್ಯ ಕಂಬಿ, ತಾಲೂಕು ಪಂಚಾಯತಿ ಸದಸ್ಯರಾದ ಜನಾರ್ಧನ, ನವೋದಯ ತರಬೇತಿ ಕೇಂದ್ರದ ಚೆನ್ನಪ್ಪನವರಿಗೆ, ನನ್ನನ್ನು ಬರಹದೆಡೆಗೆ ಪ್ರೋತ್ಸಾಹಿಸಿ ಲೇಖನದ ಬಗೆಗೆ ಮಾತಾಡಿ ಸಲಹೆ ನೀಡಿದ ಗೆಳೆಯ ಡಾ.ಜಾಜಿ ದೇವೇಂದ್ರಪ್ಪನವರಿಗೆ, ನನ್ನ ಬರವಣಿಗೆಗೆ ಪ್ರೋತ್ಸಾಹ ನೀಡುತ್ತಿರುವ ಗಂಗಾವತಿಯ ಬಾಲಕರ ಸ.ಪ.ಪೂ.ಕಾಲೇಜಿನ ಪ್ರಾಚಾರ್ಯರಾದ ಲಕ್ಷ್ಮಣ ವಡಕಿ ಹಾಗೂ ಉಪನ್ಯಾಸಕ ಬಂಧುಗಳಿಗೆ, ಪುಸ್ತಕ ಪ್ರಕಟಿಸುತ್ತಿರುವ ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಂದನೆಗಳು. ಅಕ್ಷರಗಳು ನನ್ನವಾದರು ಬದುಕು ಮಾತ್ರ ಕಲಾದೇವಿಯ ಆರಾಧಕ, ಪುಟ್ಟರಾಜ ಗುರುಗಳ ಶಿಷ್ಯ, ಸಾತ್ವಿಕ ಜೀವಿ, ಬದುಕು ತುಂಬಿಸಿದ ಪಾತ್ರವಾಗಿ ಬಣ್ಣದ ಲೋಕದಲ್ಲಿ ಹೆಣ್ಣು ಪಾತ್ರವಾದ ಸಂಜೀವಪ್ಪನವರದು. ಅವರು ಮಾತ್ರ ಕಾರಣ ನಾನು ನೆಪ ಅಷ್ಟೆ.

**ರಮೇಶ ಗಬ್ಬೂರ**
*ಗಂಗಾವತಿ*

# ಬಣ್ಣದ ಮನೆಯೊಳಗೆ


| | | |
|---|---|---|
| ೧. | ಪಾತ್ರವ ಪುಸ್ತಕ ರೂಪವಾಗಿಸಿದವರ ನೆನೆಯುತ್ತಾ | xi |
| ೨. | ಪಾತ್ರ ಪ್ರವೇಶಕ್ಕೆ ಪರದಾ ಎತ್ತುವ ಮುನ್ನ | 1 |
| ೩. | ಜನನ | 4 |
| ೪. | ಸಮುದಾಯದ ಹಿನ್ನೆಲೆ | 5 |
| ೫. | ಬಾಲ್ಯ ಮತ್ತು ಬದುಕು | 7 |
| ೬. | ಗಬ್ಬೂರಿನ ಹಾದಿ ಹಿಡಿದು | 11 |
| ೭. | ಆರಂಭಿಕ ಶಿಕ್ಷಣ | 12 |
| ೮. | ನಟನೆಗೆ ಪ್ರೇರಣೆ | 13 |
| ೯. | ಗುರುವಿನ ಮಾರ್ಗದಲ್ಲಿ | 14 |
| ೧೦. | ಆಶ್ರಮದ ಮೊದಲ ಭೇಟಿ | 16 |
| ೧೧. | ಅಜ್ಜನವರ ಮೊದಲ ಭೇಟಿ | 17 |
| ೧೨. | ಬದುಕಿಗೆ ಬಣ್ಣ ಹರಡಿದ ಗೆಜ್ಜೆ | 19 |
| ೧೩. | ಬಣ್ಣದ ಕೋಣೆಯಲಿ ಹೆಣ್ಣಾದ ಸಂಜೀವಪ್ಪ | 20 |
| ೧೪. | ಸಂಜೀವಪ್ಪ ನಟಿಸಿದ ನಾಟಕಗಳು ಮತ್ತು ಪಾತ್ರಗಳು | 22 |
| ೧೫. | ಸಂಜೀವಪ್ಪನ ನೆನಪಿಂದ ಜಾರದ ಚಿತ್ರಗಳು | 24 |
| ೧೬. | ಮಹನೀಯರು ಬಿತ್ತಿದ ಹಾದಿ | 24 |
| ೧೭. | ರಾಜಕುಮಾರ ರಂಗಭೂಮಿಗೆ ಬಂದ ದಿನ | 25 |
| ೧೮. | ಪಾಂಡುರಂಗಾ ಎಂದ ಫಂಡರಿಬಾಯಿ | 26 |
| ೧೯. | ಪ್ರಸಿದ್ಧ ನಟರ ಜೊತೆ ಪಾತ್ರ | 26 |
| ೨೦. | ಬಣ್ಣದ ಜೊತೆಗಿನ ಇತರೆ ಅನುಭವಗಳು | 27 |

| | | |
|---|---|---|
| ೨೧. | ಬದುಕುಗಳ ಬದಲಾಯಿಸಿದ ಪಾತ್ರಗಳು | 36 |
| ೨೨. | ಮೋಹಗೊಳಿಸಿದ ಪಾತ್ರಗಳು | 41 |
| ೨೩. | ಒಡನಾಡಿಗಳ ಜೊತೆ ನಾಡು ಸುತ್ತುತ್ತಾ | 43 |
| ೨೪. | ಬಣ್ಣದ ಜೊತೆಗೆ ಸಂಜೀವಪ್ಪನ ಬದುಕು | 45 |
| ೨೫. | ಕುಟುಂಬಕ್ಕೆ ಬೀಸಿದ ಹುಚ್ಚು ಗಾಳಿ | 49 |
| ೨೬. | ಪುಣ್ಯಪುರುಷನ ನೆರಳಿನಲಿ ಬೆಳೆದ ಪಾತ್ರ | 54 |
| ೨೭. | ಮಹಾದೇವ ಮನೆಗೆ ಬಂದ ದಿನ | 57 |
| ೨೮. | ಬಣ್ಣ ಒರೆಸಿಕೊಂಡ ಪಾತ್ರ | 59 |
| ೨೯. | ಸಂಜೀವಪ್ಪನವರಿಗೆ ದೊರೆತ ಗೌರವ ಮತ್ತು ಪ್ರಶಸ್ತಿಗಳು | 60 |
| ೩೦. | ಪರದಾ ಬಿಡುವ ಮುನ್ನ | 60 |

# ಪಾತ್ರ ಪ್ರವೇಶಕ್ಕೆ
# ಪರದಾ ಎತ್ತುವ ಮುನ್ನ

ಗಬ್ಬೂರು ಒಂದು ಇತಿಹಾಸ ಪ್ರಸಿದ್ಧ ನಗರ. ಅದು ಕಲೆ, ಸಾಹಿತ್ಯ, ಸಾಂಸ್ಕೃತಿಕ ಲೋಕಕ್ಕೆ ಹೆಸರಾದ ಊರು. ಸಂಸ್ಕೃತಿ ಮತ್ತು ಕಲೆಯನ್ನು ಪರಂಪರೆಯಿಂದ ಪರಂಪರೆಗೆ ಸಾಗಿಸಿಕೊಂಡು ಬಂದ ಅನೇಕ ವ್ಯಕ್ತಿಗಳು ಬಾಳಿ ಬದುಕಿದ ನೆಲ. ಅಲ್ಲಿನ ಮಣ್ಣು ಚಿನ್ನವೆಂದ ಮೇಲೆ ಕೇಳಬೇಕೆ? ಅದೊಂದು ನಿಜಕ್ಕೂ ಸಂಪದ್ಭರಿತ ನಾಡು. ಆ ಊರಲ್ಲಿ ಹುಟ್ಟಿದ ಪ್ರತಿ ಜೀವಿಯೂ ಕಲೆಯನ್ನು ರೆಕ್ಕೆಗಳಂತೆ ಅಂಟಿಸಿಕೊಂಡು ಹುಟ್ಟಿ, ಸಾಂಸ್ಕೃತಿಕ ಲೋಕದಲ್ಲಿ ಹೆಸರಾಗಿಸಿದ ನೆನಪುಗಳು ಸ್ಮರಣೀಯ. ಊರ ಸುತ್ತಲೂ ಕೋಟೆ, ಏಳು ಅಗಸಿಗಳು, ಏಳು ಬಾವಿಗಳು. ಸುತ್ತಲೂ ಕಂದಕ. ಬಂಗಾರಕ್ಕಿಂತಲೂ ಬೆಲೆಬಾಳುವ ಮಾಳಾಗಡ್ಡೆಯ ಮಣ್ಣು. ಆನೆಗುಡಿ ಎದುರಿನ ದೊಡ್ಡ ಬಜಾರದ ಹರವಿನುದ್ದಕ್ಕೂ ಸಾಲಾಗಿ ಕಾಣುವ ಗುಡಿ ಗೋಪುರಗಳು, ಎಪ್ಪತ್ತೆಂಟು ದೇವಾಲಯಗಳು, ಇಪ್ಪತ್ತೆಂಟು ಶಾಸನಗಳು ಒಂದೇ ಎರಡೇ ಹೇಳುತ್ತಿದ್ದರೆ ಗಬ್ಬೂರಿಗೊಂದು ದೊಡ್ಡ ಐತಿಹಾಸಿಕ ಪರಂಪರೆಯಿದೆ.

ಗೋಪುರಗಳ ಒಡಲಲ್ಲಿ ತುಂಬಿಕೊಂಡ ಊರಿಗೆ ಸುತ್ತಲೂ ಕೋಟೆ. ಕೋಟೆಯಾಚೆಗೆ ಕಣ್ಣರಿದಷ್ಟು ಕಾಣುವ ವಿಶಾಲ ಬಯಲಿನ ಫಲವತ್ತಾದ ಕಪ್ಪುಮಣ್ಣು, ನೆಲಬಗೆದರೆ ಬಂಗಾರ ಸಿಗುವುದೆಂದು ಅಲ್ಲಲ್ಲಿ ನಿಧಿಗಳ್ಳರ ಪಾಲಾದ ದೇಗುಲಗಳ ಪಾಳುಬಿದ್ದ ಪ್ರಾಂಗಣಗಳು. ಇಷ್ಟೊಂದು ಚಾರಿತ್ರಿಕ ದಾಖಲೆಗಳನ್ನು ತನ್ನೊಡಲಲ್ಲಿ ಹುದುಗಿಸಿಕೊಂಡ ಈ ಗಬ್ಬೂರು ಹಿಂದೆ 'ಗೋಪುರ'ವೆಂಬ ಹೆಸರಿನಿಂದ ಕರೆದುಕೊಂಡು ದೊಡ್ಡ ಅಗ್ರಹಾರವಾಗಿತ್ತೆಂದು ಕೂಡಾ ಹೇಳಲಾಗುತ್ತದೆ. ೧೨ನೇ ಶತಮಾನದ ಶರಣ ಬಿಬ್ಬಿಬಾಚಯ್ಯ, ತತ್ವಪದಕಾರರಾದ ಅರಷಣಗಿ ಹಂಪಣ್ಣ, ಮಾರ್ತಂಡಪ್ಪ ಈ ನಾಡಲ್ಲಿ ಹೆಸರಾದರು. ಕಲ್ಯಾಣಿ ಚಾಲುಕ್ಯರ ಕಾಲದ ವಾಸ್ತುಶಿಲ್ಪ ಕಲೆ, ಬೂದಿಬಸವನ ನಾಡಾಗಿ, ಇತಿಹಾಸ ಪ್ರಸಿದ್ಧವಾಗಿ ಬಭ್ರುವಾಹನ ನಗರ ವೆಂಬ ಐತಿಹ್ಯ ಹೊಂದಿದೆ.

ರಾಜರಿಂದ ರಾಜರಿಗೆ ಸಾಗುತ್ತ, ಪಾಳೆಗಾರರಿಂದ ಪಾಳೆಗಾರರಿಗೆ ಸಾಗುತ್ತ ನೆಲದ ಸೊಗಡನ್ನು ಉಳಿಸಿಕೊಂಡು ಬಂದು ಸುತ್ತ ನಾಡೆಲ್ಲಾ ಹೆಸರಾಗಿದೆ. ಧಾರವಾಡದಲ್ಲಿ ಯಾವಕಡೆಗಾದರೂ ನಿಂತು ಕಲ್ಲೊಂದನ್ನು ಬೀಸಿದರೆ ಅದು ಸಾಹಿತಿಗಳ ಮನೆಯ ಮೇಲೆ ಬೀಳುವುದಂತೆ ಎಂಬ ಮಾತೊಂದನ್ನು ಕೇಳುತ್ತೇವೆ. ಅಂತೆಯೇ ಗಬ್ಬೂರಿನ ಯಾವುದೇ ಭಾಗದಲ್ಲಿ ನಿಂತು ಕಲ್ಲೊಂದನ್ನು ಬೀಸಿದರೆ ಅದು ಕಲಾವಿದನ ಮನೆಯ ಮೇಲೆಯೇ ಬೀಳುತ್ತದೆ. ಯಾಕೆಂದರೆ ಅಷ್ಟೊಂದು ಕಲಾವಿದರು ಇರುವ ಊರು.

ಸುಮಾರು ಐದಾರು ದಶಕಗಳಿಂದ ಬಯಲಾಟಗಳನ್ನು ಓಣಿಓಣಿಗೆ ಆಡುತ್ತಾ ಬಂದ ಊರು. ನಾಟಕ ರಂಗಭೂಮಿಯನ್ನು ಬೆಳೆಸುತ್ತಾ ಮಹಾನ್ ನಾಟಕಕಾರರ

ನಾಟಕಗಳನ್ನು ರಂಗಭೂಮಿಗೆ ಅರ್ಪಿಸಿದೆ. ಗಬ್ಬೂರಿನ ಜಾತ್ರೆ ಮತ್ತು ವಿಶೇಷ ಸಂದರ್ಭದಲ್ಲಿ ಆಡುವ ಬಯಲಾಟ ಮತ್ತು ನಾಟಕಗಳನ್ನು ನೋಡಲು ಸುತ್ತಲಿನ ಹಳ್ಳಿಗಳಿಂದ ಜನರು ಬಂಡಿ ಕಟ್ಟಿಕೊಂಡು, ಟ್ರ್ಯಾಕ್ಟರ್ ಮೇಲೆ, ಜೀಪ್, ಸೈಕಲ್ ಹತ್ತಿಕೊಂಡು ನೋಡಲು ಬರುತ್ತಾರೆ. ಕಲಾವಿದರನ್ನು ಗೌರವಿಸುತ್ತಾರೆ. ಹಾಗಾಗಿ ಪ್ರತಿವರ್ಷ ಬೇರೆ ಬೇರೆ ಸಂದರ್ಭಗಳಲ್ಲಿ ಸುಮಾರು ನಾಲ್ಕರಿಂದ ಐದು ಬಯಲಾಟ, ನಾಟಕಗಳನ್ನು ಪ್ರಯೋಗಿಸುತ್ತಾ ಬಂದಿದೆ. ಗಬ್ಬೂರು ಶ್ರೀಮಂತವಾದ ರಂಗಭೂಮಿಯನ್ನು ಹೊದಿದ್ದು ಸಾಕಷ್ಟು ಕಲಾಪರಂಪರೆಯನ್ನು ಬೆಳಸಿದೆ ಈಗಲೂ ಬೆಳೆಸುತ್ತಲೇ ಇದೆ.

ಗಬ್ಬೂರಿನ ಉತ್ತರ ಭಾಗದ ಕೋಟೆಗೆ ಹೊಂದಿಕೊಂಡಂತೆ ಇರುವ ಸಿದ್ದನ ಬಾವಿ, ಅದರ ಮುಂದಿನ ಪ್ಯಾಟೆ ಬಸಪ್ಪನ ಗುಡಿ, ಅದರ ಮುಂದಿನ ಧಣೇರ ದೊಡ್ಡಿಯ ಪಕ್ಕದಲ್ಲಿ ಇಬ್ಬರು ಕಲಾವಿದರ ಮನೆಗಳು ಇದ್ದವು. ದಾಸರ ತಿಮ್ಮಯ್ಯ ಮತ್ತು ನಾರಾಯಣಪ್ಪ ಬಯಲಾಟ ಮತ್ತು ಜನಪದ ಹಾಡುಗಾರಿಕೆಗೆ ಜಿಲ್ಲೆಯಾದ್ಯಂತ ಹೆಸರಾಗಿದ್ದರು. ಅವರ ಮನೆಯ ಪಕ್ಕದಲ್ಲಿ ಭಜಂತ್ರಿ ಕಲಾವಿದರ ಮನೆಗಳು, ಮತ್ತು ಗೋಂಧಳಿ ಕಲಾವಿದರ ಮನೆಗಳು. ಆ ಓಣಿ ಜನಪದ ಕಲಾವಿದರಿಂದ ತುಂಬಿತ್ತು. ಜನಪದ ಹಾಡುಗಾರಿಕೆ, ಬಯಲಾಟ, ನಿರ್ದೇಶನ, ಗಂಡು ಹೆಣ್ಣು ಪಾತ್ರಗಳ ನಟನೆ, ಬಣ್ಣ ಹಚ್ಚುವ, ಕುಣಿಸುವ, ಕುಣಿವ ಕಲೆ ಅಷ್ಟೇ ಅಲ್ಲದೆ ಹಾರ್ಮೋನಿಯಂ, ಮದ್ದಲಿ, ಏಕತಾರಿ, ಪಿಟೀಲು, ಡೋಲಕ್, ತಾಳ ಹೀಗೆ ಹಲವು ವಾದ್ಯ ನುಡಿಸುವ ತಯಾರಿಸುವ ರಿಪೇರಿ ಮಾಡುವ ಕಲಾವಂತಿಕೆ ಅಲ್ಲಿತ್ತು.

ಅಂತಹ ಕಲಾವಿದರು ಇರುವ ಓಣಿಯಲ್ಲಿ ದಾಸರ ತಿಮ್ಮಪ್ಪ ಮತ್ತು ನಾರಯಣಪ್ಪನವರ ಮನೆಯ ಹಿಂದೆ ಬಯಲಿನಲ್ಲಿ ಪಿಟೀಲು ಯಂಕಪ್ಪನ ಮನೆಯ ಪಕ್ಕದಲ್ಲಿ ಒಂದು ಚಿಕ್ಕ ಗುಡಿಸಲಿನಲ್ಲಿ ಬೆಳೆದು ಬಾಲ್ಯವನ್ನು ಕಟ್ಟಿಕೊಂಡ ಸಂಜೀವಪ್ಪನವರಿಗೆ ಈ ಎಲ್ಲಾ ಕಲಾವಿದರು ಪ್ರಭಾವಿಸಿದ್ದೂ ಸಹಜವೇ. ಹೀಗಾಗಿ ಬಾಲ್ಯದಿಂದಲೂ ಅವರೊಳಗೊಬ್ಬ ಕಲಾವಿದ ಮನೆ ಮಾಡಿದ್ದನು.

ಬಯಲಾಟ, ನಾಟಕ, ಭಜನೆ, ಡೊಳ್ಳು, ವೀರಗಾಸೆ, ಹಲಗೆ, ಚೌಡಿಕಿ, ಗೋಂಧಳಿ, ಹಗಲುವೇಷ, ಏಕತಾರಿ, ಜಾನಪದ ಹೀಗೆ ಹತ್ತು ಹಲವು ಕಲಾ ಪ್ರಕಾರಗಳನ್ನು ಹೊಂದಿದ ಕಲಾವಿದರ ಇಂತಹ ನಾಡಲ್ಲಿ ಜೋಳಿಗೆ ಹಾಕಿ, ಏಕತಾರಿ ಹಿಡಿದು ಹಾಡುತ್ತಾ, ಬೇಡುತ್ತಾ ತಮ್ಮ ಜೀವನವನ್ನು ಸಾಕುವ ದಾಸರ ಜನಾಂಗದಲ್ಲಿ ಸಂಜೀವಪ್ಪನವರು ಬೆಳೆದು ಕಷ್ಟನಷ್ಟಗಳನ್ನು ಅನುಭವಿಸಿದವರು. ಬಾಲ್ಯದಲ್ಲಿರುವಾಗ ಊರಿನ ಹಿರಿಯರ ಕೃಪೆಯಿಂದ ಸಂಗೀತ ಕಲಿಯಲು ಗದುಗಿನ ವೀರೇಶ್ವರ ಪುಣ್ಯಾಶ್ರಮ ಸೇರಿ, ಗದುಗಿನ ಗಾನಯೋಗಿ ಪಂ.ಪುಟ್ಟರಾಜ ಕವಿ ಗವಾಯಿಗಳವರಲ್ಲಿ ಶಿಷ್ಯನಾಗಿ ಅವರ ಪ್ರೀತಿಗೆ ಪಾತ್ರರಾಗಿ, "ಕುಮಾರೇಶ್ವರ ಕೃಪಾಪೋಷಿತ ಪಂಡಿತ ಪಂಚಾಕ್ಷರ ಗವಾಯಿಗಳ ನಾಟ್ಯ ಸಂಘ"ದಲ್ಲಿ ಬಾಲನಟನಾಗಿ ಸೇರಿ, ಅಂದಿನಿಂದ ಇಂದಿನವರೆಗೆ ಎಲ್ಲಬಗೆಯ ನಾಟಕಗಳಲ್ಲಿ ಅಭಿನಯಿಸಿದರು.

ನಲವತ್ತೈದು ವರ್ಷಗಳ ಕಾಲ ನೂರಾರು ಪ್ರಯೋಗಗಳಲ್ಲಿ ಸ್ತ್ರೀ ಪಾತ್ರವನ್ನು ಅಭಿನಯಿಸಿ 'ಅಭಿನಯ ಶಾರದೆ'ಯ ಕೃಪೆಗೆ ಪಾತ್ರರಾದವರು. ಎಲೆಮರೆಯ ಕಾಯಿಯಂತಿದ್ದ ಸಂಜೀವಪ್ಪನವರು ಈ ನಾಡು ಕಂಡ ಪ್ರತಿಭಾವಂತ ನಟರಾಗಿದ್ದಾರೆ. ಕರ್ನಾಟಕದ ಎಲ್ಲ ನಾಟಕ ಕಂಪನಿಗಳ, ಕಲಾವಿದರ, ಪರಿಚಯವಿರುವ ಹಾಗೂ ಪರಿಚಯಿಸಿ ಕೊಳ್ಳಲೇಬೇಕಾದ ಹಾಗು ನಾಡಿನ ಮಹಾನ್ ಕಲಾವಿದರ ಜೊತೆ ನಟಿಸಿದ ಅನುಭವವಿರುವ ನಟರಾಗಿದ್ದಾರೆ.

ಸರಳ ಸಜ್ಜನಿಕೆಯಲ್ಲಿ ಬಾಳಿ ಬದುಕಿದ ಬಡ ಜೀವವಾಗಿ, ಪುಟ್ಟರಾಜರ ರಂಗತೊಟ್ಟಿಲಲಿ ಕೂಸಾಗಿ ಬೆಳೆದು ನಲವತ್ತೈದು ವರ್ಷಗಳ ಕಾಲ ರಂಗಭೂಮಿಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಬದುಕೆಂದರೆ ಬಣ್ಣವೆಂದು, ನಟನೆಯೆಂದರೆ ಮಹಾನ್ ವಿದ್ಯೆಯೆಂದು ತಿಳಿದು "ಹಾನಗಲ್ಲ ಗುರು ಕುಮಾರೇಶ್ವರ ಕೃಪಾ ಪೋಷಿತ ಪಂಡಿತ ಪಂಚಾಕ್ಷರ ಗವಾಯಿಗಳವರ ನಾಟ್ಯ ಸಂಘ"ದಲ್ಲಿ ಬಾಲ ನಟಿಯಿಂದ ಹಿಡಿದು ಅಜ್ಜಿ ಪಾತ್ರದವರೆಗೂ ನಾಲ್ಕುವರೆ ದಶಕಗಳಕಾಲ ಕಂಪನಿಯ ಎಲ್ಲಾ ನಾಟಕಗಳಲ್ಲಿ ನಟಿಸಿದವರು. ಪ್ರತಿ ಪ್ರಯೋಗದಲ್ಲಿ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರ ಮನಸು ಗೆದ್ದ ನಟ ಸಂಜೀವಪ್ಪನವರು. ನಟರಾದರೂ ನಟಿಸಿದ್ದೆಲ್ಲಾ ಸ್ತ್ರೀ ಪಾತ್ರಗಳು.

ಅಜ್ಜನವರ ನಾಟಕ ಕಂಪನಿಯೆಂದೇ ಹೆಸರಾದ ಪಂಚಾಕ್ಷರ ಗವಾಯಿಗಳ ನಾಟಕ ಕಂಪನಿಯಲ್ಲಿ ಸ್ತ್ರೀಯರು ಬಣ್ಣ ಹಚ್ಚುವುದಿಲ್ಲ. ಎಲ್ಲಾ ಪಾತ್ರಗಳನ್ನು ಪುರುಷರೇ ಮಾಡುತ್ತಾರೆ. ಅಂತಹ ರಂಗಭೂಮಿಯನ್ನು ನೋಡಿದ, ನಟಿಸಿದ, ಸಂದರ್ಶಿಸಿದ ಎಷ್ಟೋ ಮಹನೀಯರು ಅಜ್ಜನವರ ನಾಟಕ ಕಂಪನಿಯನ್ನು ತುಂಬಾ ಹೊಗಳಿದ್ದಾರೆ. ''ಇಂತಹ ರಂಗಭೂಮಿಯನ್ನು ಕಂಡು ಬಹಳ ಸಂತೋಷವಾಯಿತು, ಇಲ್ಲಿರುವ ನಟರೆಲ್ಲಾ ನಿಜವಾಗಿಯೂ ಸರಸ್ವತಿ ಪುತ್ರರು ಈ ರಂಗಭೂಮಿಯ ಕಲಾವಿದರಿಗೆ ಯಾರೂ ಸಾಟಿಯಿಲ್ಲ'' ಎಂದು ಪದ್ಮಭೂಷಣ ಡಾ. ರಾಜಕುಮಾರ, ಪಂಢರೀಬಾಯಿ, ಸರೋಜಾದೇವಿ, ಸುದರ್ಶನ್, ಸುಧೀರ್, ಅಶ್ವಥ್, ಉಮಾಶ್ರೀ ಇನ್ನಿತರ ನಾಡಿನ ಹೆಸರಾಂತ ನಟರು ಅಜ್ಜನವರ ರಂಗಭೂಮಿಯನ್ನು ನೋಡಿ ಕೊಂಡಾಡಿದ್ದಾರೆ. ಅಂತಹ ರಂಗಭೂಮಿಯಲ್ಲಿ ಪಳಗಿ ಖ್ಯಾತನಾಮರಿಂದ ಹೊಗಳಿಸಿಕೊಂಡ ಪ್ರತಿಭಾವಂತ ನಟ ಗಬ್ಬೂರಿನ ಸಂಜೀವಪ್ಪನವರು. ರಂಗಭೂಮಿಗಷ್ಟೇ ಅಲ್ಲ ಕರ್ನಾಟಕದ ಸಹೃದಯನಿಗೂ ಹೆಮ್ಮೆ ತರುವ ವಿಷಯವೇ ಸರಿ.

ಯಾವುದೇ ಪ್ರಶಸ್ತಿಗಾಗಿ ನಟಿಸದೇ ಬಣ್ಣದ ಹೊಳೆಯಲ್ಲಿ ಹೆಣ್ಣು ಪಾತ್ರವಾಗಿ ಮಿಂದರು. ಬದುಕಿಗಾಗಿ, ಕಲೆಗಾಗಿ ನಟಿಸಿ ನಿವೃತ್ತರಾದವರು. ಬಣ್ಣ ಬಿಟ್ಟ ಬದುಕಾದರೂ ಪರದೆಯ ಪರತತ್ವವನ್ನಿಟ್ಟುಕೊಂಡು ರಂಗಭೂಮಿಯ ಅಂಗವಾಗಿ ಅದರ ಬಗ್ಗೆ ಸದಾ ಕಾಳಜಿಯಿಟ್ಟುಕೊಂಡು ಸರಳ ಜೀವನವನ್ನು ಸವೆಸುತ್ತಿರುವ ಸಂಜೀವಪ್ಪನವರರನ್ನು ಈ ನಾಡಿನ ಕಲಾಲೋಕ ಗೌರವಿಸಬೇಕಾದುದು ಕರ್ತವ್ಯವಾಗಿದೆ.

## ಜನನ

ಸ್ವತಂತ್ರ ಪೂರ್ವದ ಕರ್ನಾಟಕದ ಈಗಿನ ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ ಹಲವಾರು ಹಳ್ಳಿಗಳು ಆಂದ್ರಪ್ರದೇಶದ ಗಡಿಗೆ ಹೊಂದಿಕೊಂಡಿವೆ. ಭಾಷಾವಾರು ಪ್ರಾಂತಗಳಿರದ ಸಂದರ್ಭದಲ್ಲಿ ತೆಲುಗು ಪ್ರಭಾವಿಸಿದ ಕನ್ನಡದ ಹಳ್ಳಿಗಳವು. ಅಂತಹ ಗಡಿಯ ಹಳ್ಳಿಗಳಲ್ಲಿ ಸುತ್ತಲು ಜಾಲಿಮರಗಳಿಂದ ಮುಚ್ಚಿಕೊಂಡ ಒಂದು ಪುಟ್ಟ ಗ್ರಾಮ 'ತುರುಕನದೊಡ್ಡಿ'. ಅದನ್ನು 'ತುರುಕಲದೊಡ್ಡಿ' ಎಂತಲೂ ಕರೆಯುತ್ತಾರೆ. 'ತುರುಕ' ಎಂಬುದು 'ತುರುಕರು' 'ತುರುಕೋಲ್ಲು' 'ತುರ್ಕೋಳ್ಳು' ಅಂದರೆ ಇಸ್ಲಾಂ ಧರ್ಮದವರು, ಮುಸಲ್ಮಾನರು ಎಂದರ್ಥ. ಹೈದ್ರಾಬಾದಿನ ನಿಜಾಮ ಮತ್ತು ರಜಾಕಾರರಿಂದ ಪ್ರಭಾವಿಸಿರಬಹುದಾದ ಊರಾಗಿರಬಹುದು. ಆಡಳಿತದ ಕಾರಣದಿಂದಾಗಿ ಅಲ್ಲಿಗೆ ಬಂದ ರಜಾಕಾರ ಮುಸಲ್ಮಾನರು ಅಲ್ಲಿಯೇ ಉಳಿದಿರಬಹುದಾದ ಸಾಧ್ಯತೆ ಇದೆ. ಆ ಊರನ್ನು ಗಮನಿಸುತ್ತಿದ್ದರೆ ಅದು ಶತೃವಿನಿಂದ ರಕ್ಷಣೆಗೆ ಯೋಗ್ಯ ಊರು ಎಂದೆನಿಸುತ್ತದೆ. ರಜಾಕಾರರು ನಿಜಾಮನ ಆಳ್ವಿಕೆಯಲ್ಲಿ ಪ್ರದೇಶ ಸುತ್ತುತ್ತಾ ಬಂದು ಅಲ್ಲಿ ನೆಲೆಸಿ ಅಲ್ಲಿಯವರೇ ಆಗಿರಬಹುದು. ಹೀಗೆ ಬಂದ ಮುಸ್ಲಿಂ ಜನಾಂಗ ಊರಲ್ಲಿ ಹೆಚ್ಚು ಇರುವ ಕಾರಣಕ್ಕಾಗಿ ಆ ಹೆಸರು ಬಂದಿರಬಹುದು.

ಭಗವಂತನ ದಾಸರಾಗಿ ಭಕ್ತಿಯ ಹಾಡುಗಳ ಹಾಡುತ್ತಾ ಊರುರು ತಿರುಗುತ್ತಾ ಅಲೆಮಾರಿಗಳಾಗಿ ಭಿಕ್ಷಾಟನೆ ಮಾಡುತ್ತಾ ದಾಸ ಜನಾಂಗದ ಗುಂಪೊಂದು ಭಕ್ತಿಪಂಥದ ಕಾಲದಲ್ಲಿ ಅಲ್ಲಿಗೆ ಬಂದು ನೆಲೆಸಿತ್ತು. ಆ ಊರು ಇತರೆ ಎಲ್ಲಾ ಊರುಗಳಿಗೆ ಹತ್ತಿರವಾಗುತ್ತಿತ್ತು. ಅಷ್ಟೇ ಅಲ್ಲದೇ ಊರಿನ ಸುತ್ತಲೂ ವಿಶೇಷವಾಗಿ ಹರಡಿಕೊಂಡಿದ್ದ ಈಚಲು ಮರಗಳು, ಮರಮುಟ್ಟುಗಳು ನೀರತೊರೆಗಳು ಅಲೆಮಾರಿಗಳನ್ನು ಆಕರ್ಷಿಸಿರಬಹುದು. ಯಥೇಚ್ಚವಾಗಿ ಸಿಗುವ ಅರಣ್ಯದ ಉತ್ಪನ್ನಗಳಿಂದಾಗಿ ಮತ್ತು ಬೇಟೆಯಾಡಲು ಉತ್ತಮ ಸ್ಥಳವಾಗಿ ದಾಸ ಜನಾಂಗವನ್ನು ಇಲ್ಲಿ ಉಳಿಸಿಕೊಂಡಿರಬಹುದೆಂದು ಅನಿಸುತ್ತದೆ. ಈ ದಾಸ ಜನಾಂಗದ ಗುಂಪಿನಲ್ಲಿ ಹಲವರು ಕಲಾವಿದರು ಹಾಡುಗಾರರೂ ಇದ್ದರು. ಅವರ ಜೊತೆಗೆ ಸಂಜೀವಪ್ಪ ಎಂಬ ಬಯಲಾಟ ಕಲಾವಿದ ನೆಲೆಸಿದ್ದರು. ಅವರಿಗೆ ಅಲ್ಪಸ್ವಲ್ಪ ಸಂಸ್ಕೃತವೂ ತಿಳಿದಿತ್ತು. ಅವರಿಗೆ ರಂಗಪ್ಪನೆಂಬ ಮಗನಿದ್ದನು.

ಏಕತಾರಿ ಹಿಡಿದು ಜನಪದ ಹಾಡುತ್ತಾ ಊರೂರು ತಿರುಗಿ ಭಿಕ್ಷಾಟನೆ ಮಾಡಿ ಉಪಜೀವನ ನಡೆಸುತ್ತಿದ್ದ ಸಂಜೀವಪ್ಪನ ಮಗ ರಂಗಪ್ಪನಿಗೆ ನಾಲ್ಕು ಜನ ಮಕ್ಕಳು. ಹನುಮಂತಕ್ಕ, ಹನುಮಂತಣ್ಣ, ಸಂಜೀವಪ್ಪ ಮತ್ತು ಯಲ್ಲಪ್ಪ. ತುರುಕನದೊಡ್ಡಿಯ ಸುತ್ತಲು ಇರುವ ಊರುಗಳಲ್ಲಿ ಊರಾಡುತ್ತಾ, ಹಾಡು, ಲಾವಣಿ ಹಾಡುತ್ತಾ, ಭಾಗವತ ಹೇಳುತ್ತಾ, ಭಿಕ್ಷೆ ಬೇಡುತ್ತಾ ತಮ್ಮ ಉಪಜೀವನವನ್ನು ಮಾಡುತ್ತಿದ್ದರು. ಈ ಅಲೆಮಾರಿಯ ದಾಸರ ಕುಟುಂಬದ ಸಂಸ್ಕೃತ ಪಂಡಿತನ

ಮೊಮ್ಮಗನಾಗಿ, ರಂಗಪ್ಪನ ಎರಡನೆಯ ಮಗನಾಗಿ ಸಂಜೀವಪ್ಪ ೨೪.೦೮.೧೯೪೬ರಲ್ಲಿ ತುರುಕನದೊಡ್ಡಿಯಲ್ಲಿ ಜನಿಸಿದರು.

## ಸಮುದಾಯದ ಹಿನ್ನೆಲೆ

ಸಂಜೀವಪ್ಪನವರು 'ದಾಸರು' ಸಮುದಾಯದ ಅಲೆಮಾರಿ ಕುಟುಂಬದಲ್ಲಿ ಜನಿಸಿರುವುದರಿಂದ ಅವರ ಸಮುದಾಯದ ಹಿನ್ನೆಲೆಯನ್ನು ಗಮನಿಸಬೇಕಾಗುತ್ತದೆ. ಅಲ್ಲಿ ಸಿಗುವ ಮಾಹಿತಿ ಅವರ ಜೀವನಕ್ಕೆ ಪ್ರೇರಣೆ ನೀಡಿರಬಹುದಾದ ಸಾಧ್ಯತೆ ಇದೆ. ಮೂರು ನಾಮಗಳನ್ನಿಟ್ಟುಕೊಂಡು ಗೋವಿಂದನ ನಾಮಸ್ಮರಣೆ ಮಾಡುತ್ತಾ ಭಕ್ತಿಯಿಂದ ಹಾಡಿ ಬೇಡಿದ ದಾಸರುಗಳಾದ ಇವರು ರಾಮಾನುಜಾಚಾರ್ಯರಿಂದ ಪ್ರಭಾವಿತರಾಗಿ ಶ್ರೀವೈಷ್ಣವ ಮತ ಸ್ವೀಕರಿಸಿದವರು. ಹಣೆಯ ಮೇಲೆ ಉದ್ದನೆಯ ಎರಡು ಬಿಳಿ ನಾಮದ ಮಧ್ಯ ಕುಂಕುಮದ ಒಂದು ನಾಮವನ್ನಿಟ್ಟುಕೊಂಡು ಜೋಳಿಗೆ ಹಾಕಿ ಏಕತಾರಿ ಹಿಡಿದು ಗೋವಿಂದನ ನಾಮಸ್ಮರಣೆ ಮಾಡುತ್ತಾ ಸುತ್ತಲಿನ ಊರುಗಳಲ್ಲಿ ಕೀರ್ತನೆ, ಜನಪದವನ್ನು ಹಾಡುತ್ತಾ ಮಕ್ಕಳನ್ನು ಸಾಕುತ್ತಾ ಉಪಜೀವನ ನಡೆಸುತ್ತಿದ್ದವರು.

ತಾತ ಸಂಜೀವಪ್ಪನ ವಿದ್ಯೆಯೇ ಆತನ ಮಗ ರಂಗಪ್ಪನಿಗೆ ಆಧಾರವಾಗಿತ್ತು. ಮಕ್ಕಳನ್ನು ಸಾಕುತ್ತಾ ಅವರನ್ನು ಕಟ್ಟಿಕೊಂಡು ಊರೂರು ತಿರುಗುತ್ತಿದ್ದನು. ಜೋಳಿಗೆಯಲಿ ಬಿದ್ದ ಭಿಕ್ಷೆಯೇ ಅವರಿಗಾಧಾರವಾಗಿ, ಆಗಾಗ ಸುಗ್ಗಿ ಸಮಯ ಬಂದಾಗ ದೂರದ ಬೇರೆಬೇರೆ ಊರುಗಳಿಗೆ ಹೋಗಿ ಸುಗ್ಗಿ ಮುಗಿಸಿಕೊಂಡು ಮತ್ತೆ ಬಂದು ಅಲ್ಲಿಯೇ ನೆಲೆಸುತ್ತಿದ್ದರು. ದೇವನಿಗೆ ದಾಸರಾಗಿ ಯಾವುದೇ ಆಸೆ ಇಟ್ಟುಕೊಳ್ಳದೆ ಬಹಳ ಸರಳವಾಗಿ ಬದುಕುತ್ತಾ ಮನೆಮಠವನ್ನು ತ್ಯಜಿಸಿ, ಗುರುವಿನ ಬೋಧದಂತೆ ಊರ ಹೊರಗಿದ್ದು ಅಲೆಮಾರಿಯಾಗಿ ತಿರುಗುವ ಸಮುದಾಯವಾಗಿತ್ತು.

ವೃತ್ತಿಯೊಳಗಿನ(ಕುಲದೊಳಗಿನ) ದೈವಾರಾಧನೆಯ ಭಾಗವಾಗಿದ್ದ ದಾಸ ಸಮುದಾಯ ಕುಲಮೂಲದಿಂದ ದೂರಾಗಿ, ಬಹಳ ದೂರ ಸಾಗಿ ಬಂದರು. 'ದಾಸರು' ಅಲೆಮಾರಿಗಳಾಗಿ ಊರ ಹೊರಗಿನ ಬಯಲು, ಪಾಳುಬಿದ್ದ ದೇಗುಲ, ಮಸೀದಿಯ ನೆರಳಿನಲ್ಲಿರುವವರು. ಇಲ್ಲವೆ ಊರ ಹೊರಗಿನ ಗಿಡದ ನೆರಳು, ಬಯಲು ಅವರ ವಾಸ ಸ್ಥಾನವಾಗಿದ್ದವು. ಭಿಕ್ಷೆಯೇ ಅವರ ಉಪಜೀವನವಾಗಿ ಜೋಳಿಗೆ ಹಾಕಿದವರು. ಅಂತೆಯೇ ಅವರ ಮಕ್ಕಳು, ಮೊಮ್ಮಕ್ಕಳು ಸಹ ಇದೇ ಜೀವನವನ್ನು ಮುಂದುವರಿಸಿದರು. ಕಾಲಕಳೆದಂತೆ ಮೂಲಕುಲ(ವೃತ್ತಿ) ವನ್ನು ಕಳಚಿಕೊಂಡು ದೂರಸಾಗಿ ಸ್ವತಂತ್ರವಾದ ಸಮುದಾಯವಾದರು.

ದಾಸರೊಳಗಿನ ಉಪನಾಮಗಳು ಪ್ರತ್ಯೇಕವಾಗಿ ಗುರುತಿಸಿಕೊಳ್ಳತೊಡಗಿದವು. ಊರೂರು ತಿರುಗುತ್ತಾ ಮೂಲವನ್ನು ಬಿಟ್ಟು ದೂರಾದ ದಾಸರಿಗೆ ಹಿರಿಯರ ಆದರ್ಶಗಳೇ ಮಾರ್ಗಗಳಾದವು. ಅವರಂತೆಯೇ ಜೋಳಿಗೆ ಹಾಕಿ ಭಗವಂತನ ನಾಮವನ್ನು ಮನೆಮನೆಗೆ ಸಾರುತ್ತಾ ನೀಡಿದ್ದನ್ನು ತಿಂದು ಬದುಕುತ್ತಾ ದೇವನ

ದಾಸರಾಗಿ, ಆತನ ನಾಮದ ಬಲವನ್ನು ಸಾರುತ್ತಾ 'ನೀನ್ಯಾಕೋ ನಿನ ಹಂಗ್ಯಾಕೋ.. ನಿನ ನಾಮದ ಬಲವೊಂದಿದ್ದರೆ ಸಾಕೋ' ಎಂದೆನುತಾ ಉಪವಾಸ ತಪವಾಸ ಬಿದ್ದು ನಾಡನ್ನೇ ಸುತ್ತುತ್ತಾ ದೂರ ಸಾಗಿ ಅಲ್ಲಲ್ಲಿ ನೆನೆಸಿದರು.

ಕಾಲ ಮತ್ತು ಪರಿಸರ ಬದಲಾದಂತೆಲ್ಲಾ ಅವರ ವಾದ್ಯ ಪರಿಕರಗಳು ಬದಲಾದವು. ಹಿಂದಿನ ಯಾವುದೇ ಚಹರೆಗಳನ್ನು ಉಳಿಸಿಕೊಳ್ಳದೆ ಬದಲಾಗುತ್ತಾ ಸಾಗಿ ಕೆಲವು ದಾಸ ಸಮುದಾಯಗಳು ಅಲ್ಲಲ್ಲಿ ನೆಲೆ ನಿಂತವು. ಕೆಲವು ದಾಸ ಸಮುದಾಯಗಳು ಅಲೆಮಾರಿ, ಅರೆಅಲೆಮಾರಿಗಳಾದರು. ಬಯಲಾಟ ಆಡಿಸುತ್ತಿದ್ದರೆ ಆಟದ ದಾಸರಾಗಿ, ಜೋಳಿಗೆ ಹಾಕಿ ಬೇಡುತ್ತಿದ್ದರೆ ಬೇಡುವ ದಾಸರಾಗಿ, ಗೋವುಗಳ ಕಾಯುತ್ತಾ ಕೃಷ್ಣ ಗೊಲ್ಲನ ನಾಟಕ ಆಡಿಸುತ್ತಿದ್ದರೆ ಗೊಲ್ಲದಾಸರಾಗಿ, ಶಂಖವ ಊದುತ್ತಾ ಭಿಕ್ಷೆ ಬೇಡಿದರೆ ಶಂಖದಾಸರಾಗಿ, ಗೋಪಾಳ ಬುಟ್ಟಿ ಹಿಡದು ಭಿಕ್ಷೆಬೇಡಿದರೆ ಗೋಪಾಲಬುಟ್ಟಿ ದಾಸರಾಗಿ, ಕಾಶಿದಾರ, ಪಿನ್ನು, ಬಳೆ, ರಿಬ್ಬನ್ ಇತರೆ ಸ್ಟೇಷನರಿ ಸಮಾನು ಹೊತ್ತು ಊರೂರು ತಿರುಗಿ ಮಾರುತ್ತಿದ್ದವರು ಕಾಶಿದಾಸರೆಂದು ಕರೆಸಿಕೊಂಡರು.

ಹೆಣ್ಣಿಗೆ ತೆರಕೊಟ್ಟು ಮದುವೆ ಮಾಡಿಕೊಳುವ ಓಲಿದಾಸರಾಗಿ(ಓಲಿ–ತೆರ) ಹೊಲಿದಾಸರಾದರು. ಮಾದಿಗರ ಮನೆಯ ಪಕ್ಕದಲ್ಲಿದ್ದರೆ ಮಾದಿಗದಾಸ, ಮಾಲದಾಸ, ಹೊಲೆಯರ ಮನೆ ಪಕ್ಕದಲ್ಲಿದ್ದರೆ ಹೊಲೆಯದಾಸ, ದಂಡಿಗೆ ಹಿಡಿದು ಭಿಕ್ಷೆ ಬೇಡುತ್ತಿದ್ದರೆ ದಂಡಿಗದಾಸ, ಚೆನ್ನವಾದ್ಯವ ಹಿಡಿದು ಬೇಡುತ್ತಿದ್ದರೆ ಚೆನ್ನದಾಸ, ದಶಾವತಾರದ ಆಟ ಆಡಿ ಬದುಕುತ್ತಿದ್ದರೆ ದಶವಂತ ದಾಸರು, ದೇವರಿಗೆ ಹೆಣ್ಣು ಬಿಡುವ ಸಂಪ್ರದಾಯವಿದ್ದರೆ ಹೆಣ್ಣುದಾಸರು, ಊರಲ್ಲಿ ದುಂಬಿಯಂತೆ ಶಬ್ದಮಾಡಿ ಆಟವಾಡಿಸುತ್ತಿದ್ದರೆ ದೊಂಬಿದಾಸ, ಹೀಗೆ ಹತ್ತು ಹಲವು ಉಪನಾಮಗಳಲ್ಲಿ ಹರಿದು ಹೋದವರು. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗುತ್ತಿರುವಾಗ ವಾದ್ಯ ಪರಿಕರ, ವಸ್ತ್ರ, ಆಹಾರ ಬದಲಾಗಿ ಹೋದರೂ ಇನ್ನೂ ದೇವರ ದಾಸರಾಗಿ ಭಗವಂತ ನಾಮ ಸ್ಮರಣೆ ಮಾಡುತ್ತಾ ಹಾಡಿನ ಮೂಲಕ ಮೌಲ್ಯಗಳ ಮನೆಮನೆಗೆ ಬಿತ್ತುತ್ತಾ ಇಂದಿಗೂ ಊರ ಹೊರಗೆ ಹರಕು ಮುರುಕು ಗುಡಿಸಲಲ್ಲಿ, ಸರ್ಕಾರ ನೀಡಿದ ಆಶ್ರಯ ಮನೆಯಲ್ಲಿ ಬದುಕು ಸಾಗಿಸುತ್ತಿದ್ದಾರೆ.

ಯಾವ ಸಮುದಾಯವೂ ಕೂಡ ಹಿಂದಿನ ಕಾಲದಲ್ಲಿ ನನಗೆ ಇದೇ ಜಾತಿ ಇರಲೆಂದು ಅರ್ಜಿ ಹಾಕಿಕೊಂಡು ಸೇರಿಲ್ಲ. ಬದಲಾಗಿ ಅವರು ಮಾಡುವ ಕೆಲಸದಿಂದಾಗಿ ಹಾಗೆ ಕರೆದರೇ ವಿನಃ ಜಾತಿ ತಿಳಿದಿರಲಿಲ್ಲ. ಮುಂದೆ ಬರುಬರುತ್ತಾ ಕಸುಬುಗಳೇ ಜಾತಿಗಳಾದವು. ಹಾಗೇನಾದರೂ ಈಗಿರುವ ಮೇಲುಜಾತಿ ಕೀಳುಜಾತಿ ವ್ಯವಸ್ಥೆ ಮುಂದೆ ಬರುತ್ತದೆ ಅದರಲ್ಲಿ ನಾವಿರುತ್ತೇವೆ ಎಂದು ತಿಳಿದಿದ್ದರೆ ಎಲ್ಲರೂ ಮೇಲ್ಜಾತಿಗೆ ಅರ್ಜಿ ಹಾಕಿಕೊಳ್ಳುತ್ತಿದ್ದರು. ಅಂತೆಯೇ ಸಂಜೀವಪ್ಪನವರ ಹಿರಿಯರು ಬಯಲಾಟ ಕಲಿಸುತ್ತಿದ್ದ ಕಾರಣ ಆಟದಾಸರಾಗಿ, ಗೊಲ್ಲ ಕೃಷ್ಣನ ನಾಟಕ (ಕೃಷ್ಣ

ಗೊಲ್ಲಭಾಮೆ, ತೆಲುಗಿನಲ್ಲಿ 'ಸೆಂಚು ವೇಷ') ಆಡುತ್ತಿದ್ದ ಕಾರಣ ಗೊಲ್ಲತಿದಾಸರಾಗಿ, ಮಾದಿಗರ ಮನೆಯ ಪಕ್ಕದಲ್ಲಿರುವ ಕಾರಣ ಮಾಲದಾಸರಾಗಿ, ತೆಲುಗು ಮೂಲದಿಂದ ಬಂದು ತೆರವುನೀಡಿ ಹೆಣ್ಣನ್ನು ತರುವ ಸಂಪ್ರದಾಯ ಈಗಲೂ ಇರುವುದರಿಂದ ಓಲಿದಾಸ, ಹೊಲಿದಾಸರಾಗಿ ಪ್ರೀತಿಯಿಂದ ಕರೆಸಿಕೊಂಡರು. ಈ ಸಮುದಾಯದ ಹೆಣ್ಣುಮಕ್ಕಳು ದಾರಸೂಜಿ ಪಿನ್ನುಬಳೆ ಮಾರುವುದರಿಂದ ಕಾಶಿದಾಸರೆಂದು ಕರೆಸಿಕೊಂಡರು. ಅಂತೆಯೇ ಬದುಕಿಗಾಗಿ ಬೇರೆಬೇರೆ ದಾಸರಾಗಿ ಕಳೆದು ಹೋದರು.

## ಬಾಲ್ಯ ಮತ್ತು ಬದುಕು

ದಾಸರು ಯಾವತ್ತು ಸ್ವಾರ್ಥ ಪರರಲ್ಲ, ಊರಿಗಾಗಿ ಪ್ರಾರ್ಥಿಸಿದವರು. ಉತ್ತಮ ಮೌಲ್ಯಗಳನ್ನು ಬಿತ್ತಲು ಬದುಕನ್ನೇ ಕಳೆದವರು. ಒಳ್ಳೆಯ ಮಳೆಯಾಗಿ ಬೆಳೆ ಬಂದರೆ ಭಿಕ್ಷೆ ಜೋಳಿಗೆಯನ್ನು ತುಂಬಿರುತ್ತಿತ್ತು, ಇಲ್ಲವೇ ಆಗಾಗ ಉಪವಾಸವೂ ಕೂಡಾ ಸಾಗುತ್ತಿತ್ತು. ಎಷ್ಟೋಸಲ ಮಳೆಬೆಳೆಗಳು ಆಗದಿದ್ದಾಗ ಅಡವಿಯಿಂದ ಸಿಗುವ ಉತ್ಪನ್ನಗಳು ಹೊಟ್ಟೆ ತುಂಬಿಸುತ್ತಿದ್ದವು. ಒಮ್ಮೆ ಭೀಕರ ಬರಗಾಲ ಬಂತು. ಮಕ್ಕಳನ್ನು ಕಟ್ಟಿಕೊಂಡು ರಂಗಪ್ಪ ಉಪಜೀವನಕ್ಕಾಗಿ ಊರುಬಿಟ್ಟು ಊರೂರು ತಿರುಗುತ್ತಾ ಯಾದಗಿರಿಗೆ ಬಂದರು. ಅಲ್ಲಿ ಊರಹೊರಗಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದ ಬಯಲಿನಲ್ಲಿ ಗಿಡದ ನೆರಳಿಗೆ ವಾಸವಾಗಿ ಕೆಲದಿನಗಳ ಕಾಲ ಅಲ್ಲಿದ್ದರು. ಅಲ್ಲಲ್ಲಿ ತಮ್ಮ ಜನರಿರುವುದನ್ನು ಖಚಿತಪಡಿಸಿಕೊಂಡು ಅಲ್ಲೆರಡು ಇಲ್ಲೆರಡು ದಿನವಿದ್ದು ಮತ್ತೆ ತಮ್ಮ ಸ್ವಸ್ಥಾನಕ್ಕೆ ಮರಳುತ್ತಿದ್ದರು. ಯಾದಗಿರಿಯಲ್ಲಿರುವಾಗ ಕೃಷ್ಣಾ ನದಿ ದಂಡೆಯ ಊರುಗಳು ಹಸಿರಾಗಿವೆ, ಏತನೀರಾವರಿ ಹಾಗು ಕೃಷ್ಣಾ ಎಡದಂಡೆಯ ನೀರಿನಿಂದಾಗಿ ನೀರಾವರಿ ಬೆಳೆ ಚೆನ್ನಾಗಿ ಬೆಳೆಯುತ್ತಾರೆ ಎಂದು ತಿಳಿದುಕೊಂಡರು. ಭಿಕ್ಷೆ ಚೆನ್ನಾಗಿ ಆಗುತ್ತದೆ ಎಂದು ತಿಳಿದುಕೊಂಡ ರಂಗಪ್ಪ ತನ್ನ ಮಕ್ಕಳನ್ನು ಕಟ್ಟಿಕೊಂಡು ಆ ಕಡೆಗೆ ತಮ್ಮ ಗುಳೆಯನ್ನು ಸಾಗಿಸಿದರು.

ಕೃಷ್ಣಾ ನದಿಯ ದಂಡೆಗುಂಟ ಹಲವು ಊರುಗಳು ಹಸಿರಿನಿಂದ ಕಂಗೊಳಿಸುತ್ತಿದ್ದವು. ಸುಂದರ ಪ್ರಕೃತಿಯ ಮಧ್ಯದಲ್ಲಿ ಊರಿಂದೂರಿಗೆ ಸಾಗುವಾಗ ಭಿಕ್ಷೆ ಚೆನ್ನಾಗಿ ಆಗುತ್ತಿತ್ತು. ಜನರು ತಮ್ಮ ಬಿಡುವಿನ ವೇಳೆಯಲ್ಲಿ ಜನಪದ ತತ್ವಪದಗಳನ್ನು ಹಾಡಿಸಿ ಆದರಿಸುತ್ತಿದ್ದರು. ತಮ್ಮ ಕಲೆಯನ್ನು ಗುರುತಿಸಿ ಗೌರವಿಸುವ ಊರುಗಳಲ್ಲಿ ಹೆಚ್ಚು ಉಳಿಯುವುದು ವಾಡಿಕೆಯಾಗಿತ್ತು. ಹೀಗಿರುವಾಗ ಕೃಷ್ಣಾತಟದ ದೊಡ್ಡ ಊರಾದ ಶಾಹಪುರ ತಾಲೂಕಿಗೆ ಸೇರಿದ 'ಗೋನಾಳ' ಎಂಬಲ್ಲಿ ನೆಲೆ ನಿಂತರು. ಸುಗ್ಗಿಗಾಗಿ ಗೋನಾಳ್‌ಗೆ ಹೋಗಿ ಬರುವ ಕೆಲಸ ಪ್ರತಿವರುಷ ನಡೆಯಿತು. ಆ ಕಾಲದಲ್ಲಿ ಗೋನಾಳ ಮಾರೆಮ್ಮ ಜಾತ್ರೆ ಬಹಳ ಪ್ರಸಿದ್ಧ ಆ ಸಮಯದಲ್ಲಿ ಬಯಲಾಟ, ಜಾನಪದ, ಕಲಾಗೋಷ್ಠಿಗಳು ಹೆಚ್ಚು ನಡೆಯುತ್ತಿದ್ದವು. ಅಲ್ಲಿನ ಹಿರಿಯರು ಕಲಾಪೋಷಕರು. ಅಷ್ಟೇ ಅಲ್ಲದೆ ನೀರಾವರಿ ಬದುಕು ಚೆನ್ನಾಗಿ ಸಾಗುತ್ತಿತ್ತು.

ಹೀಗಾಗಿ ಅಲ್ಲಿಗೆ ಸುತ್ತಲಿನ ಬೇರೆಬೇರೆ ಭಾಗದ ಇನ್ನಿತರೆ ಅಲೆಮಾರಿಗಳು ಅಲ್ಲಿ ಬಂದು ಸೇರಿ ತಮ್ಮ ಸುಗ್ಗಿ ಮುಗಿಸಿಕೊಳ್ಳುತ್ತಿದ್ದರು.

ಗೋನಾಳದಿಂದ ದಕ್ಷಿಣಕ್ಕೆ ಕೃಷ್ಣಾನದಿ ದಾಟಿದರೆ ಗಬ್ಬೂರು ೧೫ಕಿ.ಮೀ ಇತ್ತು. ಗಬ್ಬೂರಿನಲ್ಲಿ ಬಯಲಾಟ ನಾಟಕಕಲೆಗೆ ಹೆಸರಾದ ದಾಸರ ನಾರಾಯಣಪ್ಪ ಮತ್ತು ತಿಮ್ಮಯ್ಯ ಸುತ್ತಲಿನ ನಾಡಲ್ಲಿ ಹೆಸರುವಾಸಿಯಾಗಿದ್ದರು. ಜಿಲ್ಲೆಯ ಯಾವುದೇ ಹಳ್ಳಿಯಲ್ಲಿ ಬಯಲಾಟ ನಡೆದರೂ ಈ ಕಲಾವಿದರು ಇರುವರೆಂದೇ ಅರ್ಥ. ಅಷ್ಟರ ಮಟ್ಟಿಗೆ ಅವಿನಾಭಾವ ಸಂಬಂಧ. ಇವರಿಬ್ಬರೂ ಬಯಲಾಟದ ಮಾಸ್ತರರೆಂದೇ ಹೆಸರಾದವರು. ನಾರಾಯಣಪ್ಪ ತಾಳ ಹಿಡಿದು ನಿಂತರೆ ಕುಣಿತ, ನಟನೆ, ಶಾಸ್ತ್ರ, ಪುರಾಣ, ವೇದಾಗಮ, ಉಪನಿಷತ್ತಿನ ಪುಟಗಳನ್ನು ತೆಗೆಯುತ್ತಾ ಎಲ್ಲಾ ಮೌಲಿಕ ವಿಚಾರಗಳನ್ನು, ರಂಗಭೂಮಿಗೆ ಇಳಿಸಿ, ಚರ್ಚಿಸಿ, ಜನರನ್ನು ಮುಟ್ಟುತ್ತಿದ್ದರು. ತಿಮ್ಮಯ್ಯನಂತೂ ಬಯಲಾಟದ ಹೆಣ್ಣು ಪಾತ್ರವಾಗಿ, ಸಾರಥಿಯಾಗಿ, ವಾದ್ಯಗಾರನಾಗಿ, ತಾಳ ಹಿಡಿದು ಆಡಿಸುವ ಮಾಸ್ತರನಾಗಿ ಜನಮನದಲ್ಲಿ ನೆಲೆಗೊಂಡಿದ್ದರು. ಗಬ್ಬೂರಿನ ಈ ಕಲಾವಿದರು ಮತ್ತು ಗೋನಾಳಿಗೆ ಅವಿನಾಭಾವ ಸಂಬಂಧ. ಗೋನಾಳಿನ ಪೂಜಾರಿಗಳಿಗೆ ಇವರಿಬ್ಬರ ಬಗೆಗೆ ಅಪಾರ ಗೌರವವಿತ್ತು. ಇವರಿದ್ದರೇನೆ ಬಯಲಾಟ ಎನ್ನುವಷ್ಟರ ಮಟ್ಟಿಗೆ ಸ್ನೇಹ. ಆಟಗಳು ಮುಗಿದ ನಂತರ ಸುಗ್ಗಿಯ ಎಲ್ಲಾ ಪಡಿಪದಾರ್ಥಗಳಿಂದ ಸತ್ಕರಿಸುತ್ತಿದ್ದರು.

ಹೀಗಿರುವಾಗ ಗಬ್ಬೂರಿನ ದಾಸ ಸಮುದಾಯದ ಹಿರಿಯರಾದ ನಾರಾಯಣಪ್ಪ ಮತ್ತು ತಿಮ್ಮಯನವರನ್ನು ಬಯಲಾಟಕ್ಕೆ ಗೋನಾಳಿಗೆ ಕರೆಸುತ್ತಾರೆಂದು ತಿಳಿದಿದ್ದ ರಂಗಪ್ಪ ಮಗ ಸಂಜಿವಪ್ಪನಿಗೆ ಇವರಿಬ್ಬರ ಬಗ್ಗೆ ಹೇಳಿದ್ದನು. ಗಬ್ಬೂರಿನ ಈ ಇಬ್ಬರು ಹಿರಿಯ ಕಲಾವಿದರು ಅಷ್ಟೊತ್ತಿಗಾಗಲೆ ಬಯಲಾಟ ಮತ್ತು ಜನಪದ ಹಾಡುಗಾರಿಕೆಗೆ ಬಹಳ ಪ್ರಸಿದ್ಧರಾಗಿದ್ದರು. "ಗಬ್ಬೂರಿನ ದಾಸರು ಬಹಳ ದೊಡ್ಡ ಕಲಾವಿದರಂತೆ ಅವರು ಗೋನಾಳಕ್ಕೆ ಆಟ ಆಡಿಸಲು ಅಲ್ಲಿಗೆ ಬರುತ್ತಾರಂತೆ" ಎಂದು ಅಪ್ಪನ ಬಾಯಿಯಿಂದ ಕೇಳಿದ್ದ ಬಾಲಕ ಸಂಜೀವಪ್ಪ ಈ ಸಲ ಸುಗ್ಗಿಗೆ ಹೋದಾಗ ಅವರನ್ನು ನೋಡಬಹುದು ಎಂದು ಹಿಗ್ಗಿದನು.

ಗೋನಾಳಕ್ಕೆ ಈಗಿನಂತೆ ಆಗ ಬಸ್ಸುಗಳಿರಲಿಲ್ಲ. ಬರೀ ಕಾಲು ನಡಿಗೆಯಲ್ಲಿ ನಡೆಯಬೇಕಾಗಿತ್ತು. ಮೂರುನಾಲ್ಕು ದಿನ ಮುಂಚೆಯೇ ಊರು ಬಿಟ್ಟು ಊರೂರು ಸುತ್ತುತ್ತಾ ಕಲ್ಲು ಮಳ್ಳಿನ ಹಾದಿ ಸವೆಸುತ್ತಾ, ಕಾಲುದಾರಿಯಲ್ಲಿ ನಡೆಯುತ್ತಾ ಸುಗ್ಗಿಗೆ ಗೋನಾಳ ಜಾತ್ರೆಗೆ ಹೋದರು. ಸಂಜೀವಪ್ಪವನರು ತನ್ನ ತಂದೆ ರಂಗಪ್ಪನ ಜೊತೆ ಸುಗ್ಗಿಗೆ ಹೋಗುವಾಗ ಆಗಿನ್ನೂ ಬಾಲಕ. ಕನಸುಗಳು ಬಾನೆತ್ತರಕ್ಕೆ ಇದ್ದವು. "ನಾನು ನಮ್ಮ ತಾತ ಸಂಜೀವಪ್ಪನಂತೆ ಸಂಗೀತ ಕಲಿಯಬೇಕು. ಹಾಡಬೇಕು" ಎಂಬ ಮಹದಾಸೆ ಇಟ್ಟುಕೊಂಡಿದ್ದನು.

ಭಾರತದ ಸ್ವಾತಂತ್ರ್ಯ ನಂತರದ ಕಾಲದಲ್ಲಿ ಆಗಿನ್ನೂ ಭಾಷಾವಾರು ಪ್ರಾಂತಗಳ ರಚನೆ, ಹಾಗು ಜಾತಿಜನಗಣತಿ ನಡೆಯುತ್ತಿದ್ದ ಸಂದರ್ಭದಲ್ಲಿ ಬಾಲಕನಾಗಿದ್ದ

ಸಂಜೀವಪ್ಪ ಮತ್ತವರ ಹಿರಿಯರು ಒಂದುಸಲ ಹೊಳೆದಂಡೆಯ ಬಸಂತಾಪುರ ಹಾಗು ಅರಷಣಗಿಯ ಹಳ್ಳಿಗಳಲ್ಲಿ ಸಂಡ್ರಾ ಹೋಗುತ್ತಾ (ಸಂಡ್ರಾ, ನಿದ್ರಾಪಲ್ಲೆಲು ಎಂದರೆ, ತಿರುಗುವ ಪ್ರತಿ ಹಳ್ಳಿಗಳಲ್ಲಿ ಹಾಡುತ್ತಾ ಬೇಡುತ್ತಾ ಅಲ್ಲಿ ತಂಗುತ್ತಾ ಮುಂದಿನ ಊರಿಗೆ ಸಾಗುವ ಅಲೆಮಾರಿ ಪದ್ಧತಿ) ಭಿಕ್ಷಾಟನೆ ಮಾಡುತ್ತಿರುವಾಗ ಒಂದು ಘಟನೆ ನಡೆದಿತ್ತು. ಹಳ್ಳಿಯಿಂದ ಹಳ್ಳಿಗೆ ಹೋಗುತ್ತಿರುವಾಗ ದಾರಿಯಲ್ಲಿ ಆಗಿನ ಕಾಲದ ಪೋಲೀಸರು ಎದುರಾದರು. ಅವರನ್ನು ನೋಡಿದ ಕೂಡಲೆ ಹೆದರಿ ಬಾಲಕ ಸಂಜೀವಪ್ಪನನ್ನು ಕರೆದುಕೊಂಡು ಓಡಿದರು. ಯಾಕೆಂದು ಸಂಜೀವಪ್ಪ ಅವರ ಹಿರಿಯರನ್ನು ಕೇಳಿದಾಗ "ಪೋಲೀಸರಿಗೆ ಬಂದೂಕಿರ್ತದೆ, ಅವರು ಬೂಟುಗಾಲಿನಿಂದ ಒದೆಯುತ್ತಾರೆ" ಎಂದು ಹೇಳಿ ತಾವು ಕಂಡುಂಡ ರಜಾಕಾರರ ಕಥೆ ಹೇಳಿದ್ದರು. ಆದರೆ ಬಂದವರು ಏನೋ ಬರೆದುಕೊಂಡು ಹೋದರೆಂದು ಆಮೇಲೆ ತಿಳಿಯಿತು.

ಭಿಕ್ಷಾಟನೆ ಸಮಯದಲ್ಲಿ ಸಂಜೀವಪ್ಪನವರ ಹಿರಿಯರು ಊರ ಹೊರಗಿನ ಗುಡಿಸಲು, ಕೌದಿಯ ಟೆಂಟು, ಮಸೀದಿಯ ನೆರಳು, ಗುಡಿಯ ನೆರಳು, ಗಿಡ ಕಟ್ಟೆಯ ನೆರಳಿಗೆ ವಾಸವಿರುತ್ತಿದ್ದರು. ಜನಗಣತಿಗೋ, ಜಾತಿಗಣತಿಗೋ ಇನ್ನಿತರೆ ಯಾವುದೇ ಕಾರಣಕ್ಕೊ ಅಧಿಕಾರಿಗಳು ಬಂದು, 'ನೀವ್ಯಾರು.....?' ಎಂದು ಕೇಳಿದರೆ ಹಿಡಿದುಕೊಂಡು ಹೋಗಲು ಬಂದ ಯಾರೋ ಸಾಹೇಬರು ಎಂದು ತಿಳಿದು ಭಯದಿಂದ ಕೆಲವರು ಓಡಿ ಹೋಗುತ್ತಿದ್ದರು. ಕೆಲವು ಯಜಮಾನರು ಓಡಲಾಗದೆ ಅಂಜುತ್ತಾ 'ದಾಸ'ರೆಂದು ಹೇಳುತ್ತಿದ್ದರಂತೆ. ಭಯದಿಂದ ಏನು ಮಾಡುವರೋ ಎಂದುಕೊಂಡು ತಪ್ಪಿಸಿಕೊಂಡು ದೂರ ಹೋಗಲು ಏನೇನೋ ಹೇಳಿಬಿಡುತ್ತಿದ್ದರು.

ಬಿಕ್ಷೆ ಬೇಡಿ ಬದುಕುವ ದಾಸರಾದ ಇವರು 'ಬೇಡುವ ದಾಸ', ಅಥವಾ ಗೊಲ್ಲಕೃಷ್ಣನ ಕಥೆ ನಾಟಕ ಮಾಡುವವರಾದ್ದರಿಂದ 'ಗೊಲ್ಲತಿದಾಸ'ರೆಂದು, ಬಯಲಾಟ ಆಡಿಸುವ 'ಆಟದ ದಾಸರು' ಎಂದು, ಕಾಸಿದಾರ ಕುಂಕುಮದ ಪುಟ್ಟಿಯಲಿಟ್ಟು ಮಾರುವ ಕಾರಣದಿಂದಾಗಿ 'ಕಾಸಿದಾಸ'ರೆಂದು ಜನ ನಮ್ಮನ್ನು ಈ ರೀತಿಯ ಹಲವು ಹೆಸರಿನಿಂದ ಕರೆಯುತ್ತಾರೆ ಎಂದು ಹೇಳದೆ ಪೋಲೀಸರನ್ನು ಕಂಡಕೂಡಲೆ ಭಯದಿಂದ ದಾಸರು ಎಂದು ಹೇಳಿದರಂತೆ. ಹೀಗೆ ಆಯೋಗಗಳು ಸರ್ವೆ ಮಾಡುವಾಗ ದೂರ ಉಳಿದ ಕಾರಣದಿಂದಾಗಿ ಉಪನಾಮಗಳು ಎಲ್ಲಿಯೂ ಸೇರ್ಪಡೆಯಾಗದೆ ಇಂದಿಗೂ ತೊಂದರೆಯನ್ನು ಎದುರಿಸಬೇಕಾಗಿದೆ ಎಂದು ಈಗಲೂ ಸಂಜೀವಪ್ಪನವರು ತಮ್ಮ ವಿಷಾದವನ್ನು ವ್ಯಕ್ತಪಡಿಸುತ್ತಾರೆ.

ದಾಸ ಜನಾಂಗದ ಹಿರಿಯರು ಮತ್ತು ಅವರ ಸಮಕಾಲೀನರು ಆಗ ಅಲೆಮಾರಿಗಳಾಗಿ ತಿರುಗುತ್ತಿದ್ದುದರಿಂದ, ಅವರು ತಿರುಗಾಟದಲ್ಲಿ ಊರಿನ ಹೊರಗಿರುವ ಕಾರಣ, ಒಂದೇ ಊರಲ್ಲಿ ಶಾಶ್ವತ ನೆಲೆ ನಿಲ್ಲದ ಕಾರಣದಿಂದಾಗಿ ಆಯೋಗಗಳು ನಡೆಸುವ ಜಾತಿಗಣತಿ, ಜನಸಂಖ್ಯಾಗಣತಿ, ಮನೆಗಣತಿ, ಮಕ್ಕಳಗಣತಿ ಹೀಗೆ ಇತರೆ ಗಣತಿಗಳಿಂದ ಹೊರಗುಳಿಯಬೇಕಾಯಿತು ಎಂದೆನಿಸುತ್ತದೆ. ಅವರ

ಮೂಲವೇ ಹೋಗಿ ಜನರು ಕರೆವ ಪ್ರೀತಿಯ ದಾಸರಾಗಿ ಮುಖ್ಯವಾಹಿನಿಯಲ್ಲಿ ಉಳಿಯಬೇಕಾಯಿತು.

ಗೋನಾಳದಲ್ಲಿನ ಬಸವರಾಜಪ್ಪ ಗೌಡ್ರು, ಮಾಲೀಗೌಡ್ರು, ಮಾರೆಮ್ಮದೇವಿ ಗುಡಿ ಪೂಜಾರಿಗಳು ಸಂಗೀತ ಪ್ರಿಯರು. ಎಷ್ಟೋ ಬಯಲಾಟ ನಾಟಕ ಸಂಗೀತ ಕಾರ್ಯಕ್ರಮಗಳನ್ನು ಸುಗ್ಗಿಯ ಸಮಯ, ಜಾತ್ರೆ ಅಂಗವಾಗಿ ನಡೆಸುತ್ತಿದ್ದರಂತೆ. ಬಾಲಕ ಸಂಜೀವಪ್ಪ ಅಲ್ಲಿಗೆ ಪ್ರತಿ ವರ್ಷ ಸುಗ್ಗಿಗೆ ಹೋಗಿದ್ದನ್ನು ಈಗಲು ನೆನಪಿಸಿಕೊಳ್ಳುತ್ತಾರೆ. ಊರೂರು ತಿರುಗುತ್ತಾ ಭಿಕ್ಷಾಟನೆ ಮಾಡುತ್ತಾ ಗೋನಾಳ್ ಸುಗ್ಗಿಗೆ ಹೋಗುವುದು ದಾಸಜನ ಎಲ್ಲರೂ ಸೇರುವುದು, ಸುಗ್ಗಿ ಮುಗಿಸಿ ಮತ್ತೆ ಮರಳುವುದೂ ವಾಡಿಕೆಯಾಗಿತ್ತು. ಸುಗ್ಗಿ ಎಂದರೆ ಭಿಕ್ಷಾಟನೆ ಬಿಟ್ಟು ಬೇರೇನಿಲ್ಲ. ಜೋಳಿಗೆ ಹಾಕಿ ರಾಶಿ ಮಾಡುವಲ್ಲೆಲ್ಲಾ ಹೋಗಿ ಪಿಟೀಲು ತಾಳ ತಂಬೂರಿ ಏಕತಾರಿ ನುಡಿಸುತ್ತಾ ಹಾಡುತ್ತಾ, ಗೋವಿಂದಾ ಎನ್ನುತ್ತಾ ಬೇಡುವುದು. ನೀಡಿದಷ್ಟು ನೀಡಿಸಿಕೊಂಡು ಮುಂದೆ ಸಾಗುವುದು ದಾಸ ಜನಾಂಗದ ಉಪಜೀವನವಾಗಿತ್ತು.

ಗೋನಾಳ ಸುಗ್ಗಿಗೆ ಯಾದಗಿರಿ, ನಾರಾಯಣಪೇಟೆ, ತುರುಕನದೊಡ್ಡಿಯಿಂದ ಸಂಜೀವಪ್ಪನವರ ಬಂಧುಗಳು, ಅವರ ಅಣ್ಣತಮ್ಮಂದಿರು ಬರುತ್ತಿದ್ದರು. ಗಬ್ಬೂರಿನ ಮತ್ತು ನಾಯ್ಕಲ್‌ನ ಬಂಧುಗಳು ಸಹ ಬರುತ್ತಿದ್ದರು. ದಾಸರ ಎಲ್ಲಾ ಬಂಧುಗಳು ಸೇರಿ ಕಷ್ಟಸುಖ ಹಂಚಿಕೊಳ್ಳುತ್ತಿದ್ದರು. ಸಂಜೀವಪ್ಪನವರೇ ಹೇಳುವಂತೆ "ಕೃಷ್ಣ ನದಿಯ ಪಕ್ಕದಲ್ಲಿ ನೀರಾವರಿ ಹೊಂದಿದ ದೊಡ್ಡ ಊರು. ಅನ್ನಕ್ಕಾಗಿ ಇರುವ ಅತಿ ಹತ್ತಿರದ ಊರು. ಹೀಗಾಗಿ ಅದನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದೆವು. ಅಲ್ಲಿಗೆ ದೊಡ್ಡ ದೊಡ್ಡ ಕಲಾವಿದರು ಬರುತ್ತಿದ್ದರು. ನಮ್ಮ ದಾಸ ಜನಾಂಗದಲ್ಲಿ ಪ್ರಸಿದ್ಧರಾದ ಶೇಷಪ್ಪ ಗವಾಯಿಗಳು ಹಾಡುವ ತಂಬೂರಿ ಗಾಯನ ಬಹಳ ಪ್ರಸಿದ್ಧವಾಗಿತ್ತು. ಯಾದಗಿರಿಯ ಈ ಗವಾಯಿಗಳು ಹಾರ್ಮೋನಿಯಂ, ಗಾಯನ, ನಾಟಕ ಹೀಗೆ ಎಲ್ಲಾ ಕಲೆಗಳನ್ನು ಬಲ್ಲವರಾಗಿದ್ದರು. ನಾಟಕ ಅಭಿನಯಿಸುತ್ತಿದ್ದರೆ ಎಲ್ಲರನ್ನು ಮೆಚ್ಚಿಸುತ್ತಿದ್ದರು. ಇಂತಹ ಕಲಾವಿದರನ್ನು ನೋಡಲು ನಾನು ಕೂಡಾ ಬಾಲಕನಾಗಿದ್ದಾಗ ಹೋಗಿದ್ದು ನೆನಪಿದೆ". ಎಂದು ನೆನಪಿಸಿಕೊಳ್ಳುತ್ತಾರೆ.

ಯಾದಗಿರಿಯ ತನ್ನಜನಾಂಗದ ಹಿರಿಯ, ಅದ್ಭುತ ಕಲಾವಿದ ಶೇಷಪ್ಪನವರನ್ನು ಕಂಡು ಮಾತನಾಡಿಸಬೇಕೆಂಬ ಆಸೆಯಿಂದ ಗೋನಾಳಿಗೆ ಹೋದ ಸಂಜೀವಪ್ಪನಿಗೆ ನಿರಾಸೆಯಾಗಲಿಲ್ಲ. ಬಿಳಿವಲ್ಲಿಯುಟ್ಟು ಬಿಳಿಅಂಗಿತೊಟ್ಟು, ಉದ್ದಮೂಗಿನ, ಗಾಯನವಾದನ ಚತುರರಾದ ಶೇಷಪ್ಪನವರು ನಟರೂ ಕೂಡಾ ಆಗಿದ್ದರು. ನಾಟಕದ ರಂಗತಾಲೀಮು ಮುಗಿದ ನಂತರ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಅಲ್ಲಿನ ಅವರ ಗಾಯನ ಮಾತುಗಳನ್ನು ಕೇಳಿದ ಸಂಜೀವಪ್ಪ ಅವರನ್ನು ಮಾತಾಡಿಸಿದಾಗ "ನಾಟಕ ಮತ್ತು ಬಯಲಾಟ ಸರಸ್ವತಿಯ ಕುಚದ್ವಯಗಳಿದ್ದಂತೆ ಸಹೃದಯ ಮೋಹಗೊಳ್ಳಲು ತಯಾರಿ ಬಹಳ ಮುಖ್ಯ" ಎಂದು ಹೇಳಿದ ಗವಾಯಿಗಳ ಮಾತುಗಳನ್ನು ಈಗಲೂ ನೆನೆಸುತ್ತಾರೆ.

## ಗಬ್ಬೂರಿನ ಹಾದಿ ಹಿಡಿದು

ದಾಸರ ಜನಾಂಗದ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಕಲಾವಿದರೇ ಆಗಿದ್ದರು. ಪಿಟೀಲು, ಮದ್ದಲಿ, ಹಾರ್ಮೋನಿಯಂ, ಡೋಲಕ್, ತಂಬೂರಿ, ತಾಳ, ಏಕತಾರಿ ಹೀಗೆ ವಾದ್ಯಗಳನ್ನು ನುಡಿಸುತ್ತ, ಹಾಡುತ್ತ ಊರೂರು ತಿರುಗಿ ಭಿಕ್ಷೆ ಬೇಡುತ್ತಿದ್ದರು. ಬಾಲಕ ಸಂಜೀವಪ್ಪನ ಹಿರಿಯರಾದ ವನ್ನಯ್ಯತಾತ, ಬಾಬಯ್ಯತಾತ, ದೊಡ್ಡರಾಮಯ್ಯ, ಮತ್ತು ಸಣ್ಣರಾಮಯ್ಯನವರ ಜೊತೆ ಬೆರೆತು ಅನೇಕಸಲ ತಿರುಗಾಡಿದ ಅನುಭವ ಹೊಂದಿದ್ದರು. ಇವರೆಲ್ಲರೂ ಹಾಡುಗಾರರು ಮತ್ತು ವಾದ್ಯ ನುಡಿಸುವವರಾಗಿದ್ದರು. ಇವರಂತೆ ನಾನೂ ಗಾಯಕ, ನಟನಾಗಬೇಕು ಎಂಬ ಕನಸು ಕಟ್ಟಿದರು. ಆಗಿನ ಸಂದರ್ಭದಲ್ಲಿ ಹಿರಿಯರಾದವರು ಕಿರಿಯರಿಗೆ ಹಾಡು, ತಾಳ, ಕುಣಿತ, ಮಾತು, ನಟನೆ ಇವನ್ನೆಲ್ಲಾ ಕಲಿಸುತ್ತಿದ್ದರು. ಬಾಲಕ ಸಂಜೀವಪ್ಪ ಹಿರಿಯರಿಂದ ಆ ವಿದ್ಯೆಯನ್ನು ಬಳುವಳಿಯಾಗಿ ಪಡೆದರು.

ಗೋನಾಳಿನ ಸುಗ್ಗಿಯ ಮಾರೆಮ್ಮ ಜಾತ್ರೆಯ ಅಂಗವಾಗಿ ನಡೆದ ಅಂದಿನ ಕಾರ್ಯಕ್ರಮಕ್ಕೆ ಬಯಲಾಟಕ್ಕೆ ಹೆಸರಾಗಿದ್ದ ಗಬ್ಬೂರಿನ ದಾಸರ ತಿಮ್ಮಯ್ಯ ಮತ್ತು ನಾರಾಯಣಪ್ಪ ಅವರನ್ನು ಕರೆಸಿದ್ದರು. ಆಗ ಬಾಲಕನಾಗಿದ್ದ ಸಂಜೀವಪ್ಪ ಅವರ ಗಾಯನ ನಟನೆಯಿಂದ ಆಕರ್ಷಿತರಾದರು. ನಾನೂ ಕೂಡ ಇವರಂತೆ ಸಂಗೀತ ಕಲಿಯಬೇಕು ಎಂದುಕೊಂಡರು. ಆ ದಿನ ಗೋನಾಳದಲ್ಲಿ ನಡೆದ ಸಂಗೀತ ಕಾರ್ಯಕ್ರಮ, ಬಯಲಾಟ, ಚರ್ಚೆ ಇವೆಲ್ಲವುಗಳನ್ನು ಹತ್ತಿರದಿಂದ ನೋಡಿ ಅವರಿಂದ ಪ್ರಭಾವಿತರಾದರು. ಶೇಷಾದ್ರಿ ಗವಾಯಿಗಳವರು ಬಾಲಕನಾಗಿದ್ದ ಸಂಜೀವಪ್ಪನನ್ನು ಕರೆದು ಮೈದಡವುತ್ತಾ 'ಕಲೆಗಾಗಿ ಬದುಕು' ಎಂದರಂತೆ. ಈ ಮಾತಿನಿಂದ ಸಂಜೀವಪ್ಪ ರೋಮಾಂಚನಗೊಂಡರು. ಗೋನಾಳದ ಸುಗ್ಗಿ ಮುಗಿಸಿ, ಹಾಗೆಯೇ ಕೃಷ್ಣಾ ನದಿಯನ್ನು ದಾಟಿ ಬಸಂತಾಪುರ, ಮದರಕಲ್, ಯಮನಾಳು, ಬೊಮ್ಮನಾಳು, ಹೊನ್ನಟಗಿ ಮೂಲಕ ತಿರುಗಾಡುತ್ತಾ, ಊರೂ ಅಡವಿ ಸುತ್ತುತ್ತಾ, ಹಾಡುತ್ತಾ, ಬೇಡುತ್ತಾ ಸಂಜೀವಪ್ಪ ಹಿರಿಯರೊಂದಿಗೆ ಗಬ್ಬೂರಿಗೆ ಬಂದು ನೆಲೆಸಿ ಅಲ್ಲಿಯೇ ನೆಲೆ ನಿಂತರು.

ಗಬ್ಬೂರು ಅವರಿಗೆ ಅನ್ನ ನೀಡಿತು ತಿರುಗಾಡುವ ಸುತ್ತಲಿನ ಹಳ್ಳಿಗಳಿಗೆ ಕೇಂದ್ರವಾಯಿತು. ಸುಗ್ಗಿಗಾಗಿ ಗೋನಾಳದಲ್ಲಿ ಸೇರಿದ್ದು ಬಂಧುತ್ವಕ್ಕೆ ದಾರಿಯಾಯಿತು. ದಾಸಜನಾಂಗ ಒಟ್ಟಿಗೆ ಗಬ್ಬೂರಿನಲ್ಲಿ ಒಂದೇ ಕಡೆ ಸೇರಲು ಸಾಧ್ಯವಾಯಿತು. ದೊಡ್ಡ ಊರು ಕಲೆಗಾಗಿ ಗೌರವ ನೀಡುವ ಉಳಿಸುವ ಬೆಳೆಸುವ ಅನೇಕ ವ್ಯಕ್ತಿಗಳು ಇಲ್ಲಿದ್ದರು. ಇಲ್ಲಿ ಸುತ್ತಲಿನ ಹಳ್ಳಿಗಳಿಗಿಂತ ಬಯಲಾಟಗಳು ಹೆಚ್ಚು ನಡೆಯುತ್ತಿದ್ದವು ಹಾಗೆಯೇ ಭಿಕ್ಷೆ ಹೊಟ್ಟೆ ತುಂಬುತ್ತಿತ್ತು. ಸುತ್ತಲೂ ಅರಣ್ಯ, ಬೇಲಿ, ಮರಗಿಡಗಳು, ಪೊದೆಗಳು ಜಾಸ್ತಿ ಇದ್ದು ಉಳಿದ ಸಮಯ ಬೇಟೆ ಚೆನ್ನಾಗಿ ನಡೆಯುತ್ತಿತ್ತು.

ಹಬ್ಬಗಳು ಬಂದಾಗ ವಿಶೇಷ ಹಾಡುಗಳ ಮೂಲಕ ಜನರನ್ನು ರಂಜಿಸುತ್ತಾ, ಹಾಡುಗಳ ಮೂಲಕ ಸಂದೇಶ ಸಾರುತ್ತಾ ಭಗವಂತನಿಗೆ ದಾಸರಾಗಿ ಬದುಕನ್ನು ಸವೆಸುತ್ತಿದ್ದರು.

ಹೀಗಿರುವಾಗ ಸಂಜೀವಪ್ಪನ ಹಿರಿಯರಿಗೆ ಗಬ್ಬೂರಿಗೆ ಬಂದ ನಂತರ ಹಿರಿಯರಾದ ತಿಮ್ಮಯ್ಯ ಮತ್ತು ನಾರಾಯಣಪ್ಪನವರ ಹಾಗು ತಿಮ್ಮಯ್ಯನವರ ತಾಯಿ ಲಕ್ಷ್ಮಮ್ಮನವರ ನೆರಳೂ ದೊರಕಿತು. ತಮ್ಮ ಹಿರಿಯರೊಂದಿಗೆ ಬಂದಿದ್ದ ರಂಗಪ್ಪ ತನ್ನ ಮಗ ಸಂಜೀವಪ್ಪನೂ ಇವರ ಜೊತೆ ಇದ್ದು ವಿದ್ಯೆ ಕಲಿಯಲಿ ಎಂದು ಇಲ್ಲಿಯೇ ಉಳಿದರು. ಕೆಲವರು ಮತ್ತೆ ಊರೂರು ಸುತ್ತುತ್ತಾ ರಾಯಚೂರು, ಬಾಯಿದೊಡ್ಡಿ, ಯಾಪಲದಿನ್ನಿ ಮತ್ತು ಹೂಗನಹಳ್ಳಿಗೆ ಹೋಗಿ ಅಲ್ಲಿಯೇ ನೆಲೆಸಿದರು.

ಗಬ್ಬೂರಿಗೆ ಯಾರೇ ಅಲೆಮಾರಿಗಳು ಬಂದರೆ ಲಾಲಸಾಬನ ಮಸೀದಿಯ ಬಸರೇ ಗಿಡದ ನೆರಳು, ಇಲ್ಲವೇ ಬುಸಣ್ಣ ಸಾಹುಕಾರರ ಮನೆಮುಂದಿನ ಪಿಂಜಾರ ಮಸೀದಿಯಲ್ಲಿ ವಾಸಮಾಡುತ್ತಿದ್ದರು. ಹಾಗೆಯೇ ದೇವದುರ್ಗದಿಂದ ಯಂಕಪ್ಪ ತನ್ನ ಎಂಟು ಜನ ಮಕ್ಕಳೊಂದಿಗೆ ಗಬ್ಬೂರಿಗೆ ಬಂದರು. ಮಸೀದಿ ತುಂಬಿ ತುಳುಕುತ್ತಿತ್ತು. ಅದು ಸಾಲದಿದ್ದರೆ ಬುಸಣ್ಣ ಸಾಹುಕಾರರ ಮನೆ ಮುಂದಿನ ಗಿಡದ ಕಟ್ಟೆ ಮತ್ತು ಕೊರವರ ಓಣಿಯ ಬೇವಿನಕಟ್ಟೆ ಆಶ್ರಯವನ್ನು ನೀಡುತ್ತಿದ್ದವು. ಹಗಲಿನಲ್ಲಿ ಸಾಮಾನು ಒಂದೆಡೆ ಇಟ್ಟು ಭಿಕ್ಷೆಗಾಗಿ ತಿರುಗುವುದೇ ಕಾಯಕವಾಗಿತ್ತು.

## ಆರಂಭಿಕ ಶಿಕ್ಷಣ

ತುರುಕಲದೊಡ್ಡಿಯಲ್ಲಿರುವಾಗ ತಾತ ಸಂಜೀವಪ್ಪನ ಹತ್ತಿರ ಕುಳಿತಾಗ ಹಾಡುವುದನ್ನು, ತಾಳ ಹಾಕುವುದನ್ನು ತೋರಿಸುತ್ತಿದ್ದರು. ಹಾಡುಗಳನ್ನು ಹಾಡುವುದ ಕಲಿಸುತ್ತಾ, ಪೌರಾಣಿಕ ಕಥೆಗಳನ್ನು ಹೇಳುತ್ತಿದ್ದರು. ಮಕ್ಕಳನ್ನು ಮನೆಯಲ್ಲಿ ಬಿಟ್ಟು ಹಿರಿಯರು ಊರಾಡಲು ಹೋಗುತ್ತಿರಲಿಲ್ಲ. ಯಾವಾಗಲು ಮಕ್ಕಳನ್ನು ಜೊತೆಯಲ್ಲಿ ಕರೆದೊಯ್ಯುತ್ತಿದ್ದರಿಂದ ಔಪಚಾರಿಕ ಶಿಕ್ಷಣ ಪಡೆಯಲಿಲ್ಲ. ಯಾದಗಿರಿಯಲ್ಲಿದ್ದಾಗ ಸಂಜೀವಪ್ಪನವರು ಅಲ್ಲಿನ ಗಾಂವಠೀ ಮಾಸ್ತರ ಗುರಪ್ಪನವರ ಕೈಯಲ್ಲಿ ಓನಾಮ ತಿದ್ದಿಸಿಕೊಂಡಿದ್ದರು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರದಲ್ಲಿ ಸಂಜೀವಪ್ಪನಿಗೆ ಅಕ್ಷರಜ್ಞಾನದ ಬಾಗಿಲು ತೆರೆದಿತ್ತು. ಸುಮಾರು ೧೯೫೩ರಲ್ಲಿ ಗಬ್ಬೂರಿನ ಶಾಲೆಗೆ ಸೇರಿದರು. ೧೯೫೭ರಲ್ಲಿ ನಾಲ್ಕನೇ ತರಗತಿ ಮುಗಿಸಿದರು. ನಂತರ ಶಾಲೆಯ ಮುಖ ನೋಡಲಿಲ್ಲ. ಬಯಲಾಟದಲ್ಲಿ ಪಾತ್ರ ಮಾಡುವ ಬಗೆಗೆ ಆಸಕ್ತಿ ಮೂಡಿತು. ಹೀಗಾಗಿ ತಿಮ್ಮಯ್ಯ ಮತ್ತು ನಾರಾಯಣಪ್ಪನವರ ಮಾರ್ಗದರ್ಶನದಲ್ಲಿ ಬಯಲಾಟದಲ್ಲಿ ಪಾತ್ರ ಮಾಡುತ್ತಾ ಅವರ ನೆರಳಿನಲ್ಲಿ ಕಲಾವಿದನಾಗಿ ಬೆಳೆಯತೊಡಗಿದರು.

## ನಟನೆಗೆ ಪ್ರೇರಣೆ

ಒಂದು ಸಲ ಗಬ್ಬೂರಿನ ಬೂದಿ ಬಸವೇಶ್ವರ ಜಾತ್ರೆ ಸಂದರ್ಭದಲ್ಲಿ ಪ್ರಸಿದ್ಧ ನಟ ಏಣಗಿ ಬಾಳಪ್ಪನವರ ನಾಟಕ ಕಂಪನಿ ಕ್ಯಾಂಪ್ ಮಾಡಿತ್ತು. ಹನ್ನೊಂದು ದಿನಗಳಕಾಲ ಕಂಪನಿ ನಾಟಕಗಳ ಪ್ರದರ್ಶನವಿತ್ತು. 'ಜಗಜ್ಯೋತಿ ಬಸವೇಶ್ವರ' ನಾಟಕ ನಡೆದಿತ್ತು. ಆ ನಾಟಕವನ್ನು ನೋಡಿದ ಸಂಜೀವಪ್ಪನಿಗೆ ಒಂದು ಸನ್ನಿವೇಶದಲ್ಲಿ ಸಿಂಹಾಸನದ ಮೇಲೆ ನಂದಿ ಉಂಗುರವಿರಿಸಿದರೆ ಬೆಂಕಿ ಹತ್ತಿಕೊಳ್ಳುವ ಪ್ರಸಂಗ ಹೇಗೆ ನಡೆಯುತ್ತದೆ ಎಂಬುದರ ಬಗೆಗೆ ಸಂಶಯವಿತ್ತು. ಅದನ್ನು ಹೇಗಾದರು ಮಾಡಿ ಪರಿಹಾರ ಮಾಡಿಕೊಳ್ಳಬೇಕೆಂದು ಅನಿಸಿತು.

ಮಧ್ಯಾಹ್ನದ ಸಮಯ ನಾಟಕ ಕಂಪನಿಯ ಕಡೆ ಹೋಗಿ ಏಣಗಿ ಬಾಳಪ್ಪನವರಿರುವುದನ್ನು ಖಚಿತ ಪಡಿಸಿಕೊಂಡು ಸ್ಟೇಜಿನ ಒಳಗೆ ಹೋದ. ಇದನ್ನು ಗಮನಿಸಿದ ಒಬ್ಬಾತ "ಏಯ್ ಹುಡುಗಾ ಯಾರು ನೀನು" ಎಂದು ತಡೆಯಲು ಬಂದಾಗ, ಧೈರ್ಯದಿಂದ "ಬಸವೇಶ್ವರ ಪಾತ್ರ ಮಾಡ್ತಾರಲ್ಲ ಅವರನ್ನು ನೋಡಬೇಕು" ಎಂದರು. "ಏಯ್ ಹುಡುಗಾ ನಾಟಕದಲ್ಲಿ ನೋಡುವಂತೆ ಹೋಗು" ಎಂದ. "ಇಲ್ಲ ನಾನೀಗಲೇ ನೋಡಬೇಕು" ಎಂದ ಸಂಜೀವಪ್ಪ. ಈ ಗದ್ದಲವನ್ನು ಕೇಳಿಸಿಕೊಂಡ ಏಣಗಿ ಬಾಳಪ್ಪನವರು "ಏಯ್ ತಮ್ಮ ಆ ಹುಡುಗನ್ನ ಓಳಗ ಬಿಡ್ರಿ" ಎಂದರು. ಆಗ ಸಂಜೀವಪ್ಪ ಒಳಹೋಗಿ ಅವರಿಗೆ ನಮಸ್ಕರಿಸಿ. "ನಾನು ಸಂಜೀವಪ್ಪ ತಂದೆ ರಂಗಪ್ಪ ದಾಸರು ಗಬ್ಬೂರು" ಎಂದರು. "ನಿಮ ತಂದೆ ಏನ್ ಮಾಡ್ತಾರೆ" ಎಂದ ಏಣಗಿ ಬಾಳಪ್ಪನವರ ಮಾತಿಗೆ "ನಮ್ಮ ತಂದೆ ಬಯಲಾಟದಲ್ಲಿ ಹೆಣ್ಣು ಪಾತ್ರ ಮಾಡ್ತಾರೆ" ಎಂದರು. "ಓಹೋ ನೀನು ಬಯಲಾಟ ಕಲಾವಿದರ ಮಗನೋ ಸರಿ ಯಾಕೆ ಬಂದಿದ್ದು" ಎಂದರು.

ಆಗ ಸಂಜೀವಪ್ಪ "ನೀವು ನಾಟಕದಲ್ಲಿ ಸಿಂಹಾಸನದ ಮೇಲೆ ನಂದಿ ಉಂಗುರವನ್ನಿಟ್ಟು ಬೆಂಕಿ ಹೊತ್ತಿಸೋದು ಹೇಗೆ ಅಂತ ನನಗ ತಿಳೀತಿಲ್ಲ ಅದನ್ನ ನಾ ನೋಡಬೇಕು ಅದಕ್ಕೆ ಬಂದೆ" ಎಂದರು. "ಅದನ್ನು ನಾಟಕದೊಳಗೆ ನೋಡಿದ್ದಿಯಲ್ಲಪ್ಪ. ನಾಳೆ ನಾಟಕಕ್ಕೆ ಬಾ ಮತ್ತೆ ನೋಡು" ಎಂದರು. "ನಾನು ನಾಟಕ ನೋಡೀನಿ. ನಿಮ ಪಾತ್ರ ಅಂದ್ರೆ ಬಹಳ ಇಷ್ಟ. ನನಗೆ ಆ ಬೆಂಕಿ ಹೇಗೆ ಹತ್ತಿಕೊಳ್ಳುತ್ತದೆ ಅದನ್ನ ನೋಡಬೇಕು ತೋರಿಸಿರಿ" ಎಂದ. ಸಂಜೀವಪ್ಪನ ಮಾತಿಗೆ ಏಣಗಿ ಬಾಳಪ್ಪನವರು "ಆದ್ರೆ ಇಲ್ಲಿ ತೋರಿಸಾಕ ಬರೋದಿಲ್ಲ. ಅಲ್ಲದೆ ಅದನ್ನು ತೋರಿಸಬಾರದು ಕೂಡಾ, ಆದರೂ ನೀನು ಕುತೂಹಲದಿಂದ ಕೇಳ್ತಿದ್ದೀಯಾ ಅನ್ನೋ ಕಾರಣದಿಂದ ನಿನಗೆ ಆ ಬೆಂಕಿ ಹೇಗೆ ಹತ್ತಿಕೊಳ್ಳುತ್ತದೆ ಎಂದು ತೋರಿಸ್ತೀನಿ ಯಾರಿಗೂ ಹೇಳಬೇಡ" ಎಂದರು.

ಹೀಗೆ ಹೇಳಿದ ಏಣಗಿ ಬಾಳಪ್ಪನವರು, "ಸಿಂಹಾಸನದ ಮೇಲೆ ನಂದಿ ಉಂಗುರವನ್ನಿಟ್ಟರೆ ಬೆಂಕಿ ಹೊತ್ತಿಕೊಳ್ಳುವುದಿಲ್ಲ. ಮರಿ, ಅದು ಹೇಗೆಂದರೆ, ಈಗ

ನೋಡು ಸಿಂಹಾಸನದ ಮೇಲೆ ಉಂಗುರವನ್ನಿಟ್ಟಾಗ ರಂಗಭೂಮಿಯಲ್ಲಿ ಬೆಳಕು ಇರುವುದಿಲ್ಲ ಕತ್ತಲಾಗಿರುತ್ತದೆ. ಸಿಂಹಾಸನದ ಕೆಳಗೊಬ್ಬ ಕುಳಿತುಕೊಂಡು ಬೆಂಕಿಯನ್ನು ಹೊತ್ತಿಸುವ ಕಕ್ಕಡದಿಂದ ಜ್ವಾಲೆಯನ್ನು ಸಿಂಹಾಸನದ ಕೆಳಗಿನಿಂದ ಮೇಲಕ್ಕೆ ಬರುವಂತೆ ಹಿಡಿಯುತ್ತಾನೆ. ಸಿಂಹಾಸನದ ಮೇಲಿನ ಬದಿಯಲ್ಲಿ ನಂದಿ ಉಂಗುರ ಹಾಕಿದ ಕೂಡಲೆ ಬೆಂಕಿ ಹತ್ತಿಸುವಂತೆ ಸೂಚನೆ ನೀಡಲಾಗಿರುತ್ತದೆ. ಸಿಂಹಾಸನದ ಮೇಲೆ ಬೆಳಕು ಬಿದ್ದು ಸುಟ್ಟುಕೊಂಡ ಹಾಗೆ ಕಾಣುತ್ತದೆ. ಆದರೆ ಸುಡುವುದಿಲ್ಲ ಯಾಕೆಂದರೆ ಒಳಗಡೆ ತಗಡಿನಿಂದ ಮಾಡಿರುತ್ತಾರೆ. ಮತ್ತೆ ತಕ್ಷಣವೇ ದಪ್ಪನಾದ ರಬ್ಬರ್ ಟೈರ್‌ನಿಂದ ಮುಚ್ಚಿದಕೂಡಲೆ ಮತ್ತೆ ಬೆಂಕಿ ನಂದುತ್ತದೆ. ಪ್ರವೇಶ ಮುಗಿದು ಲೈಟ್ ಆಫ್ ಆದ ಕೂಡಲೆ ಡ್ರಾಪ್ ಬೀಳುತ್ತದೆ. ಏನೂ ಕಾಣಿಸುವುದಿಲ್ಲ. ಆದರೆ ಎದುರಿಗೆ ಕುಳಿತ ಪ್ರೇಕ್ಷಕರಿಗೆ ಮಾತ್ರ ಅದೊಂದು ಪವಾಡದಂತೆ ಕಾಣುತ್ತದೆ ಅಷ್ಟೆ. ಎಂದು ಆ ಪ್ರಯೋಗನ್ನು ತೋರಿಸಿ ಹರಸಿ ಕಳುಹಿಸಿದ್ದರು.

ಏಣಗಿ ಬಾಳಪ್ಪನವರ ನಟನೆ, ಆ ಗಾಂಭೀರ್ಯ, ಆ ಮಾತುಗಾರಿಕೆ ಬಾಲಕ ಸಂಜೀವಪ್ಪನ ಮೇಲೆ ಪ್ರಭಾವ ಬೀರಿದವು. ನಾನು ನಾಟಕದ ನಟನಾಗಬೇಕು ಎಂಬ ಗುರಿ ಇಟ್ಟುಕೊಂಡರು. ಅಂತೆಯೇ ಯಶಸ್ವಿಯಾದರು. ೧೯೭೦ರಲ್ಲಿ ಶಿವಮೊಗ್ಗದ ತೊಗರಿಸಿ ಕ್ಯಾಂಪ್‌ನಲ್ಲಿ ನಲವಡಿ ಶ್ರೀಕಂಠ ಶಾಸ್ತ್ರಿಗಳ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕ ನಡೆದಿತ್ತು. ಅದರಲ್ಲಿನ ಚಿತ್ತರಂಜನಿ ಪಾತ್ರವನ್ನು ಸಂಜೀವಪ್ಪ ಮಾಡಿದ್ದರು. ನಟನಾಗಲು ಪ್ರೇರಣೆಯಾಗಿದ್ದ ಅದೇ ಪ್ರಸಿದ್ಧ ನಟ ಏಣಗಿ ಬಾಳಪ್ಪನವರು ಅಂದು ರಂಗಭೂಮಿಯೊಳಗೆ ಕುಳಿತು ನೋಡುತ್ತಿದ್ದರು. ಸಂಜೀವಪ್ಪನವರ ಅಭಿನಯವನ್ನು ಮೆಚ್ಚಿ, ಏನು ಹೆಸರು ಯಾವೂರು ನಿನದು? ಎಂದು ಕೇಳಿದಾಗ ಗಬ್ಬೂರಿನ ಆ ಪ್ರಸಂಗವನ್ನು ನೆನಪಿಸಿದಾಗ ತುಂಬಾ ಸಂತೋಷಭರಿತರಾಗಿದ್ದರು. ಹಾಗೆಯೇ ಗಬ್ಬೂರಿನಲ್ಲಿ ರೆಹಮಾನವ್ವ ಕಲ್ಮನಿಯವರ 'ತಾಯಿಕರುಳು' ನಾಟಕದಲ್ಲಿನ ಆಕೆಯ ತಾಯಿ ಪಾತ್ರವೂ ಸಹ ಸಂಜೀವಪ್ಪನವರ ಮೇಲೆ ಪ್ರಭಾವ ಬೀರಿತು.

## ಗುರುವಿನ ಮಾರ್ಗದಲ್ಲಿ

ಓದಿನಲ್ಲಿ, ಹಾಡುವುದರಲ್ಲಿ, ತಾಳ ತಂಬೂರಿ ನುಡಿಸುವುದರಲ್ಲಿ ಜಾಣರಿದ್ದ ಸಂಜೀವಪ್ಪನನ್ನು ಅವರ ಹಿರಿಯರು ಹೆಚ್ಚಿನ ಅಭ್ಯಾಸಕ್ಕಾಗಿ ಸಿರಿವಾರದ ಹತ್ತಿರವಿರುವ ಹೀರಾದ ಹನುಮಂತಪ್ಪ ಗವಾಯಿಗಳ ಹತ್ತಿರ ಕಳುಹಿಸಲು ಯೋಚಿಸಿದರು. ಜೊತೆಗೆ ನಾರಾಯಣಪ್ಪನವರ ಮಗ ಶೇಷಪ್ಪನನ್ನು ಕಳುಹಿಸಲು ನಿರ್ಧರಿಸಿದರು. ಈ ವಿಷಯದಲ್ಲಿ ಹಿರಿಯರಾದ ತಿಮ್ಮಯ್ಯ ಮತ್ತು ನಾರಾಯಣಪ್ಪನವರು ಊರ ಹಿರಿಯರ ಸಹಕಾರ ಪಡೆದು ಇಬ್ಬರನ್ನು ಹೀರಾಕ್ಕೆ ಕಳುಹಿಸಿದರು. ಈ ಹೀರಾ

ಗ್ರಾಮವು ಸಂಜೀವಪ್ಪನನ್ನು ಗದುಗಿನ ಆಶ್ರಮಕ್ಕೆ ಸೇರುವಂತೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿರುವುದನ್ನು ನೆನೆಯಲೇಬೇಕು.

ಹೀರಾ ರಾಯಚೂರು ಜಿಲ್ಲೆಯಲ್ಲಿ ಸಿರಿವಾರದಿಂದ ಹಟ್ಟಿ ಚಿನ್ನದ ಗಣಿಗೆ ಹೋಗುವ ದಾರಿಯಲ್ಲಿರುವ ಒಂದು ಗ್ರಾಮ. ಅಲ್ಲಿ ಸಜ್ಜಲ ಗುಡ್ಡದ ಶರಣಮ್ಮನ ಪರಮ ಭಕ್ತರಾಗಿ, ಬಯಲಾಟ, ನಾಟಕ ನಿರ್ದೇಶಕರಾಗಿ ಹನುಮಂತಪ್ಪ ಮಾಸ್ತರ್ ಎಂಬುವವರಿದ್ದರು. ಇವರು ಈ ಭಾಗದಲ್ಲೆಲ್ಲಾ ನಾಟಕದ ಮಾಸ್ತರ್ ಎಂದೇ ಪ್ರಸಿದ್ಧಿಯಾಗಿದ್ದರು. ಹಾರ್ಮೋನಿಯಂ ನುಡಿಸುತ್ತಾ ಹಾಡುವುದರಲ್ಲಿ ಪರಿಣಿತರು.

ಹನುಮಂತಪ್ಪ ಮಾಸ್ತರ್ ರವರು ಮೊದಲು ತಮ್ಮ ತಂದೆ ರಾಮಣ್ಣ ದಾಸರ್‌ರವರಿಂದ ಬಯಲಾಟ, ಹಾಡುಗಾರಿಕೆ ಕಲಿತಿದ್ದರು. ನಂತರ ಪಂಚಾಕ್ಷರ ಗವಾಯಿಗಳ ಶಿಷ್ಯರಾದ ಹೊಗರನಾಳ ಪಂಪನಗೌಡರು ಗೆಳೆಯರಾಗಿ ಅವರಲ್ಲಿ ತಂಬೂರಿ ಗಾಯನವನ್ನು ಅಭ್ಯಾಸಿಸಿದರು. ಇವರ ಪಾಂಡಿತ್ಯ ಗಬ್ಬೂರಿನ ದಾಸ ಬಂಧುಗಳಿಗೂ ತಿಳಿದಿತ್ತು. ಹುಡುಗರು ನಮ್ಮ ಪಕ್ಕದಲ್ಲಿದ್ದು ಕಲಿಯುವುದಕ್ಕಿಂತ ದೂರದಲ್ಲಿದ್ದು ಕಲಿತರೆ ಒಳ್ಳೆಯದೆಂದು ಸಂಜೀವಪ್ಪ ಮತ್ತು ನಾರಾಯಣಪ್ಪನ ಮಗ ಶೇಷಪ್ಪನನ್ನು ಸಂಗೀತ ಕಲಿಯಲು ಹೀರಾದ ಹನುಮಂತಪ್ಪ ಮಾಸ್ತರ್‌ರವರ ಹತ್ತಿರಕ್ಕೆ ಕಳುಹಿಸಿದರು. ಸತತ ಎರಡು ವರ್ಷಗಳ ಕಾಲ ಹೀರಾದ ಹನುಮಂತಪ್ಪನವರ ಮನೆಯಲ್ಲಿಯೇ ಇದ್ದು ಸಂಗೀತಾಭ್ಯಾಸ ಕಲಿತರು.

ಒಂದು ಸಲ ಹನುಮಂತಪ್ಪ ಮಾಸ್ತರ್‌ರವರು ಕುರುಕುಂದಿಯಲ್ಲಿ ನಾಟಕ ಕಲಿಸುತ್ತಿರುವಾಗ ಕುರುಕುಂದಿಯ ಈಶ್ವರಪ್ಪ ಸಾಹುಕಾರರ ಮತ್ತು ವೇದಮೂರ್ತಿ ಗುರುಬಸಯ್ಯ ನವರ ಪರಿಚಯವಾಗಿತ್ತು. ಗುರುಬಸಯ್ಯನವರು ಪಂಚಾಕ್ಷರ ಗವಾಯಿಗಳ ನಾಟ್ಯ ಸಂಘದಲ್ಲಿ ಮೇಸ್ತ್ರಿ ಆಗಿದ್ದರು. ಕುರುಕುಂದಿಯಲ್ಲಿ ನಾಟಕ ಕಲಿಸುವಾಗ ಹನುಮಂತಪ್ಪ ಮಾಸ್ತರ್ ಜೊತೆ ಇರುವ ಈ ಇಬ್ಬರು ಮಕ್ಕಳನ್ನು ನೋಡಿದ್ದರು. ಅವರ ಬಗೆಗೆ ಕೇಳಿ ತಿಳಿದಿದ್ದರು. ಒಬ್ಬ ಹುಡುಗನ ಹೆಸರು ಸಂಜೀವಪ್ಪ ಈತ ಹನುಮಂತಪ್ಪನವರ ಅಣ್ಣನ ಮಗ. ಮತ್ತೊಬ್ಬ ಅವರ ಮಾವ ನಾರಾಯಣಪ್ಪನ ಮಗ ಎಂದು, ಸಂಗೀತ ಕಲಿಯಲು ಬಂದವರೆಂದು ಗೊತ್ತಾಗಿತ್ತು.

ಹನುಮಂತಪ್ಪನ ಶಿಷ್ಯರಾದ ಇಬ್ಬರು ಮಕ್ಕಳನ್ನು ಗಮನಿಸಿದ ಗುರುಬಸಯ್ಯ ನವರು "ಇಬ್ಬರನ್ನು ವೀರೇಶ್ವರ ಪುಣ್ಯಾಶ್ರಮಕ್ಕೆ ಕಳುಹಿಸಿರಿ. ಅಲ್ಲಿ ಪುಟ್ಟರಾಜ ಅಜ್ಜನವರು ಆಶ್ರಮದಲ್ಲಿ ಊಟ ವಸತಿ ಜೊತೆಗೆ ಸಂಗೀತವನ್ನು ದಾನ ಮಾಡ್ತಾರೆ, ಮಕ್ಕಳು ಅಲ್ಲಿ ಕಲಿತರೆ ಜಾಣರಾಗ್ತಾರೆ." ಎಂದು ಹನುಮಂತಪ್ಪನವರಿಗೆ ಸಲಹೆ ನೀಡಿದ್ದರು. ಇದನ್ನು ಮನದಲ್ಲಿಟ್ಟುಕೊಂಡು ಹನುಮಂತಪ್ಪ ಮಾಸ್ತರ್ ಎರಡು ವರ್ಷಕಾಲ ಸಂಗೀತ ಕಲಿಸಿದ ನಂತರ, ಗಬ್ಬೂರಿನ ಅವರ ಹಿರಿಯರನ್ನು ಕರೆಯಿಸಿ ಈ ಹುಡುಗರು ಎರಡು ವರ್ಷಗಳ ಕಾಲ ಇಲ್ಲಿ ಅಭ್ಯಾಸ ಮಾಡಿದ್ದಾರೆ. ಇನ್ನು ಮುಂದಿನ ಅಭ್ಯಾಸವನ್ನು ವೀರೇಶ್ವರ ಪುಣ್ಯಾಶ್ರಮ ಗದುಗಿನಲ್ಲಿ ಕಲಿಯಲಿ ಅಲ್ಲಿಗೆ ಈ ಮಕ್ಕಳನ್ನು ಕಳುಹಿಸಿರಿ ಎಂದು ಸಲಹೆ ನೀಡಿ ಗಬ್ಬೂರಿಗೆ ಕಳುಹಿಸಿದರು.

ಈ ಸಲಹೆ ಹೊತ್ತು ಗಬ್ಬೂರಿಗೆ ಬಂದು ಊರಿನ ಹಿರಿಯರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದಾಗ ಊರ ಹಿರಿಯರಾದ ನಾಗಯ್ಯ ತಾತನವರು, ಶಾಂತಮೂರ್ತಿ ತಾತ, ಎಲಿ ಬೂದೆಣ್ಣ ಸಾಹುಕಾರರು, ಗಣದಿನ್ನಿ ಚೆನ್ನಪ್ಪ ಗೌಡರು, ತಮ್ಮಣ್ಣಪ್ಪ ಗೌಡರು ಮುಂತಾದವರು ಒಪ್ಪಿದರು. ತಮ್ಮ ಊರಿನ ಕಲಾವಿದರಾದ ನಾರಾಯಣಪ್ಪ ತಿಮ್ಮಯ್ಯನಿಗೆ ಸಹಕರಿಸಿ ಸಂಜೀವಪ್ಪ ಮತ್ತು ಶೇಷಪ್ಪನನ್ನು ಹೀರಾದ ಹನುಮಂತಪ್ಪ ಮಾಸ್ತರ್ ಜೊತೆಗೆ ಸಜ್ಜೆ ರೊಟ್ಟಿ ಬುತ್ತಿ ಕಟ್ಟಿಕೊಟ್ಟು ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಕಳುಹಿಸುತ್ತಾರೆ.

## ಆಶ್ರಮದ ಮೊದಲ ಭೇಟಿ

ಗದುಗಿನ ವೀರೇಶ್ವರ ಪುಣ್ಯಾಶ್ರಮ ಅದು ಬರೀ ನೆಲವಲ್ಲ. ಅದೊಂದು ಪವಿತ್ರ ಭೂಮಿ. ಅಲ್ಲಿನ ಮಣ್ಣನ್ನು ಕಣ್ಣಿಗೊತ್ತಿಕೊಂಡರೆ ಅಲ್ಲಿ ನಡೆದಾಡಿದ ಆ ಮಹನೀಯರ ಆಶೀರ್ವಾದವಾಗುತ್ತದೆ ಎಂಬ ನಂಬಿಕೆ. ಯಾಕೆಂದರೆ ಅಲ್ಲಿ ನಡೆದಾಡಿದವರು ಕರ್ನಾಟಕದ ಜನ ಆರಾದಿಸುವ ಸಂಗೀತ ಸಂತರಾದ ಗಾನಯೋಗಿ ಪಂಡಿತ ಪಂಚಾಕ್ಷರ ಗವಾಯಿಗಳು ಮತ್ತು ಉಭಯ ಗಾಯನಚಾರ್ಯ ಪಂಡಿತ ಪುಟ್ಟರಾಜ ಕವಿ ಗವಾಯಿಗಳವರು. ಅಷ್ಟೇ ಅಲ್ಲ ಅವರಿಗೆ ಮಾರ್ಗದರ್ಶಕರಾದ ಹಾನಗಲ್ಲ ಕುಮಾರ ಶಿವಯೋಗಿಗಳು. ಅಂತಹ ಪುಣ್ಯ ಭೂಮಿ ಗದುಗಿಗೆ ೧೯೬೨ ರಲ್ಲಿ ಹನುಮಂತಪ್ಪ ಮಾಸ್ತರ್ ಜೊತೆ ಸಂಜೀವಪ್ಪ ಮತ್ತು ಅವರ ಗೆಳೆಯ ಶೇಷಪ್ಪ ಬಂದರು.

ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂಚಾಕ್ಷರಿ ಅಜ್ಜನವರ ಗದ್ದುಗೆಗೆ ಪೂಜೆ ಮಾಡಿಸಿದರು. ಆಶ್ರಮದ ಕಛೇರಿಯಲ್ಲಿ ಕಾರಕೂನರನ್ನು ಭೆಟ್ಟಿಯಾಗಲು ಹೋದರು. ಗಬ್ಬೂರಿನಿಂದ ದಾಸರ ಹುಡುಗರನ್ನು ಕರೆದುಕೊಂಡು ಬಂದೀವಿ ಎಂದು ಸುದ್ದಿ ಕಳಿಸಿದರು. ಈ ಮೂವರನ್ನು ಒಳಗೆ ಕರೆಯಲಾಯಿತು. ಹನುಮಂತಪ್ಪ ಮಾಸ್ತರ್‌ರವರು ಮ್ಯಾನೇಜರ್‌ರವರಿಗೆ ನಮಸ್ಕರಿಸಿ ಪರಿಚಯಿಸಿಕೊಂಡರು. "ನಾವು ಗಬ್ಬೂರಿನಿಂದ ಬಂದ ದಾಸರು. ನಾವು ಬಯಲಾಟ ಕಲಾವಿದರ ಮಕ್ಕಳು. ಸಂಗೀತ ಕಲಿಯಲು ತಮ್ಮ ಆಶ್ರಮದಲ್ಲಿ ಸೇರಿಸೋಣ ಎಂದು ಹುಡುಗರಿಬ್ಬರನ್ನು ಕರೆದುಕೊಂಡು ಬಂದೆ" ಎಂದರು. ಪುಟ್ಟರಾಜ ಅಜ್ಜನವರಿಗೆ ಈ ಸುದ್ದಿಯನ್ನು ಮುಟ್ಟಿಸಿದರು. ಆಗ ಮ್ಯಾನೇಜರ್‌ರವರು "ಆಯ್ತು ಈಗ ನಮ್ಮಲ್ಲಿ ನಲವತ್ತೊಂಬತ್ತು ವಿದ್ಯಾರ್ಥಿಗಳಿದ್ದಾರೆ. ನಿಮ್ಮಿಬ್ಬರನ್ನು ಕೂಡಾ ಸೇರಿಸ್ಕೋತೀವಿ. ಒಂದು ನೂರಾ ಐವತ್ತೊಂದು ರೂಪಾಯಿ ಕಾಣಿಕೆ ಕೊಟ್ಟು ಹೆಸರು ಬರಿಸಿರಿ. ಹುಡುಗರಿಗೆ ಬೇಕಾದ ಬಟ್ಟೆ, ಹಾಸಿಗಿ, ಒಂದು ಟ್ರಂಕು, ತಾಟು, ತಂಬಿಗೆ ಇನ್ನು ಏನೇನ್ ಬೇಕೋ ಕೊಡಿಸಿ ಬಿಟ್ಟು ಹೋಗ್ರಿ. ಆಶ್ರಮದಲ್ಲಿ ಹುಡುಗರ ಜೊತೆ ಸಂಗೀತ ಕಲೀಲಿ" ಎಂದರು. ಇಷ್ಟೆಲ್ಲಾ ತರಲು ಅವರಲ್ಲಿ ಹಣಕಾಸು ಇರಲಿಲ್ಲವಾಗಿ ಮತ್ತು ಇಷ್ಟೆಲ್ಲಾ

ಬೇಕಾಗ್ತದೆ ಎಂದು ಊಹಿಸಿರದ ಕಾರಣ ಅನುಕೂಲ ಮಾಡಿಕೊಂಡು ಬರುವೆವೆಂದು ಮ್ಯಾನೇಜರ್‌ರವರಿಗೆ ತಿಳಿಸಿ ಊರಿಗೆ ಮರಳಿದರು.

ಊರಿಗೆ ಮರಳಿದವರೇ ಎಲ್ಲರೂ ಕುಳಿತು ಮಾತಾಡಿದರು. ಆಶ್ರಮದ ಬಗೆಗೆ ತಿಳಿದುಕೊಂಡ ಹಿರಿಯರು ಅಲ್ಲಿ ನಮ್ಮ ಮಕ್ಕಳಿಬ್ಬರು ಕಲಿಯಲಿ ಎಂದುಕೊಂಡರು. ಹಣದ ಅಡಚಣೆ ಉಂಟಾಯಿತು. ಒಂದು ನೂರಾ ಐವತ್ತೊಂದು ರೂಪಾಯಿ ಆ ಕಾಲದಲ್ಲಿ ದೊಡ್ಡ ಮೊತ್ತ. ಹೇಗೆ ಹೊಂದಿಸುವುದು ಎಂಬ ಚಿಂತೆಯಾಯಿತು. ಸಂಜೀವಪ್ಪನ ತಂದೆ ರಂಗಪ್ಪನಿಗೆ ತನ್ನ ಕಾಲಿನ ಕಡಗ ನೆನಪಿಗೆ ಬಂದಿತು. ಬಾಲ್ಯದಲ್ಲಿ ತುರುಕಲದೊಡ್ಡಿಯಲ್ಲಿ ಇರುವಾಗ ಅಲ್ಲಿಗೆ ಹತ್ತಿರದ ಆಂಧ್ರ ಪ್ರದೇಶದ ಮೊಕ್ತಲ್ ಪಟ್ಟಣದಲ್ಲಿ ಬಯಲಾಟ ಮಾಡಿದ್ದರು. ತೆಲುಗಿನ 'ಕೃಷ್ಣ ಪಾರಿಜಾತ' ಬಯಲಾಟ ನಡೆದಿತ್ತು. ಸಂಜೀವಪ್ಪನ ತಂದೆ ರಂಗಪ್ಪ ಆ ಬಯಲಾಟದಲ್ಲಿ ಮೋಹಿನಿ ಪಾತ್ರ ಮಾಡಿದ್ದರು. ಬಯಲಾಟ ನಡೆದಾಗ ಅಲ್ಲಿಗೆ ಬಂದ ನಿಜಾಮರ ಆಡಳಿತಾಧಿಕಾರಿ ಮೋಹಿನಿ ಪಾತ್ರದ ನಟನೆಯನ್ನು ನೋಡಿ ಖುಷಿಯಿಂದ ಬೆಳ್ಳಿಕಡಗವನ್ನು ಬಹುಮಾನವಾಗಿ ನೀಡಿದ್ದರು. ಹಾಗೆ ಬಹಳ ದಿನಗಳಿಂದ ಕಡಗ ಕಾಲಲ್ಲಿ ಇತ್ತು. ಅಂದು ಅದು ಉಪಯೋಗಕ್ಕೆ ಬಂತು.

## ಅಜ್ಜನವರ ಮೊದಲ ಭೇಟಿ

ಮಗನಿಗಾಗಿ ತನ್ನ ಕಾಲಿನ ಬೆಳ್ಳಿಕಡಗ ಮಾರಿದರು. ಆದರೂ ಇನ್ನು ಸ್ವಲ್ಪ ಹಣ ಕಡಿಮೆ ಬಿತ್ತು. ಆಗ ಅತ್ತೆ ಯಂಕಮ್ಮ ಅಷ್ಟೊ ಇಷ್ಟೊ ಸವರಿಸಿ ಸಾಲ ಮಾಡಿ ಕಳಿಸಲು ಮತ್ತೆ ತಯ್ಯಾರಿ ಮಾಡಿದರು. ಹಾಗೆಯೇ ಶೇಷಪ್ಪನವರನ್ನು ಕರೆದುಕೊಂಡು ಮತ್ತೆ ಗದುಗಿಗೆ ಬಂದರು. ಮ್ಯಾನೇಜರ್‌ರವರನ್ನು ಭೇಟಿಯಾಗಿ ಕಾಣಿಕೆ ಕೊಟ್ಟು ಹೆಸರು ಬರೆಯಿಸಿದರು. ಆಗ ಮ್ಯಾನೇಜರರು ಪುಟ್ಟರಾಜ ಅಜ್ಜನವರನ್ನು ಭೆಟ್ಟಿಯಾಗಲು ಕಳಿಸಿದರು. ಅಷ್ಟೊತ್ತಿಗಾಗಲೆ ಅಜ್ಜನವರಿಗೆ ಸುದ್ದಿ ಮಟ್ಟಿಸಿದ್ದರು. ಮೂವರು ಒಳಹೋದ ಕೂಡಲೆ ಅಜ್ಜನವರಿಗೆ ವಂದಿಸಿ ತಮ್ಮ ಪರಿಚಯ ಮಾಡಿಕೊಂಡರು. "ಬಯಲಾಟ ಕಲಾವಿದರ ಮಕ್ಕಳಾ ನೀವು, ಬಹಳ ಸಂತೋಷ. ರಾಯಚೂರು ಕಡೆಯವರು ಬಹಳ ಗಟ್ಟಿ, ಮೊಗಲಾಯಿ ಜನ. ದಾಸರಂದರೆ ನಿಮ್ಮಲ್ಲಿ ಕಲಾದೇವಿ ಮನೆ ಮಾಡಿರ್ತಾಳ" ಎಂದು ಹೇಳಿ ಅಜ್ಜನವರು ಶೇಷಪ್ಪನನ್ನು ಹಾಡಿಸಿದರು.

ನಿಜಗುಣ ಶಿವಯೋಗಿಗಳ "ಶ್ರೀಗುರು ವಚನೋಪದೇಶವನಾಲಿಸಿ ದಾಗಳಹುದು ನರರಿಗೆ ಮುಕುತಿ" ಎಂಬ ಹಾಡು ಹಾಡಿ ಮುಗಿಸಿದಾಗ ಅಜ್ಜನವರು "ಶೇಷಪ್ಪ ಚಂದ ಹಾಡ್ತಾನ ಸಂಗೀತಗಾರ ಆಗ್ತಾನ. ಆರು ವರ್ಷ ಆಶ್ರಮದಲ್ಲಿದ್ದು ಸಂಗೀತ ಕಲಿಯಲಿ ಆಮೇಲೆ ನೋಡೋಣ" ಎಂದು ಹೇಳಿದರು. ಆಮೇಲೆ ಸಂಜೀವಪ್ಪನವರ ಸರದಿ ಬಂತು. ಆಗಲೇ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಳಿತಿದ್ದ

ಸಂಜೀವಪ್ಪ ಎಂದು ನಿಂತಾಗ ಗೆಜ್ಜೆ ಶಬ್ದವಾಯಿತು. ಅದೇನು ಗೆಜ್ಜೆ ಶಬ್ದ ಎನ್ನುವಷ್ಟರಲ್ಲಿ "ಹೆಣ್ಣು ಮಗಳ ಡ್ರೆಸ್ ಹಾಕ್ಯಾರ್ರಿ ಏನೋ ಡ್ಯಾನ್ಸ ಮಾಡ್ತಾನಂತ್ರಿ" ಅಂತ ಪಕ್ಕದಲ್ಲಿದ್ದವರು ಅಜ್ಜನವರಿಗೆ ಹೇಳಿದರು. "ಹೌದಾ ಡ್ಯಾನ್ಸ ಮಾಡ್ತಾನ ಮಾಡಲಿ" ಅಂತ ನಸುನಕ್ಕರು. ನೃತ್ಯವನ್ನು ಆರಂಭಿಸಿದ ಸಂಜೀವಪ್ಪ

"ತಿಟಿಕತಿ ಗದಿಗನ ಧಾ.. ತಿಟಿಕತಿ ಗದಿಗನ ಧಾ.. ತಿಟಿಕತಿ ಗದಿಗನ ಧಾ..
ಧಾ ಧಿನ್ ಧಿನ್ ಧಾ.. ಧಾ ಧಿನ್ ಧಿನ್ ಧಾ.. ಧಾ ಧಿನ್ ಧಿನ್ ಧಾ..
ಒಲ್ಲೆ ನಾನೊಲ್ಲೆ.. .. ಜೊತೆ..ಗಿರ..ಲೊಲ್ಲೆ
ಮೇಲೆ ಮೇಲೆಲ್ಲಾ ಬಾಯ್ಮಾತುಗಳೆಲ್ಲಾ
ಒಳಗೆ ಒಳಗೆಲ್ಲಾ ಒಳಿತಾದೊ ಇಲ್ಲ
ಹೋ.. ನಾನು ಸಹಿಸಿದ್ದು ಆ ಶಿವನೆ ಬಲ್ಲ"

ಎಂದು ಹಾಡುತ್ತಾ ಸಂಜೀವಪ್ಪನವರು ನೃತ್ಯ ಮುಗಿಸಿದಾಗ ಅಜ್ಜನವರು ಖುಷಿಯಾಗಿ "ಚಂದ ನೃತ್ಯ ಮಾಡ್ತಿ, ಆರು ತಿಂಗಳು ಸಂಗೀತ ಕಲಿ ಆಮೇಲೆ ನಾಟಕ ಕಂಪನಿಗೆ ಕಳಿಸ್ತೀನಿ. ಮಕ್ಕಳನ್ನು ಆಶ್ರಮದಲ್ಲಿ ಬಿಟ್ಟು ಊಟ ಮುಗಿಸಿಕೊಂಡು ಆರಾಮು ಹೋಗ್ರಿ. ಇನ್ನು ಮೇಲೆ ಅವು ನಮ್ಮ ಮಕ್ಕಳು" ಎಂದು ಹೇಳಿದರು. ಅಜ್ಜನವರಿಗೆ ವಂದಿಸಿ ಮಕ್ಕಳನ್ನು ಆಶ್ರಮದಲ್ಲಿ ಬಿಟ್ಟು ಹನುಮಂತಪ್ಪ ಮಾಸ್ಟರ್‌ರವರು ಊರಿಗೆ ಮರಳಿದರು.

ಆಶ್ರಮದಲ್ಲಿ ಇಬ್ಬರೂ ಸಂಗೀತ ಕಲಿಯುತ್ತಾ ಸಾಗಿರುವಾಗ ಆರು ತಿಂಗಳು ಮುಗಿದ ನಂತರ ಸಂಜೀವಪ್ಪನವರಿಗೆ ಅಜ್ಜನವರಿಂದ ಕರೆಬಂತು. ಸಂಗೀತ ಕಲಿಯುತ್ತಾ ಪಾತ್ರ ಮಾಡಲು ನಾಟಕ ಕಂಪನಿಗೆ ಹೋಗಬೇಕೆಂದು ಅದಕ್ಕೆ ತಯ್ಯಾರಿ ಮಾಡಿಕೊಳ್ಳಬೇಕೆಂದು ಹೇಳಿದರು. ಇದನು ಕೇಳಿ ಸಂಜೀವಪ್ಪನಿಗೆ ಒಂದೆಡೆ ಖುಷಿಯಾಯ್ತು. ಆಶ್ರಮ ಮತ್ತು ಗೆಳೆಯರ ಅಗಲುವಿಕೆ ನೆನೆಸಿಕೊಂಡು ಇನ್ನೊಂದೆಡೆ ದುಃಖವಾಯಿತು. ಸ್ನೇಹಿತ ಸಂಜೀವಪ್ಪ ನಾಟಕ ಕಂಪನಿಗೆ ಹೋಗ್ತಾನೆ ಎಂದು ತಿಳಿದ ಶೇಷಪ್ಪ ಅಳಲು ಶುರು ಮಾಡಿದರು. ಒಬ್ಬರಿಗೊಬ್ಬರು ಒಂದೇ ಊರಿನವರು ಮತ್ತು ಬಂಧುಗಳು ಇಷ್ಟು ದಿನ ಜೊತೆಗಿದ್ದು ಈಗ ಅಗಲಬೇಕೆಂದು ತಿಳಿದು ಗೆಳೆಯರಿಬ್ಬರೂ ದುಃಖಿಸುತ್ತಿರುವಾಗ ಆಶ್ರಮದ ಹುಡುಗರು ಸಮಾಧಾನ ಮಾಡಿದರು. ಅಜ್ಜನವರ ಮಾತಿನಂತೆ ಅವರ ದರ್ಶನ ಪಡೆದು, ಕಂಪನಿಯ ಮ್ಯಾನೇಜರರಿಗೆ ಬರೆದ ಪತ್ರದ ಜೊತೆ ಟ್ರಂಕು ಹೊತ್ತುಕೊಂಡು ಸಂಜೀವಪ್ಪ ದಾವಣಗೆರೆಗೆ ಹೊರಟರು.

## ಬದುಕಿಗೆ ಬಣ್ಣ ಹರಡಿದ ಗೆಜ್ಜೆ

ಗದುಗಿನಿಂದ ಬಸ್ ಹತ್ತಿಕೊಂಡು ಸಂಜೀವಪ್ಪ ಒಬ್ಬರೇ ದಾವಣಗೆರೆಗೆ ಬಂದಾಗ ಬೆಳಗಿನ ಐದುಗಂಟೆಯಾಗಿತ್ತು. ಬಸ್‌ಸ್ಟ್ಯಾಂಡಿನಲ್ಲಿಳಿದು "ಶ್ರೀಗುರು ಕುಮಾರೇಶ್ವರ ಕೃಪಾಪೋಷಿತ ಪಂಡಿತ ಪಂಚಾಕ್ಷರ ಗವಾಯಿಗಳವರ ನಾಟ್ಯ ಸಂಘ ಗದಗ" ಎಲ್ಲಿದೆ ಎಂದು ಕೇಳಿಕೊಂಡು ಹೋದರು. ಕಂಪನಿಯ ನಾಟಕ

ಮುಗಿದು ಮಲಗಿದ್ದುದರಿಂದ ಸ್ವಲ್ಪಹೊತ್ತು ಅಲ್ಲಿಯೇ ಕುಳಿತುಕೊಂಡರು. ಸಮಯ ಕಳೆದ ನಂತರ ಒಬ್ಬೊಬ್ಬರಾಗಿ ಏಳಲು ಆರಂಭಿಸಿದರು. ಅಜ್ಜನವರ ಆದೇಶ ಹೊತ್ತು ಬಂದ ವಿಷಯ ತಿಳಿಸಿದರು. ಮ್ಯಾನೇಜರ್‌ರವರಾದ ಶಿವಮೂರ್ತಿ ಸ್ವಾಮಿ ದೇವಗಿರಿಯವರು ಸಂಜೀವಪ್ಪನವರನ್ನು ಎಲ್ಲರಿಗೂ ಪರಿಚಯಿಸಿದರು.

ಸಂಜೀವಪ್ಪನವರು ತಂದಿದ್ದ ಅಜ್ಜನವರ ಪತ್ರವನ್ನು ನೋಡಿದ ನಾಟಕದ ಮ್ಯಾನೇಜರರಾದ ಶಿವಮೂರ್ತಿಸ್ವಾಮಿ ದೇವಗಿರಿಯವರು "ಆಯ್ತು ಇವತ್ತು ನಾಟಕದಲ್ಲಿ ಬಣ್ಣ ಹಚ್ಚಿಬಿಡು" ಎಂದು ಹೇಳಿದರು. ಅದೇದಿನ ಸಂಜೆ ಗರುಡ ಸದಾಶಿವರಾಯರ 'ಸತ್ಯ ಸಂಕಲ್ಪ' ನಾಟಕದಲ್ಲಿ ನೃತ್ಯ ಮಾಡುವುದರ ಮೂಲಕ ರಂಗಭೂಮಿ ಪ್ರವೇಶ ಮಾಡಿದರು. ಮೊದಲೇ ತೆಳುವಾದ ಶರೀರ ನಾಟಕದ ನೃತ್ಯ ಭಂಗಿಗಳಿಗೆ ಹೇಳಿ ಮಾಡಿಸಿದ ಮೈ ಮಾಟ ಸಂಜೀವಪ್ಪನವರದಾಗಿತ್ತು. ನಾಟಕದಲ್ಲಿ ಬಣ್ಣ ಹಚ್ಚಿಕೊಂಡು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನೃತ್ಯ ಮಾಡುತ್ತಿದ್ದರೆ ಕಟ್ಟಿದ ಆ ಗೆಜ್ಜೆಗಳು ರಂಗದ ಬೆಳಕಿನಲ್ಲಿ ಬಣ್ಣಬಣ್ಣದಲಿ ಮಿಂಚುತ್ತಿದ್ದರೆ ಸಂಜೀವಪ್ಪ ತನ್ನ ನೃತ್ಯದಿಂದ ಹೊಸ ಸಂಚಲನವನ್ನು ಸೃಷ್ಟಿಮಾಡಿದ್ದರು.

ಬಯಲಾಟದಲ್ಲಿ ಅನೇಕ ಪಾತ್ರ ಮಾಡಿದ ಅನುಭವವಿದ್ದುದರಿಂದ ರಂಗಭೂಮಿಯ ಮೊದಲ ಪ್ರವೇಶ ಯಶಸ್ವಿಯಾಯಿತು. ನಾಟಕ ಮುಗಿದ ನಂತರ ಸಂಜೀವಪ್ಪನನ್ನು ಎಲ್ಲರೂ ಹೊಗಳುತ್ತಿದ್ದರೆ ಸಂಜೀವಪ್ಪ ಮಾತ್ರ ತುಂಬಾ ಭಾವ ಪರವಶರಾಗಿ ಆನಂದವನ್ನು ಅನುಭವಿಸುತ್ತಿದ್ದರು. ಇದು ಅವರ ಬದುಕಿನಲಿ ಬಣ್ಣತುಂಬಿ ಮರೆಯದ ನೆನಪಾಗಿ ಉಳಿದಿದೆ. ನಾಟಕ ಕಂಪನಿಯ ವಾತಾವರಣಕ್ಕೆ ಬೇಗನೇ ಹೊಂದಿಕೊಂಡರು. ಸಂಗೀತವನ್ನು ಕಲಿಯುತ್ತಾ ನೃತ್ಯದ ಜೊತೆಗೆ ಬೇರೆ ಪಾತ್ರಗಳ ನಟನೆಯನ್ನು ಅಭ್ಯಾಸಿಸಿದರು.

## ಬಣ್ಣದ ಕೋಣೆಯಲಿ ಹೆಣ್ಣಾದ ಸಂಜೀವಪ್ಪ

ವೃತ್ತಿ ರಂಗಭೂಮಿಯನ್ನು ದೂರದಿಂದ ನೋಡಿದ ಅನುಭವವೂ ಇರದ ಸಂಜೀವಪ್ಪ ನಟಿಸಲು ಭಯಪಡಲಿಲ್ಲ. ಅಜ್ಜನವರ ಕೃಪೆ ನಮ್ಮ ಮೇಲಿದೆ ಎಂದು ನಂಬುತ್ತಾ ಒಂದು ಬಗೆಯ ಕ್ರಿಯಾಶಕ್ತಿಯನ್ನು ರೂಢಿಸಿಕೊಂಡಿದ್ದರು. ಆಶ್ರಮದಲ್ಲಿ ಅಷ್ಟೊಂದು ಕಲಿಯಲು ಮಕ್ಕಳಿದ್ದರೂ ನಮ್ಮನ್ನೇ ಆಯ್ಕೆ ಮಾಡಿ ಈ ಅವಕಾಶವನ್ನು ನೀಡಿದರಲ್ಲ ಎಂದು ಪುಳಕಿತರಾದರು. ನಾಟಕ ರಂಗಭೂಮಿಯ ಒಡನಾಟದಲ್ಲಿ ಪುಟ್ಟಜ್ಜನನ್ನು ಅತಿ ಹತ್ತಿರದಿಂದ ನೋಡುವ ಮಾತಾಡುವ ಸೇವೆಮಾಡುವ ಅವಕಾಶ ಸಿಕ್ಕಿತಲ್ಲ ಎಂದು ಖುಷಿಯಾದರು.

ಮೊದಮೊದಲು ನೃತ್ಯ ಮಾಡುತ್ತಿದ್ದ ಸಂಜೀವಪ್ಪ ಮೈಮಾಟವನ್ನು ರೂಪಿಸಿಕೊಂಡು ನಟನೆಗಾಗಿ ಸಿದ್ಧವಾದರು. ಮೊಟ್ಟಮೊದಲು ನಲವಡಿ

ಶ್ರೀಕಂಠಶಾಸ್ತ್ರಿಗಳ "ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ" ನಾಟಕದಲ್ಲಿ 'ಚೆಲುವಿ' ಪಾತ್ರದ ಮೂಲಕ ನಟಿಯಾಗಿ ನಟನೆಯನ್ನು ಆರಂಭಿಸಿದರು. ಪುಟ್ಟರಾಜ ಗುರುಗಳ "ಶಿವಶರಣೆ ಅಕ್ಕಮಹಾದೇವಿ" ನಾಟಕದ ಸಖಿ, ದಾಸಿಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿದರು. ಪುಟ್ಟರಾಜ ಗುರುಗಳ "ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು" ನಾಟಕದಲ್ಲಿ 'ಬೃಂಗಿ' ನಾಟ್ಯದ ಮೂಲಕ ಪ್ರೇಕ್ಷಕರ ಮನ ಸೆಳೆದರು.

ಬಾಲಕನಾಗಿ ಬಾಲೆಯಂತೆ ನರ್ತಿಸುತ್ತಾ ಚಿಕ್ಕಚಿಕ್ಕ ಪಾತ್ರ ಮಾಡುತ್ತಾ ಗುರುತಿಸಿಕೊಂಡು ಪುಟ್ಟರಾಜ ಗುರುಗಳ "ಶ್ರೀ ಕೃಷ್ಣ ಗಾರುಡಿ" ಯಲ್ಲಿ 'ದುರ್ಮತಿ' ಎಂಬ ಹಾಸ್ಯ ಪಾತ್ರವನ್ನು ನಿರ್ವಹಿಸಿದರು. ಹಾಗೆಯೇ "ಮಗನ ಪ್ರೇಮ" ನಾಟಕದಲ್ಲಿ 'ಶೆಠಾಣಿ' ಎಂಬ ಮಾರ್ವಾಡಿ ಹೆಣ್ಣಿನ ಪಾತ್ರದಲ್ಲಿ ಮಿಂಚಿದರು. ಪುಟ್ಟಜ್ಜನವರ "ಶಿವಶರಣೆ ನೆಲ್ಲೂರು ನಂಬೆಕ್ಕ" ನಾಟಕದಲ್ಲಿ ಖಳನಾಯಕನ ಪಾತ್ರದಲ್ಲಿಯೂ ಸಹ ಪ್ರೇಕ್ಷಕರ ಮನ ಸೆಳೆದು ಅಂತಹ ಪಾತ್ರಕ್ಕೂ ನಾನು ತಯ್ಯಾರ್ ಎಂಬ ಸಂದೇಶ ಸಾರಿದರು. "ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ" ನಾಟಕದಲ್ಲಿ ನಾಗಮ್ಮನಾಗಿ, ಮಾದೇವಿಯಾಗಿ, ಚಿತ್ತರಂಜನಿಯಾಗಿ, ಹಾಗೂ ಅಜ್ಜಿ ಪದ್ಮಮ್ಮನ ಪಾತ್ರವಾಗಿ ಬಹುಮುಖಿ ಪ್ರತಿಭೆಯನ್ನು ತೋರಿಸಿ ತಾವು ಒಬ್ಬ ಸಮರ್ಥ ನಟ ಎಂಬುದನ್ನು ಧೃಡೀಕರಿಸಿಕೊಳ್ಳುತ್ತಾರೆ. ಕಲಾಚತುರರಾದ ಸಂಜೀವಪ್ಪನವರು ಹಲವು ನಾಟಕಗಳಲ್ಲಿ ಹಲವು ವಿಧದ ಪಾತ್ರಗಳಲ್ಲಿ ಅಂದರೆ ನೃತ್ಯಗಾತಿಯಾಗಿ, ಸೇವಕನಾಗಿ, ನಟಿಯಾಗಿ, ಖಳನಟನಾಗಿ, ದಾಸಿಯಾಗಿ, ಸಖಿಯಾಗಿ, ಸಹನಟಿಯಾಗಿ ಹಾಗೂ ಅಮ್ಮ ಅಜ್ಜಿಯರ ಪಾತ್ರವಾಗಿಯೂ ತಮ್ಮ ಸೇವೆಯನ್ನು ನಾಟಕರಂಗಕ್ಕೆ ಅರ್ಪಿಸಿಕೊಂಡವರು.

ಯಾವುದೇ ಪಾತ್ರಗಳಿಗೆ ಕಟ್ಟುಬೀಳದೆ ಅಜ್ಜನವರು ಹೇಳಿದ ಎಲ್ಲ ಪಾತ್ರಗಳನ್ನು ತುಂಬು ಮನದಿಂದ ನಟಿಸುತ್ತಾರೆ. ಕಲೆ ಎಲ್ಲರನ್ನು ಕರೆಯುತ್ತದೆ ಆದರೆ ಕೆಲವರನ್ನು ಮಾತ್ರ ಅಪ್ಪಿಕೊಳ್ಳುತ್ತದೆ. ಅಂತೆಯೇ ಸಂಜೀವಪ್ಪನವರನ್ನು ಅದು ಅಪ್ಪಿಕೊಂಡಿದೆ. ನಾಟಕ ರಂಗಭೂಮಿಗೆ ತಮ್ಮನ್ನು ತಾವು ತೊಡಗಿಸಿಕೊಂಡು ಹಲವು ವಿಧದ ಪಾತ್ರಗಳನ್ನು ಮಾಡುತ್ತಾ ಕಲೆಗಾಗಿಯೇ ಜೀವನವನ್ನು ಮುಡಿಪಾಗಿಟ್ಟು ಸತತ ನಲವತ್ತು ವರ್ಷಗಳ ಕಾಲ ಬಣ್ಣಹಚ್ಚಿಕೊಂಡು ಬದುಕನ್ನು ಬಣ್ಣವನ್ನು ಮೀರಿನಿಂತ ಪಾತ್ರವಾಗಿ ಸಹೃದಯರನ್ನು ಪ್ರವೇಶಿಸುತ್ತಾರೆ. ಪಾತ್ರಕ್ಕೆ ಜೀವವಾಗಿ ಪಾತ್ರವೇ ತಾನಾಗಿ ಪ್ರೇಕ್ಷಕರನ್ನು ಗಳಿಸಿಕೊಂಡು ಅವರ ಮನವ ಗೆದ್ದವರು.

ಮುತ್ತಜ್ಜನಿಂದ ಹಿಡಿದು ಸಂಜೀವಪ್ಪನವರೆಗೆ ಅವರ ಮನೆತನ ಕಲೆಗಾಗಿಯೇ ಬಾಳಿ ಬದುಕಿದೆ. ಹೀಗಾಗಿ ಕಲೆಯ ಸಂಗವೊಂದನ್ನು ಬಿಟ್ಟರೆ, ಗಳಿಸಿದ್ದು ಮಾತ್ರ ಏನೂ ಇಲ್ಲ. ನಾಟಕ ರಂಗಭೂಮಿಗೆ ಬಂದಾಗಿನಿಂದ ನಿವೃತ್ತಿಯಾಗುವವರೆಗೂ ಬಣ್ಣ ಹಚ್ಚಿಕೊಂಡರು. ಹಲವಾರು ನಾಟಕಗಳು ನೂರಾರು ಪ್ರದರ್ಶನ ಕಂಡಿವೆ. ಆ ಎಲ್ಲ ಪ್ರಯೋಗಗಳಲ್ಲಿಯೂ ಅಭಿನಯಿಸಿರುವ ಸಂಜೀವಪ್ಪ ರಂಗಲೋಕದ ಅಪೂರ್ವ ರತ್ನ ಎಂದರೆ ತಪ್ಪಿಲ್ಲ. ಇಷ್ಟೆಲ್ಲಾ ಅನುಭವವನ್ನಿಟ್ಟುಕೊಂಡು ಕಾಲಕಾಲಕ್ಕೆ ತಕ್ಕಂತೆ ಪಾತ್ರಗಳನ್ನು ಬದಲಾಯಿಸಿ ಅವುಗಳನ್ನು ನಿರ್ವಹಿಸುತ್ತಿದ್ದರು. ಶಿವಶರಣೆ

ಅಕ್ಕಮಹಾದೇವಿ ಮತ್ತು ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ನಾಟಕಗಳು ಸಂಜೀವಪ್ಪನವರಿಗೆ ಜೀವನದುದ್ದಕ್ಕೂ ತೃಪ್ತಿ ನೀಡಿದ ನಾಟಕಗಳು. ಹಲವಾರು ಪ್ರಯೋಗಗಳ ಮೂಲಕ ಜನಮನವನ್ನು ಗೆದ್ದು ಆರ್ಥಿಕ ಸ್ಥಿತಿಯನ್ನು ಸುಧಾರಿಸಿದವು. ಆ ಎರಡು ನಾಟಕಗಳ ಯಶಸ್ಸಿಗಾಗಿ ಅವುಗಳ ಹೆಸರಿನಲ್ಲಿ ಈಗಲೂ ಎರಡು ಹೊಲಗಳಿವೆ. ಅವುಗಳನ್ನು 'ಅಕ್ಕಮಹಾದೇವಿ ಹೊಲ' ಮತ್ತು 'ಮಲ್ಲಮ್ಮನ ಹೊಲ' ಎಂದು ಕರೆಯುತ್ತಾರೆ.

ಒಂದೊಂದು ನಾಟಕಗಳಲ್ಲಿ ಎರಡೆರಡು ಪಾತ್ರಗಳು, ಒಂದೊಂದರಲ್ಲಿ ಮೂರುಮೂರು ಪಾತ್ರಗಳನ್ನು ಬಹು ಜಾಣ್ಮೆಯಿಂದ ನಟಿಸಿದ್ದಾರೆ. ಪಾತ್ರ ಮಾಡಬೇಕಾದ ನಟ ಅನಿವಾರ್ಯ ಕಾರಣಗಳಿಂದ ಅಲಭ್ಯರಾದಾಗ ತಕ್ಷಣದ ಸಂದರ್ಭವನ್ನರಿತು ಪಾತ್ರಗಳನ್ನು ನಿರ್ವಹಿಸಿದ್ದಾರೆ. ವೃತ್ತಿ ರಂಗಭೂಮಿಗಳಿಗೆ ಅಂತಹ ಸಂದರ್ಭಗಳು ಆಕಸ್ಮಿಕವಲ್ಲ ಅನಿವಾರ್ಯ. ಆ ತರಹದ ಸನ್ನಿವೇಶ ಎದುರಾಗಿ ರಂಗ ಪ್ರಯೋಗ ನಿಲ್ಲಬಾರದೆಂದು ಎಲ್ಲರೂ ಎಲ್ಲಾ ಪಾತ್ರಗಳನ್ನು ನಿರ್ವಹಿಸುವ ತರಬೇತಿಯನ್ನು ನಿರ್ದೇಶಕರು ನೀಡಿರುತ್ತಾರೆ. ಅಜ್ಜನ ಕಂಪನಿಯಲ್ಲಿ ನಟಿಸುವ ಪ್ರತಿಯೊಬ್ಬರೂ ನಟರೂ ಹೌದು ನಿರ್ದೇಶಕರೂ ಹೌದು. ಯಾಕೆಂದರೆ ಅದು ಅಂತಹ ರಂಗಭೂಮಿಯಾಗಿತ್ತು. ಅಂತಹ ರಂಗಭೂಮಿಯಲ್ಲಿ ಸಂಜೀವಪ್ಪ ನಟನಾಗಿ ಜನಿಸಿದರು.

ಅಜ್ಜನವರ ರಂಗಭೂಮಿಯ ಉದ್ದೇಶ ನಾಟಕದಿಂದ ಲಾಭ ಗಳಿಸುವುದಲ್ಲ, ಆ ಪ್ರದರ್ಶನದಿಂದ ಬಂದ ಹಣ ಅಂಧಅನಾಥ ಮಕ್ಕಳ ಊಟ, ಬಟ್ಟೆ ವಸತಿ, ಸಂಗೀತಕ್ಕಾಗಿ ಸೇರುತ್ತಿತ್ತು. ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಊರಿಗೆ ಆಗಮಿಸಿದ ಅಜ್ಜನವರ ನಾಟಕ ಕಂಪನಿಯನ್ನು ಆದರದಿಂದ ಸ್ವಾಗತಿಸಿ ಹಲವಾರು ಪ್ರದರ್ಶನಗಳನ್ನು, ಪ್ರಸಾದಗಳನ್ನು ನೀಡಿ ಜನ ಪ್ರೋತ್ಸಾಹಿಸಿ ಗೌರವಿಸಿದರು. ಅಜ್ಜನವರ ನಾಟಕ ಕಂಪನಿಯಲ್ಲಿ ಪಳಗಿದ ನಟ ಬೇರೆಯಾವುದೇ ಕಂಪನಿಯಲ್ಲಿ ಸುಲಭವಾಗಿ ನಟಿಸಬಲ್ಲ ಎಂಬ ನಂಬಿಕೆ. ಹಾಗಾಗಿ ದೊಡ್ಡ ದೊಡ್ಡ ನಟರು ಅಜ್ಜನವರ ರಂಗಭೂಮಿಯಲ್ಲಿ ನಟಿಸಿ ಹೆಸರಾಗಿದ್ದಾರೆ.

# ಸಂಜೀವಪ್ಪ ನಟಿಸಿದ ನಾಟಕಗಳು ಮತ್ತು ಪಾತ್ರಗಳು

**ಪಂ.ಪುಟ್ಟರಾಜ ಕವಿ ಗವಾಯಿಗಳು ವಿರಚಿತ ನಾಟಕಗಳಲ್ಲಿ ಬಣ್ಣಹಚ್ಚಿದ ಪಾತ್ರ**

| | |
|---|---|
| ಶಿವಯೋಗಿ ಸಿದ್ಧರಾಮೇಶ್ವರ | ಪಾರ್ವತಿ ಮತ್ತು ಮೋಹಿನಿ |
| ಶಿವಶರಣೆ ಅಕ್ಕಮಹಾದೇವಿ | ಸುಮತಿ, ಶಿವಬಸಮ್ಮ, ಸಖಿ, ದಾಸಿ, ಚೆನ್ನಬಸವ. |
| ಶಿವಶರಣೆ ನೆಲ್ಲೂರು ನೆಂಬೆಕ್ಕ | ದುಶ್ಶೀಲೆ, ಬೃಂಗಿಯ ನೃತ್ಯ. |
| ಸತಿ ಸುಖನ್ಯಾ | ರಾಣಿ, ಸಖಿ |
| ಜಗಜ್ಯೋತಿ ಬಸವೇಶ್ವರ | ನೀಲಮ್ಮ |
| ಮೋಳಿಗೆ ಮಾರಯ್ಯ | ಮಾಳಮ್ಮ |
| ಶ್ರೀಕೃಷ್ಣ ಗಾರುಡಿ | ಸತ್ಯಭಾಮ, ಮೋಹಿನಿ, ಸಖಿ |
| ಸವತಿ ಮತ್ಸರ | ಸಖಿ |
| ಮಗನ ಪ್ರೇಮ (ರತ್ನಾಹಾರ) | ಶೇಠಾಣಿ |
| ದೇವರ ದುಡ್ಡು | ದಾಸಿ |
| ಕೊಟ್ಟೂರು ಬಸವೇಶ್ವರ ಮಹಾತ್ಮೆ | ಬಸಮ್ಮ |

**ಗರುಡ ಸದಾಶಿವರಾಯರು ವಿರಚಿತ ನಾಟಕಗಳಲ್ಲಿ ಬಣ್ಣಹಚ್ಚಿದ ಪಾತ್ರ**

| | |
|---|---|
| ಸತ್ಯ ಸಂಕಲ್ಪ | ನೃತ್ಯ, ಬ್ರಾಹ್ಮಣನ ಹೆಂಡತಿ |

**ನಲವಡಿ ಶ್ರೀಕಂಠ ಶಾಸ್ತ್ರಿಗಳು ವಿರಚಿತ ನಾಟಕಗಳಲ್ಲಿ ಬಣ್ಣಹಚ್ಚಿದ ಪಾತ್ರ**

| | |
|---|---|
| ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ | ನಾಗಮ್ಮ, ಚಿತ್ತರಂಜನಿ, ಮಾದೇವಿ, ಚೆಲ್ವಿ, ಪದ್ಮಮ್ಮ, |

**ಮಾರುತೇಶ ಮಾಂಡ್ರೆ ವಿರಚಿತ ನಾಟಕಗಳಲ್ಲಿ ಬಣ್ಣಹಚ್ಚಿದ ಪಾತ್ರ**

| | |
|---|---|
| ಮಹಾಲಿಂಗೇಶ್ವರ ಮಹಾತ್ಮೆ | ಪಾರ್ವತಿ, ಶಿವಕ್ಕ. |
| ಕೊಪ್ಪಳದ ಶ್ರೀಗವಿಸಿದ್ಧೇಶ್ವರ ಮಹಾತ್ಮೆ | ಗುರು |
| ಕೋಡಿಕೊಪ್ಪದ ಹುಚ್ಚೀರೇಶ್ವರ ಮಹಾತ್ಮೆ | ಬಸಮ್ಮ (ಕುಷ್ಟರೊಗಿ) ಮತ್ತು ದೆವ್ವ |
| ಹಾನಗಲ್ಲ ಕುಮಾರೇಶ್ವರ ಮಹಾತ್ಮೆ | ತಾಯಿ |
| ತವರು ಮನೆ | ಬಂಗಾರಿ |

**ಹೆಚ್.ಎನ್. ಹೂಗಾರ ವಿರಚಿತ ನಾಟಕಗಳಲ್ಲಿ ಬಣ್ಣಹಚ್ಚಿದ ಪಾತ್ರ**

| | |
|---|---|
| ಕೊರವಂಜಿ | ಶಾಂತಾ |
| ಕೊಂಡುತಂದ ಗಂಡ | ಜಗದೀಶ್ವರಿ |
| ಆದವಾನಿ ಮಹಾಯೋಗಿ ಲಕ್ಷ್ಮಮ್ಮ ಮಹಾತ್ಮೆ | ಮಂಗಳಮ್ಮ |

**ಪಿ.ಬಿ.ದುತ್ತರಗಿ ವಿರಚಿತ ನಾಟಕಗಳಲ್ಲಿ ಬಣ್ಣಹಚ್ಚಿದ ಪಾತ್ರ**

| | |
|---|---|
| ಮಲಮಗಳು (ಮುದುಕನ ಮದುವೆ) | ಅಚ್ಚಮ್ಮ |
| ಸಂಪತ್ತಿಗೆ ಸವಾಲ್ | ಅತ್ತಿಗೆ |

**ಸಾಳುಂಕೆ ವಿರಚಿತ ನಾಟಕಗಳಲ್ಲಿ ಬಣ್ಣಹಚ್ಚಿದ ಪಾತ್ರ**

| | |
|---|---|
| ವರನೋಡಿ ಹೆಣ್ಣು ಕೊಡು | ಚಿನ್ನಮ್ಮ |
| ಬದುಕು ಬಂಗಾರವಾಯಿತು | ಕಸ್ತೂರಮ್ಮ |
| ನೀನೂ ಸಾಹುಕಾರನಾಗು | ನಾಯಕಿ |
| ಕಿವುಡ ಮಾಡಿದ ಕಿತಾಪತಿ | ಹಾಸ್ಯ |
| ಚನ್ನಪ್ಪ ಚನ್ನಗೌಡ | ರುದ್ರಮ್ಮ |
| ಕೈಲಾಗದ ಗಂಡ ಕೈಲಾಸ ಕಂಡ | ಹಾಸ್ಯ |

**ಎನ್.ಎಸ್.ಜೋಷಿ ವಿರಚಿತ ನಾಟಕಗಳಲ್ಲಿ ಬಣ್ಣಹಚ್ಚಿದ ಪಾತ್ರ**

| | |
|---|---|
| ರತ್ನ ಮಾಂಗಲ್ಯ (ಮಾಂಗಲ್ಯ ಭಾಗ್ಯ) | ಮಾಳಮ್ಮ |
| ಬಂಜೆತೊಟ್ಟಿಲು | ನಾಗರತ್ನಾ, ಮಾಲತಿ, ರೇಣುಕಮ್ಮ. |

**ಬ್ಯಾಳಿ ಬಸಲಿಂಗಪ್ಪ ಗದಗ ವಿರಚಿತ ನಾಟಕಗಳಲ್ಲಿ ಬಣ್ಣ ಹಚ್ಚಿದ ಪಾತ್ರ**

| | |
|---|---|
| ಶಿರೋಳದ ಸಿದ್ಧಲಿಂಗೇಶ್ವರ ಮಹಾತ್ಮೆ | ತಾಯಿ |

**ಶೆಲವಡಿ ಕೃಷ್ಣ ಮೂರ್ತಿ ವಿರಚಿತ ನಾಟಕಗಳಲ್ಲಿ ಬಣ್ಣ ಹಚ್ಚಿ ಪಾತ್ರ**

| | |
|---|---|
| ಕಡ್ಲಿಮಟ್ಟಿ ಕಾಶಿಬಾಯಿ | ಅತ್ತೆ |

**ಬಿ. ಆರ್. ಅರಿಷಿಣಗೋಡಿ ವಿರಚಿತ ನಾಟಕಗಳಲ್ಲಿ ಬಣ್ಣ ಹಚ್ಚಿದ ಪಾತ್ರ**

| | |
|---|---|
| ಇಲ್ಲಿಗೆ ಬಂತು ಸಂಗಯ್ಯಾ | ನಾಯಕಿ |
| ಬಸ್ ಕಂಡಕ್ಟರ್ (ಖಾನಾವಳಿ ಚೆನ್ನಿ) | ಚೆನ್ನಿ |

**ಬಿ.ವ್ಹಿ.ಈಶ ವಿರಚಿತ ನಾಟಕಗಳಲ್ಲಿ ಬಣ್ಣ ಹಚ್ಚಿದ ಪಾತ್ರಗಳು**
ಗೌಡರ ಗದ್ಲ                                        ಮಂಗಳಾ

**ಹೆಚ್.ಎಸ್. ತಾರನಾಳ ವಿರಚಿತ ನಾಟಕಗಳಲ್ಲಿ ಬಣ್ಣ ಹಚ್ಚಿದ ಪಾತ್ರಗಳು**
ಬಸ್ ಹಮಾಲ                                        ಸರಳ

**ಪ್ರೊ. ಮಲ್ಲಿಕಾರ್ಜುನ ಸಿಂಧಗಿ ವಿರಚಿತ ನಾಟಕಗಳಲ್ಲಿ ಬಣ್ಣ ಹಚ್ಚಿದ ಪಾತ್ರಗಳು**
ಶಿಶುನಾಳ ಷರೀಪ ಶಿವಯೋಗಿ ಮಹಾತ್ಮೆ          ತಾಯಿ, ಲಕ್ಷ್ಮಿ

**ಮಹಾದೇವಿ ಕವಿಗಳು ವಿರಚಿತ ನಾಟಕಗಳಲ್ಲಿ ಬಣ್ಣ ಹಚ್ಚಿದ ಪಾತ್ರಗಳು**
ನರಗುಂದ ಪತ್ರಿವನ ಮಹಾತ್ಮೆ                          ಹಾಸ್ಯ

## ಸಂಜೀವಪ್ಪನ ನೆನಪಿಂದ ಜಾರದ ಚಿತ್ರಗಳು

ಆಗಿನ ಕಾಲದಲ್ಲಿ ನಾಟಕ ಕಂಪನಿಗಳಿಗೆ ಹೆಸರು ತಂದು ಕೊಟ್ಟಿದ್ದು ಹೆಸರಾಂತ ನಟರು. ನಾಟಕ ರಂಗಭೂಮಿಯಿಂದ ಹೋಗಿ ಸಿನಿಮಾಗಳಲ್ಲಿ ನಟಿಸುತ್ತಿದ್ದ ಹಲವರು ರಂಗಭೂಮಿಯನ್ನು ಮರೆತಿರಲಿಲ್ಲ. ಆಗಾಗ ಹವ್ಯಾಸಕ್ಕೋಸ್ಕರ ಬಂದು ನಟಿಸುತ್ತಿದ್ದರು. ಹಾಗೆಯೇ ಅದು ನಮಗೆ ಬದುಕು ಕೊಟ್ಟದ್ದು ಎನ್ನುವ ಕಾರಣಕ್ಕೆ ಬಂದು ಕೆಲ ಪಾತ್ರಗಳನ್ನು ನಿರ್ವಹಿಸುವುದರ ಮೂಲಕ ಆ ಕಂಪನಿಗಳಿಗೆ ಆರ್ಥಿಕವಾಗಿ ಶಕ್ತಿಯನ್ನು ತುಂಬುತ್ತಿದ್ದರು. ಆ ದಿನ ನಡೆಯುವ ಪ್ರದರ್ಶನಕ್ಕೆ ಯಾರೋ ವಿಶೇಷ ನಟನೊಬ್ಬ, ಅಥವಾ ಸಿನಿಮಾ ನಟನೊಬ್ಬ ಬರುತ್ತಿದ್ದಾನೆಂದರೆ ಜನ ನಾಟಕವನ್ನು ನೋಡಲು ತುಂಬಿ ಬರುತ್ತಿದ್ದರು. ಅಂತೆಯೇ ಕಂಪನಿಯ ಮಾಲೀಕರು ಸಹ ಅಂತಹ ಪ್ರಸಿದ್ಧ ನಟರನ್ನು ಕರೆಸಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡ ಪ್ರಸಂಗಗಳೂ ಇವೆ. ಅಂತೆಯೇ ಅಜ್ಜನವರ ಕಂಪನಿ ಸೇರಿರುವ ಕಲಾವಿದರು ಕಲೆಯನ್ನು ಮೆಚ್ಚಿಕೊಂಡು ಬಂದವರು. ಹಣ ಗಳಿಸಬೇಕೆಂಬ ಉದ್ದೇಶ ಹೊಂದಿದವರಲ್ಲ ಎಂಬುದು ಅಷ್ಟೇ ಮುಖ್ಯ. ಹಾಗಾಗಿ ಪವಿತ್ರ ರಂಗಭೂಮಿಯಾಗಿ ಉಳಿದಿದೆ.

## ಮಹನೀಯರು ಬಿತ್ತಿದ ಹಾದಿ

ನಾಟಕದ ಕಂಪನಿ ದಾವಣಗೆರೆಯಲ್ಲಿರುವಾಗ ಪದ್ಮಭೂಷಣ ಡಾ. ರಾಜ ಕುಮಾರ್‌ರವರು ಬಂದಿದ್ದರು. ನಾಟಕ ಕಂಪನಿ, ಪಾತ್ರಧಾರಿಗಳ, ಶಿಸ್ತನ್ನು ನೋಡಿ ರಂಗಭೂಮಿ ಮೇಲೆ ಉರುಳಾಡಿ ಗುಬ್ಬಿ ವೀರಣ್ಣನವರ ಕಂಪನಿ ನೋಡಿದಷ್ಟೇ ಆನಂದವಾಯಿತು ಎಂದರು. ರಂಗಭೂಮಿಯಲ್ಲಿ ಅನಿವಾರ್ಯ ಮತ್ತು ನೈಸರ್ಗಿಕ

ಕಾರಣಗಳಿಂದಾಗಿ ಹೆಣ್ಣು ಮಕ್ಕಳು ನಟಿಸದ ಸಂದರ್ಭಗಳು ಅನಾನುಕೂಲಗಳನ್ನು ಸೃಷ್ಟಿಸಿವೆ. ಆದರೆ ಹೆಣ್ಣು ಮಕ್ಕಳು ನಟಿಸದ ಈ ರಂಗಭೂಮಿ ಮುಟ್ಟೇ ಇಲ್ಲದ ಪವಿತ್ರ ರಂಗಭೂಮಿ ಎಂದಾಗ ಚಪ್ಪಾಳೆ ಮುಗಿಲು ಮುಟ್ಟಿತ್ತು. ಅನ್ನ ಕೊಟ್ಟ ಮನೆಯನ್ನು ನೆನೆವ ಪರಿ ಮಹಾನ್ ನಟರಿಂದ ಕಲಿಯಬೇಕಾದುದು ಇಂದಿನ ಪೀಳಿಗೆಯವರಿಗೆ ಇರಬೇಕಾದ ಶಿಸ್ತು ಎಂದೆನಿಸುತ್ತದೆ. ಒಂದು ಸಲ ಭಾರತದ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಆಶ್ರಮಕ್ಕೆ ಬಂದು ಅಂಧರಾಗಿದ್ದುಕೊಂಡು ಬಸವ ಪುರಾಣವನ್ನು ಬರೆದ ಅಜ್ಜನವರಿಗೆ ಅದನ್ನು ನೆನೆಸುತ್ತಾ ಸಾಷ್ಟಾಂಗ ನಮಸ್ಕಾರ ಮಾಡಿದ್ದು ಸಹ ಸ್ಮರಣೀಯ ಘಟನೆ. ಖ್ಯಾತ ಶಹನಾಯಿ ವಾದಕ ಬಿಸ್ಮಿಲ್ಲಾಖಾನ್‌ರವರು ಗದುಗಿನ ಆಶ್ರಮಕ್ಕೆ ಬಂದು ಪುಟ್ಟರಾಜ ಅಜ್ಜನವರನ್ನು ಅಪ್ಪಿಕೊಂಡದ್ದು ಸಹ ಸ್ಮರಣೀಯವಾದುದು. ಬಾಗಲಕೋಟೆ ಯಲ್ಲಿರುವಾಗ ಪ್ರಸಿದ್ಧ ಸಾಹಿತಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಗಿರೀಶ ಕಾರ್ನಾಡರವರು ತಮ್ಮದೇ ತಂಡದೊಂದಿಗೆ ಬಂದು ನಾಟಕವನ್ನು ಪ್ರದರ್ಶಿಸಿದ್ದರು. ಒಂದೇ ಎರಡೆ ಹೇಳುತ್ತಾ ಹೋದರೆ ಹಲವಾರು ಘಟನೆಗಳನ್ನು, ಸಂಗತಿಗಳನ್ನು, ವ್ಯಕ್ತಿಗಳನ್ನು ಕಂಡು ಸಂಜೀವಪ್ಪನವರು ಪ್ರಭಾವಿತರಾದರು. ಪರಿಣಾಮವಾಗಿ ಅಜ್ಜನ ಸಾನಿಧ್ಯದಲ್ಲಿ ಸಾತ್ವಿಕ ಗುಣಗಳನ್ನು ಮೈಗೂಡಿಸಿಕೊಂಡು ರಂಗದೊಡಲಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳುತ್ತಾ ನಡೆದರು.

## ರಾಜಕುಮಾರ ರಂಗಭೂಮಿಗೆ ಬಂದ ದಿನ

ಅದೇತಾನೆ ನಾಟಕ ಕಂಪನಿ ಸೇರಿದ ಸಂಜೀವಪ್ಪನವರಿಗೆ ಮರೆಯಲಾರದ ಒಂದು ಘಟನೆ ನಡೆಯಿತು. ೧೯೬೭ರಲ್ಲಿ ದಾವಣಗೆರೆ ಕ್ಯಾಂಪ್‌ನಲ್ಲಿರುವಾಗ ನಾಟಕ ಪ್ರದರ್ಶನಕ್ಕೆ ಕನ್ನಡದ ವರನಟ, ಪದ್ಮಭೂಷಣ ಡಾ.ರಾಜಕುಮಾರ್‌ರವರು ಬಂದಿದ್ದರು. ಡಾ. ರಾಜಕುಮಾರ್ ಅವರಿಗೆ ವೀರೇಶ್ವರ ಪುಣ್ಯಾಶ್ರಮ ಮತ್ತು ಪುಟ್ಟರಾಜ ಗುರುಗಳೆಂದರೆ ಅಪಾರ ಭಕ್ತಿ ಇತ್ತು. ಆ ಸಂದರ್ಭದಲ್ಲಿ ಸಂಜೀವಪ್ಪ ನಾಟಕದಲ್ಲಿ ಡ್ಯಾನ್ಸ ಮಾಡುತ್ತಿದ್ದರು. ಅದೇ ತಾನೆ ನೃತ್ಯ ಮುಗಿಸಿ ಹೊರಬಂದು ಗ್ರೀನ್‌ರೂಮಿನಲ್ಲಿದ್ದಾಗ ಹತ್ತಿರ ಬಂದ ರಾಜಕುಮಾರ್‌ರವರು ಮೈದಡವಿ ಬೆನ್ನು ತಟ್ಟುತ್ತಾ 'ಏಯ್ ಮರಿ ಏನ್ ನಿನ್ನ ಹೆಸರು' ಎಂದಾಗ ಸಂಜೀವಪ್ಪನಿಗೆ ಆದ ಆನಂದ ಅಷ್ಟಿಷ್ಟಲ್ಲ. ತಕ್ಷಣವೇ ಕಾಲಿಗೆರಗಿ ನಮಸ್ಕಾರ ಮಾಡಿದಾಗ 'ಮರೀ ನೀ ಇಲ್ಲೇ ಇರು, ಒಳ್ಳೇ ಕಲಾವಿದ ಆಗ್ತಿ' ಎಂದು ಹೇಳಿದರಂತೆ. ಅತಿ ಹತ್ತಿರದಿಂದ ರಾಜಕುಮಾರ್‌ರವರನ್ನು ನೋಡಿದ ಸಂಜೀವಪ್ಪನವರು ಗುಬ್ಬಿ ವೀರಣ್ಣನವರನ್ನು ನೋಡಿದಷ್ಟು ಸಂತೋಷವಾಯಿತು ಎಂದು ಭಾವುಕರಾಗುತ್ತಾರೆ.

## ಪಾಂಡುರಂಗಾ ಎಂದ ಫಂಡರಿಬಾಯಿ

೧೯೬೩ರಲ್ಲಿ ನಾಟಕ ಕಂಪನಿಯ ಪ್ರದರ್ಶನ ಹುಬ್ಬಳ್ಳಿಯಲ್ಲಿ ನಡೆದಿದ್ದಾಗ ಫಂಡರಿಬಾಯಿಯವರು ನಾಟಕಕ್ಕೆ ಬಂದಿದ್ದರು. 'ಅಕ್ಕಮಹಾದೇವಿ' ನಾಟಕವನ್ನು ನೋಡಿ ಆನಂದದಿಂದ 'ಪಾತ್ರ ಮಾಡಿದವರೆಲ್ಲರೂ ಪುರುಷರಾ ನಂಬಲಾಗ್ತಿಲ್ಲ ನನಗೆ' ಎಂದಾಗ ಆಗ ಸಂಜೀವಪ್ಪನವರು ಜಂಪರ್ ಬಿಚ್ಚಿ ಚೆಂಡು ಕೊಟ್ಟಾಗ 'ಪಾಂಡುರಂಗಾ ಪಾಂಡುರಂಗಾ ಶ್ರೀಹರಿ ನೀನು ಪುರುಷನಾ ಮರಿ' ಎಂದ ಆಕೆಯ ಮಾತಿಗೆ ಸಂಜೀವಪ್ಪ ಹೌದೆಂದಾಗ 'ನೀವೆಲ್ಲಾ ತಮ್ಮನವರಾ' ಎಂದು ಉದ್ಧರಿಸುತ್ತಾ ಹರ್ಷ ಮತ್ತು ಆಶ್ಚರ್ಯ ವ್ಯಕ್ತಪಡಿಸಿದರಂತೆ. ಈ ಪ್ರಸಂಗದಿಂದ ಅಜ್ಜನವರ ನಾಟಕದ ಕಲಾವಿದರು ಕಲೆಯಲ್ಲಿ ಎಷ್ಟು ಪಳಗಿರಬೇಕು ಎಂಬುದನ್ನು ತಿಳಿಸುತ್ತದೆ. ಒಬ್ಬ ಶ್ರೇಷ್ಠ ನಟಿಗೂ ಅನುಮಾನ ಬರದ ಹಾಗೆ ಸ್ತ್ರೀ ಪಾತ್ರಗಳನ್ನು ನಟಿಸಬಲ್ಲ ಚಾಣ್ಮೆ ಆ ಕಂಪನಿಯ ನಟರಿಗಿತ್ತೆಂಬುದು ತಿಳಿಯುತ್ತದೆ. ಎಲ್ಲಾ ಸ್ತ್ರೀ ಪಾತ್ರಗಳಿಗೆ ಯುವತಿ, ಗೃಹಿಣಿ, ಸಖಿ, ದಾಸಿ, ಮುದುಕಿ ಹೀಗೆ ಹತ್ತಾರು ವೈವಿಧ್ಯಮಯ ಪಾತ್ರಗಳಿಗೆ ಜೀವ ತುಂಬಿ ನಟಿಸುವ ಶಕ್ತಿ ಕಲಾವಿದ ಸಂಜೀವಪ್ಪನವರಿಗೆ ಇತ್ತು.

## ಪ್ರಸಿದ್ಧ ನಟರ ಜೊತೆ ಪಾತ್ರ

೧೯೬೭ರಲ್ಲಿ ನಾಟಕದ ಕ್ಯಾಂಪ್ ದೇವದುರ್ಗದಲ್ಲಿದ್ದಾಗ ಖ್ಯಾತ ಸಿನಿಮಾನಟ ಕೆ.ಎಸ್.ಅಶ್ವಥ್ ರವರು ನಾಲ್ಕುದಿನಗಳ ಕಾಲ ಅಜ್ಜನವರ ನಾಟಕದಲ್ಲಿ ಸಂಜೀವಪ್ಪನವರ ಜೊತೆ ಪಾತ್ರ ಮಾಡಿದ್ದರು. 'ಬಂಜೆತೊಟ್ಟಿಲು' ನಾಟಕದಲ್ಲಿ 'ಬಲವಂತಪ್ಪ'ನಾಗಿ ಅಶ್ವಥ್‌ರವರು, ಮತ್ತು 'ನರ್ಸ ನಾಗರತ್ನ' ಪಾತ್ರದಲ್ಲಿ ಸಂಜೀವಪ್ಪನವರು ನಟಿಸಿದ್ದರು. ಆ ಸಂದರ್ಭದಲ್ಲಿ ಸಂಜೀವಪ್ಪನವರ ನಟನೆಯನ್ನು ಕಂಡ ಅವರು "ಏ ತಮ್ಮಾ ನೀನು ಸಿನಿಮಾಕ್ಕೆ ಬಂದು ಬಿಡು, ಅಲ್ಲಿ ನಿನ್ನ ಅವಶ್ಯಕತೆ ಇದೆ." ಎಂದರಂತೆ ಅದಕ್ಕೆ ಸಂಜೀವಪ್ಪನವರು ನಗುವೇ ಉತ್ತರವಾಗಿತ್ತು. ಧೀರೇಂದ್ರ ಗೋಪಾಲರು 'ಮಲಮಗಳು' ನಾಟಕದಲ್ಲಿ ಅಭಿನಯಿಸಿದ್ದರು. ಆ ನಾಟಕದಲ್ಲಿ ಧೀರೇಂದ್ರ ಗೋಪಾಲರು 'ಸಾಹುಕಾರ ರಂಗಣ್ಣ'ನಾಗಿ ಸಂಜೀವಪ್ಪ 'ಅಚ್ಚಮ್ಮ'ನಾಗಿ ಸತತ ಹತ್ತರಿಂದ ಹನ್ನೆರಡು ವರ್ಷಗಳವರೆಗೆ ಅಭಿನಯಿಸಿದ್ದರು. ಕಂಪನಿ ರಾಯಚೂರಿನಲ್ಲಿದ್ದಾಗ ಪ್ರಸಿದ್ಧ ನಟ ರಾಮರಾವ್ ದೇಸಾಯಿ ರವರು 'ಗೌಡ್ರಗದ್ಲ' ನಾಟಕದಲ್ಲಿ ಗೌಡನ ಪಾತ್ರವಾಗಿ, ಸಂಜೀವಪ್ಪನವರು ಕೊಟ್ರಪ್ಪ ಮಾಸ್ತರರ ಮಗಳು 'ಮಂಗಳಾ' ನ ಪಾತ್ರ ಮಾಡಿದ್ದರು.

ಬಿಜಾಪುರದ ಗೋಳಸಂಗಿಯಲ್ಲಿ 'ಮಲಮಗಳು' ನಾಟಕದಲ್ಲಿ ಕವಿ ಪಿ.ಬಿ.ದುತ್ತರಗಿಯವರ ಜೊತೆ ನಟಿಸಿದ್ದರು. ದುತ್ತರಗಿಯವರು 'ರಾಜೀವ'ಪ್ಪನ

ಪಾತ್ರದಲ್ಲಿದ್ದರೆ ಸಂಜೀವಪ್ಪನವರು 'ಅಚ್ಚಮ್ಮ'ನಾಗಿ ವಿಶೇಷ ಹಾಸ್ಯಪಾತ್ರದಲ್ಲಿ ಎಲ್ಲರನ್ನು ನಗಿಸಿ ಗಮನ ಸೆಳೆಯುತ್ತಿದ್ದರು. ಅಂತೆಯೇ ದುತ್ತರಗಿಯವರ ಮೆಚ್ಚುಗೆಗೂ ಪಾತ್ರರಾಗಿದ್ದರು. ಅಂತೆಯೇ ಅಂದು ಅಥಿತಿಗಳಾಗಿದ್ದ ಡಾ.ಬರಗೂರು ರಾಮಚಂದ್ರಪ್ಪನವರಿಂದ ಸನ್ಮಾನಿಸಿಕೊಂಡಿದ್ದರು. ಖ್ಯಾತ ಸಿನಿಮಾನಟರಾದ ಸುಧೀರ್, ಬಿ.ಹನುಮಂತಾಚಾರ್, ಶೈಲಶ್ರೀ, ಸುದರ್ಶನ, ಹೀಗೆ ಹೆಸರಾಂತ ಕಲಾವಿದರ ಆಗಮನ ಆಗಾಗ ಇರುತ್ತಿತ್ತು. ಬಂದವರೆಲ್ಲರೂ ಅಭಿನಯಿಸುತ್ತಿದ್ದರು. ಅವರ ಜೊತೆಗೆಲ್ಲಾ ಅಭಿನಯಿಸಿದ ಅನುಭವ ಸಂಜೀವಪ್ಪನವರದ್ದಾಗಿದೆ.

ಎಷ್ಟೋ ನಾಟಕಗಳು ನೂರಾರು ಪ್ರಯೋಗಗಳನ್ನು ಕಂಡಿವೆ. ಆ ಸಂದರ್ಭದಲ್ಲಿ ಖ್ಯಾತನಾಮರ ಆಗಮನವಾಗಿದೆ. ೨೦೦೫ರಲ್ಲಿ ಕುದುರೆಮೋತಿ ಮಂಗಳೂರಿನಲ್ಲಿ ಪುಟ್ಟರಾಜ ಗುರುಗಳ 'ಶ್ರಿ ಶಿವಶರಣೆ ಅಕ್ಕಮಹಾದೇವಿ' ನಾಟಕದ ೧೦೦ನೇ ಪ್ರಯೋಗಕ್ಕೆ ಜೂನಿಯರ್ ರಾಜಕುಮಾರ್ ಬಂದಿದ್ದರು. ಅವರೆಲ್ಲಾ ನಾಟಕದಲ್ಲಿ ಪಾತ್ರ ಮಾಡಿ ಹೊಟ್ಟೆ ಹೊರೆಯಲು ಬಂದವರಲ್ಲ. ಯಾಕೆಂದರೆ ಅವರೆಲ್ಲಾ ಶ್ರೇಷ್ಠ ನಟರು. ಅವರು ಅಜ್ಜನವರ ನಾಟಕ ಕಂಪನಿಯಲ್ಲಿ ನಟಿಸಿದರೆ ಆಶ್ರೀರ್ವಾದವಾಗುತ್ತದೆ ಎಂಬ ರೂಪದಲ್ಲಿ ಬಂದು ನಟಿಸಿ ತಮ್ಮ ಸೇವೆಯನ್ನು ಮಾಡಿ ಅಂಧ ಅನಾಥರಿಗೆ ನಡೆಸಿದ ಸೇವೆ ಎಂಬಂತೆ ತೃಪ್ತಿಯಿಂದ ಬಂದು ಹೋಗುತ್ತಿದ್ದರು. ಹಾಗೆ ನಟಿಸಲು ಬಂದ ಆ ಪ್ರಸಿದ್ಧ ಕಲಾವಿದರಿಗೆ ಅಜ್ಜನವರ ಕಂಪನಿಯೂ ಸಹ ಅಷ್ಟೇ ಗೌರವ ನೀಡಿದೆ.

## ಬಣ್ಣದ ಜೊತೆಗಿನ ಇತರೆ ಅನುಭವಗಳು

೧೯೭೭ರಲ್ಲಿ ಮಹಾಲಿಂಗಪುರದಲ್ಲಿ ಮಾರುತೇಶ ಮಾಂಡ್ರೆಯವರು ತಾವೇ ಬರೆದ 'ಮಹಾಲಿಂಗೇಶ್ವರ ಮಹಾತ್ಮೆ' ನಾಟಕಕ್ಕೆ ನಿರ್ದೇಶಕರಾಗಿದ್ದರು. ಅವರ ನಾಟಕಕ್ಕೆ ರಾಜಗುರು ಗುರುಸ್ವಾಮಿ ಕಲಿಕೇರಿಯವರು ಸಂಗೀತ ನಿರ್ದೇಶನದಲ್ಲಿದ್ದರು. ಮೊದಲ ಪ್ರಯೋಗದ ಮೊದಲ ಸನ್ನಿವೇಶ ಕೈಲಾಸ ಇತ್ತು. ಆ ನಾಟಕದಲ್ಲಿ ಪರಮೇಶ್ವರನ ಪಾತ್ರದಲ್ಲಿ ನಿಸ್ಸೀಮಪ್ಪ ಕಾಡಶೆಟ್ಟಿಹಳ್ಳಿ, ಪಾರ್ವತಿ ಪಾತ್ರದಲ್ಲಿ ಸಂಜೀವಪ್ಪನವರು ಇದ್ದರು. ಕೃಷ್ಣಾ ಪೇಂಟರ್‌ರವರು ಕೈಲಾಸವನ್ನೇ ಧರೆಗಿಳಿಸಿದಂತೆ ಸುಂದರ ರಂಗಸಜ್ಜಿಕೆ ನಿರ್ಮಾಣ ಮಾಡಿದ್ದರು. ಕೈಲಾಸ ಪರಿಸರ, ಜುಳುಜುಳು ನೀರಿನ ಝರಿ, ಢಮರು, ಶಂಖ, ತ್ರಿಶೂಲ, ನಂದಿ, ಷಣ್ಮುಖ, ಬೃಂಗಿ, ನಾಲ್ಕು ಮೂಲೆಗೆ ಊದಿನ ಹೊಗೆ ಮತ್ತು ಪ್ರಮಥ ಗಣಂಗಳು ಎಲ್ಲವನ್ನು ಅಚ್ಚುಕಟ್ಟಾಗಿ ಮಾಡಲಾಗಿತ್ತು. ನಾಟಕಕ್ಕೆ ಸಂಬಂಧಿಸಿದಂತೆ ನಿರ್ದೇಶಕರಾದ ಮಾಂಡ್ರೆಯವರು ಮೊದಲ ಸನ್ನಿವೇಶದ ಪಾತ್ರಧಾರಿಗಳಿಗೆ ಒಂದು ಸೂಚನೆಯನ್ನು ಕೊಟ್ಟಿದ್ದರು. "ನಾಂದಿ ಮುಗಿದ ಕೂಡಲೆ ಡ್ರಾಪ್ ಸರಿಯುತ್ತದೆ, ಪ್ರೇಕ್ಷಕರಿಂದ ಒಂದು ಶಬ್ದ ಬರುತ್ತದೆ. ಆಗ ಮಾತ್ರ ಪಾತ್ರಧಾರಿಯಾದ ಪಾರ್ವತಿ ಮಾತನ್ನು ಆರಂಭಿಸುವುದು.

ಅಲ್ಲಿವರೆಗೆ ಯಾವುದೇ ಶಬ್ದ ಮಾಡುವಂತಿಲ್ಲ" ಎಂದು ಹೇಳಿದ್ದರು. ಈ ಸೂಚನೆಯನ್ನು ಗಮನದಲ್ಲಿಟ್ಟುಕೊಂಡಿದ್ದ ಸಂಜೀವಪ್ಪನಿಗೆ ಯಾವ ಶಬ್ದ ಇರಬಹುದು ಅದು ಎಂಬ ಕುತೂಹಲವಿತ್ತು.

ಎಷ್ಟೇ ಚೆನ್ನಾಗಿ ಪ್ರಾಕ್ಟೀಸ್ ಮಾಡಿದ್ದರು ನಿಜವಾದ ಕಲಾವಿದ ಅದರ ಗುಂಗಿನಲ್ಲಿರುತ್ತಾನೆ. ಅಂತೆಯೇ ಸಂಜೀವಪ್ಪ ಸಹ ಮೊದಲ ಸನ್ನಿವೇಶದ ಗುಂಗಿನಲ್ಲಿದ್ದರು. ಮಹಾಲಿಂಗಪುರದಲ್ಲಿ ತಮ್ಮದೇ ಊರಿನ ಮಹಾಲಿಂಗೇಶ್ವರ ಮಹಾತ್ಮೆ ನೋಡಲು ಜನ ಕಿಕ್ಕಿರಿದಿದ್ದರು. ನಾಟಕ ಆರಂಭವಾಯಿತು. ಮೊದಲು ಕೈಲಾಸದ ಸನ್ನಿವೇಶ ಶಿವ ಪಾರ್ವತಿ ತಯಾರಾಗಿ ಕೈಲಾಸದಲ್ಲಿ ಕುಳಿತಿದ್ದರು. ಸಂಜೀವಪ್ಪನವರು ಪಾರ್ವತಿಯಾಗಿ ಶಿವನ ಜೊತೆಗಿದ್ದರು. ಅವರ ಗಮನ ಮಾತ್ರ ಪ್ರೇಕ್ಷಕರ ಕಡೆಗಿತ್ತು. ಪ್ರೇಕ್ಷಕರಿಂದ ಹೊರಬರುವ ಶಬ್ದದ ಕಡೆಗಿತ್ತು. ಅದೇನು ಶಬ್ದ ಎಂಬುದೇ ಅವರ ಕುತೂಹಲಕ್ಕೆ ಕಾರಣವಾಗಿತ್ತು. ಒಳಗೊಳಗೆ ಒಂದು ಚಿಂತೆಯೂ ಕಾಡುತ್ತಿತ್ತು. ಆ ಶಬ್ದ ಏನೆಂಬುದೇ ತಿಳಿಯದು, ಆ ಶಬ್ದವೇ ಹೊರ ಬರದಿದ್ದರೆ ಹೇಗೆ ಎನ್ನುವ ಯೋಚನೆಯಲ್ಲಿಯೇ ಆ ಶಬ್ದದ ಕಡೆಗೆ ಗಮನವಿಟ್ಟಿದ್ದರು.

ಕೈಲಾಸದ ಎಲ್ಲಾ ತಯ್ಯಾರಿ ಮುಗಿದು ಡ್ರಾಪ್ ಸರಿಯಿತು. ಝಗಮಗಿಸುವ ಆ ಕೈಲಾಸದ ಸನ್ನಿವೇಶವನ್ನು ನೋಡುತ್ತಿದ್ದಂತೆ ಪ್ರೇಕ್ಷಕರು ತಮ್ಮೊಳಗಿನ ಉದ್ಗಾರವನ್ನು ಹೊರಹಾಕಿದರು. ಲೈಟ್ ಹಾಕಿದ ಕೂಡಲೇ ಮುಂದಿದ್ದ ಪ್ರೇಕ್ಷಕರಾರು ಕಾಣಿಸದಾದಾಗ ತಕ್ಷಣವೇ ಅವರ ಗಮನ ಪ್ರೇಕ್ಷಕರ ಕಡೆ ಹೋದಾಗ ಅಲ್ಲಿಂದ ಬಂದ ಒಂದು ಶಬ್ದ ಸಂಜೀವಪ್ಪನವರನ್ನು ಎಚ್ಚರಿಸಿತು. ಕೈಲಾಸದ ಸನ್ನಿವೇಶವನ್ನು ನೋಡುತ್ತಿದ್ದ ಜನರು ತಮಗರಿವಿಲ್ಲದೆಯೇ ಆನಂದದಲಿ ಬಾಯಿಂದ ಲೊಚುಗುಟ್ಟಿದರು. ಆ ಶಬ್ದವನು ಗಮನಿಸಿದ ಪಾರ್ವತಿ ಪಾತ್ರಧಾರಿ ಸಂಜೀವಪ್ಪ ಓಹೋ ಇದೇ ಶಬ್ದವಿರಬೇಕೆಂದು ತಿಳಿದುಕೊಂಡು ನಿಧಾನವಾಗಿ.

"ದೇವೇಶ ತಪೋ ಮಗ್ನನಾದ ನಂದಿಯ ಧೃಢ ಭಕ್ತಿಗೆ ಒಲಿದು ಬಂದುದು ಅದಾವ ಮಂಗಲ ಮಹೋದಯಕ್ಕಾಗಿ" ಎಂದು ಮಾತನ್ನು ಆರಂಭಿಸಿದರು.

ಆಗ ಪರಮೇಶ್ವರ ಪಾತ್ರಧಾರಿ

"ದೇವಿ ಆ ಜಂಗಮನ ಅಮೋಘ ಸಂದರ್ಶನಕ್ಕಾಗಿ"

"ಆ ಜಂಗಮ ಮೂರ್ತಿ"

"ಅನಾದಿ, ಅನಂತ, ಅನುಪಮ"

"ಆ ವಿಶ್ವ ತೇಜೋ ಮಹಿಮಾ"

"ಲಿಂಗ ಜ್ಯೋತಿರ್ಮಯ"

"ಆತನ ಇರುವು"

"ನಿರ್ವಲಯ, ನಿರಾಭಾರಿ, ನಿಶ್ಯೂನ್ಯದಾಳದಲಿ ತಾನೆ ತಾನಾದ. ಆದಿ

ಆಧಾರವಿಲ್ಲದಂದು, ಹಮ್ಮು ಬಿಮ್ಮಗಳಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದೆಂದು ನಮ್ಮ ಶರಣ ಉದಯಿಸಿದನಂದು"

"ದೇವೇಶ ನಾನು ಆ ಪ್ರಭು ಮೂರ್ತಿಯನ್ನು ನೋಡಬಹುದೇ"

"ನೀನಲ್ಲದೆ ಇನ್ನಾರೂ ಶಿವೆ ವಿಶ್ವ ತಾರಕ ಶಕ್ತಿ ನೀನು"

ಹೀಗೆ ಗಂಭೀರವಾಗಿ ನಾಟಕ ನಡೆದಿರಲು ಪ್ರೇಕ್ಷಕರೂ ಅಷ್ಟೇ ಗಂಭೀರವಾಗಿ ಸನ್ನಿವೇಶವನ್ನು ನೋಡುತ್ತಿರಲಾಗಿ ಅತಿ ದೊಡ್ಡ ಚಪ್ಪಾಳೆಯೊಂದಿಗೆ ಸನ್ನಿವೇಶ ಮುಗಿಯಿತು. ಜನ ಆನಂದಿತರಾದರು. ಸಂಜೀವಪ್ಪ ಒಳಬಂದು ಶಿವಕ್ಕ ಎಂಬ ಮತ್ತೊಂದು ಹಾಸ್ಯ ಪಾತ್ರಕ್ಕೆ ಸಜ್ಜಾಗಲು ಗ್ರೀನ್ ರೂಮಿಗೆ ಬಂದಾಗ ನಿರ್ದೇಶಕರಾದ ಮಾಂಡ್ರೆ ಕವಿಗಳು ಸಂಜೀವಪ್ಪನನ್ನು ಬಹುವಾಗಿ ಮೆಚ್ಚಿಕೊಂಡರು. ಈಗಲೂ ಈ ಸನ್ನಿವೇಶದ ಮಾತುಗಳನ್ನು ಒಂದೂ ಬಿಡದೆ ಎಲ್ಲವನ್ನು ನೆನಪಿನಲ್ಲಿಟ್ಟುಕೊಂಡು ಸ್ಮರಿಸುತ್ತಿರುತ್ತಾರೆ.

ಎಲ್ಲಾ ಪೌರಾಣಿಕ ನಾಟಕಗಳ ಕೈಲಾಸದ ಸನ್ನಿವೇಶಗಳಿಗೆ ಯಾವಾಗಲೂ ಬೃಂಗಿ ಪಾತ್ರವನ್ನು ಸಂಜೀವಪ್ಪನೇ ಮಾಡುತ್ತಿದ್ದರು. ಯಾವುದಾದರೂ ನಾಟಕದಲ್ಲಿ ಪಾರ್ವತಿ ಪಾತ್ರ ಮಾಡಬೇಕಾಗಿ ಬಂದಾಗ ಬೃಂಗೀ ನೃತ್ಯವನ್ನು ಬೇರೆಯವರು ಮಾಡುತ್ತಿದ್ದರು. ಒಟ್ಟಿನಲ್ಲಿ ಯಾವುದೇ ನಾಟಕದಲ್ಲಿ ಕಾರಣಾಂತರಗಳಿಂದಾಗಿ ಪಾತ್ರಧಾರಿಯ ಕೊರತೆಯಾದಾಗ ಆ ಎಲ್ಲವನ್ನು ಅಲ್ಲಿರುವ ಕಲಾವಿದರೇ ಮಾಡಬೇಕು. ರಂಗ ತಾಲೀಮು ಮಾಡುವಾಗ ಆ ಎಲ್ಲದರ ಸೂಚನೆ ನೀಡಲಾಗಿರುತ್ತಿತ್ತು. ಮತ್ತು ಮಾಡುವ ಆಸಕ್ತಿ ಇರುವವರು ಅವುಗಳನ್ನು ನೋಡಿ ಕಲಿಯುತ್ತಿದ್ದರು. ಹಾಗೆಯೇ ಸಂಜೀವಪ್ಪನವರು ನೋಡಿ ಕಲಿತದ್ದೇ ಬಹಳ. ಹಾಗಾಗಿ ಯಾವುದೇ ಪಾತ್ರ ಮಾಡಲು ಹಿಂಜರಿಯುತ್ತಿರಲಿಲ್ಲ.

## ಬ್ರಾಹ್ಮಣರಂತೆ ಕಚ್ಚೆ ಹಾಕಿದ ಸಂಜೀವಪ್ಪ

ಹೊಳೆ ಆಲೂರಿನಲ್ಲಿ ಗರುಡ ಸದಾಶಿವರಾಯರ 'ಸತ್ಯಸಂಕಲ್ಪ' ನಾಟಕ ನಡೆದಿತ್ತು. ಆ ನಾಟಕದಲ್ಲಿ ಬ್ರಾಹ್ಮಣ ತಾಯಿಯ ಪಾತ್ರದಲ್ಲಿ ಕಚ್ಚೆ ಹಾಕಿದ ಪೋಷಾಕು ಧರಿಸಿದ್ದರು. ನಾಟಕ ಮುಗಿದ ನಂತರ ಗ್ರೀನ್‌ರೂಮಿನಲ್ಲಿರುವಾಗ ನಾಲ್ಕೈದು ಜನ ಬ್ರಾಹ್ಮಣ ಹೆಣ್ಮಕ್ಕಳು ಒಳಬಂದು 'ತಮ್ಮಾ ನೀ ಕಚ್ಚೆ(ಗೋಸಿ) ಹೇಗೆ ಹಾಕ್ಕೊಂಡೆ ತೋರಿಸು, ನಮಗಿಂತಲೂ ಚೆನ್ನಾಗಿ ಹಾಕ್ಕೊಂಡಿದ್ದೀಯ" ಎಂದರು. ಪಾತ್ರಗಳನ್ನು ಸೂಕ್ಷ್ಮವಾಗಿ ಗಮನಿಸುವ ಜನರು ಅವುಗಳನ್ನು ನೋಡಿ ತಮಗರಿವಿಲ್ಲದೆಯೇ ಮರುಳಾಗುತ್ತಿದ್ದರು. ಅಂತೆಯೇ ಬೆನ್ನು ಹತ್ತುತ್ತಿದ್ದರು. ಪಾತ್ರ ಮಾಡಿದವರ ಹಿಂದೆ ಅಲ್ಲ ಪಾತ್ರಗಳ ಹಿಂದೆ. ಆ ಬ್ರಾಹ್ಮಣ ಹೆಣ್ಮಕ್ಕಳು ಬಂದಾಗ ಅವರ ಎದುರಿನಲ್ಲಿಯೇ ಕಚ್ಚೆ ಹಾಕಿ ತೋರಿಸಿದಾಗ ಬಹಳ ಆನಂದವಾಗಿ 'ಹೇಗೆ ಕಲಿತೆ ನೀ' ಎಂದರು. ಅದಕ್ಕೆ ಎಲ್ಲಾ ಅಜ್ಜನವರೇ ಎಂದರು.

ರಾಯಚೂರಿನಲ್ಲಿ ಮಳೆಗಾಲದ ಕ್ಯಾಂಪ್ ವೀರಭದ್ರೇಶ್ವರ ದೇವಸ್ಥಾನದಲ್ಲಿ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕ ನಡೆದಿತ್ತು. ಸಂಜೀವಪ್ಪನವರು ಅದರಲ್ಲಿ ನಾಗಮ್ಮನ ಪಾತ್ರ ಮಾಡಿದ್ದರು. ನಾಟಕ ನಡೆಯುವಾಗ ಒಬ್ಬ ಹೆಣ್ಮಗಳು ಬಂದು "ನಾಟಕ ಮುಗಿದ ಮ್ಯಾಲೆ ನಾವೆಲ್ಲ ಒಳಗೆ ಬರ್ತೀವಿ, ಬಣ್ಣ ಒರೆಸಿಕೋಬ್ಯಾಡ್ರಿ, ಆಗ ನೀವೆಲ್ಲಾ ನಮ್ಮೆದುರಿಗೆ ಸೀರೆ ಉಟಗೊಂಡು ತೋರಿಸಬೇಕು" ಎಂದು ಸಂಜೀವಪ್ಪ ನವರಿಗೆ ಹೇಳಿದರು. ಇದನ್ನು ನಾಟಕದ ಮ್ಯಾನೇಜರ್ ಆದ ಶಿವಮೂರ್ತಿಸ್ವಾಮಿ ದೇವಗಿರಿ ಅವರಿಗೆ ಹೇಳಿದಾಗ ಮೊದಲು ಬೈದರು. ಪಾತ್ರ ಇಲ್ಲದಾಗ ಗ್ರೀನ್ ರೂಮಿನ ಮುಂದೆ ಸಹಾಯಕರಾಗಿ ಇರುತ್ತಿದ್ದ ಸಂಜೀವಪ್ಪ ಆಗಾಗ ಬೈಸಿಕೊಳ್ಳುತ್ತಿದ್ದರು. ಯಾಕೆಂದರೆ ಈ ತರಹದ ಯಾವುದೇ ಸಮಸ್ಯೆ ಬಂದಾಗ ಸಂಜೀವಪ್ಪ ಮುಂದೆ ಇರುತ್ತಿದ್ದರು. ಅಂದು ಹೆಣ್ಮಕ್ಕಳು ಹೇಳಿದ ಮಾತನ್ನು ಹೇಳಿಯೂ ಬೈಸಿಕೊಂಡರು. ಪಾತ್ರ ಮಾಡುವ ಹುಡುಗರು ಈ ತರಹದ ಗೀಳಿನಿಂದ ಕೆಡುವರೆಂಬ ಭಯವಿತ್ತು. ಪಾತ್ರಧಾರಿಗಳಿಗೆ ನದುರು ತಾಕಿ ಆರೋಗ್ಯ ಕೆಡಬಹುದು ಎಂಬುದು ಅವರ ಚಿಂತೆಯಾಗಿತ್ತು. ಹಾಗಾಗಿ ಈ ತರಹದ ಯಾವುದೇ ಚಟುವಟಿಕೆಗಳಿಗೆ ಅವರು ಅವಕಾಶ ನೀಡುತ್ತಿರಲಿಲ್ಲ. ಆದರೂ "ಇದೇ ಕೊನೆ ಇನ್ನೊಂದು ಸಲ ಹಾಗೆ ಮಾಡಲು ಅವಕಾಶ ಕೊಡಬೇಡಿರಿ" ಎಂದ ಮ್ಯಾನೇಜರರು 'ಆಯ್ತು ಹೋಗ್ರಿ' ಎಂದರು.

ನಾಟಕ ಮುಗಿಯಿತು. ಒಟ್ಟಿಗೆ ಹತ್ತು ಹನ್ನೆರಡು ಜನ ಹೆಣ್ಮಕ್ಕಳು ಒಳ ಬಂದು "ನಿಮ್ಮ ಪಾತ್ರ ನೋಡಿ ನಮಗೇ ನಾಚಿಕೆ ಬರ್ತಾದ. ಚೆಂದ ಮಾಡಿದಿರಿ, ಅದಕ್ಕ ನೀವೆಲ್ಲರೂ ನಮ್ಮ ಮುಂದೆ ಸೀರೆ ಉಟ್ಕೊಂಡು ತೋರಿಸಬೇಕು" ಎಂದರು. ಆಗ ಸಂಜೀವಪ್ಪನವರು "ಗುರುಗಳು ಬೈತಾರೆ ತಾಯಿ" ಅಂದರು. ಆಗ ಅವರು "ತಾಯಂದಿರ ಮುಂದೆ ಮಕ್ಕಳು ಉಟ್ಟುಕೊಂಡು ತೋರಿಸೋದಕ್ಕೆ ನಾಚಿಕೆ ಯಾಕೆ" ಎಂದಾಗ, ಎಲ್ಲರು ತಕ್ಷಣವೇ ಜಂಪರ್ ಹಾಕ್ಕೊಂಡು ಸೀರೆ ಉಟ್ಕೊಂಡು ಚೆಂಡು ಇಟ್ಕೊಂಡು ನಿಂತಾಗ ಅವರೆಲ್ಲಾ ಬಾಯಿ ಮುಚ್ಚಿಕೊಂಡು ಶಿವಶಿವ ಅಂದರಂತೆ. ಈ ಘಟನೆಯನ್ನು ಹೇಳುವಾಗ ಸಂಜೀವಪ್ಪನವರು "ಒಳ್ಳೆವರು ಇರ್ತಾರ ಕೆಟ್ಟವರೂ ಇರ್ತಾರ ನಮ್ಮ ಜಾಗೃತಿಯಲ್ಲಿ ನಾವಿರಬೇಕು ಇರ್ತಿದ್ದಿವಿ" ಎನ್ನುತ್ತಾರೆ.

## ನೀವು ಮಾಡಿದ್ದೇ ನ್ಯಾಯ ಎಂದರು ನ್ಯಾಯಾಧೀಶರು

೧೯೬೬ರಲ್ಲಿ ಕ್ಯಾಂಪ್ ಮಾನ್ವಿಯಲ್ಲಿರುವಾಗ ಅಜ್ಜನವರ ನಾಟಕ ಕಂಪನಿ ಊರ ಹೊರಗಿನ ಒಬ್ಬ ನ್ಯಾಯಾಧೀಶರ ಮನೆಯ ಎದುರಿಗೆ ಇತ್ತು. ಪುಟ್ಟರಾಜ ಗುರುಗಳು ರಚಿತ 'ಶ್ರೀಕೃಷ್ಣ ಗಾರುಡಿ' ನಾಟಕ ಪ್ರದರ್ಶನಕ್ಕಿತ್ತು. ಎದುರಿಗೆ ನ್ಯಾಯಾಧೀಶರ ಮನೆ ಜಾಸ್ತಿ ಸೌಂಡ್ ಬಿಟ್ಟರೆ ಏನನ್ನುವರೋ ಎಂದು ತಿಳಿದು ಸ್ಪೀಕರಿನ ಸೌಂಡ್ ಕಡಿಮೆ ಮಾಡಲಾಗಿತ್ತು. ಇದನ್ನು ಅರಿತುಕೊಂಡ ನ್ಯಾಯಾಧೀಶರು ನಾಟಕದ

ಪಾತ್ರಧಾರಿಗಳನ್ನು ಮನೆಗೆ ಕರೆದು ಗೌರವಿಸಿ "ನೀವು ಸೌಂಡ್ ಕಡಿಮೆ ಮಾಡಬೇಡಿ, ನಮಗೇನು ತೊಂದರೆಯಾಗುವುದಿಲ್ಲ. ಅಂಥ ಅನಾಥರಿಗೆ ಸಂಗೀತ ವಿದ್ಯೆ ಕಲಿಸುವ, ಬದುಕು ನೀಡುವ ಅಜ್ಜನವರ ನಾಟಕ ಕಂಪನಿ ಒಳ್ಳೆ ಉದ್ಧೇಶ ಇಟ್ಟುಕೊಂಡು ನಾಟಕ ಆಡ್ತಿದೆ. ಪ್ರಚಾರ ಸಿಗಲಿ ಸ್ವಲ್ಪ ಸೌಂಡ್ ಜಾಸ್ತಿ ಮಾಡಿರಿ." ಎಂದರಂತೆ. ಇದನ್ನು ದೊಡ್ಡವರ ದೊಡ್ಡಗುಣ ಅಂತ ನೆನೆಸಿಕೊಳ್ಳುವ ಸಂಜೀವಪ್ಪ, ಅಜ್ಜನವರ ಬಗೆಗೆ ಜನ ಇಟ್ಟುಕೊಂಡ ಅಭಿಮಾನವನ್ನು ನೆನೆಯುತ್ತಾ ಕಣ್ಣಲ್ಲಿ ನೀರು ತಂದುಕೊಳ್ಳುತ್ತಾರೆ.

೧೯೬೭ರಲ್ಲಿ ಕ್ಯಾಂಪ್ ರಾಯಚೂರಿನಲ್ಲಿರುವಾಗ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ'ನ ನಾಟಕದಲ್ಲಿ ಅಭಿನಯಿಸಲು ಹಿರಿಯ ನಟರು ಬಂದಿದ್ದರು. ಅಜ್ಜನವರ ಶಿಷ್ಯರಾದ ಬಿ.ಹನುಮಂತಾಚಾರ್, ಚಲನಚಿತ್ರ ನಟ ರಾಮು ಮತ್ತು ಅರ್ಜುನಸಾ ನಾಕೋಡ ಬಂದ್ದಿದ್ದರು. ಬಂದವರಿಗೆ ಸತ್ಕರಿಸಲು ಸಂಜೀವಪ್ಪ ಮತ್ತು ಶೇಷಪ್ಪನವರ ಜವಾಬ್ದಾರಿ ಇತ್ತು. ಹೋಳಿಗೆ, ತುಪ್ಪ, ಅನ್ನ, ಮೊಸರು, ಸಾಂಬಾರ್ ಇವೆಲ್ಲವು ಇದ್ದರೂ ಅದಾವುದನ್ನು ಅತಿಥಿಗಳು ಊಟ ಮಾಡದೆ ಅದೆಲ್ಲವನ್ನು ಬೇಡೆಂದು ರೊಟ್ಟಿ ಪಲ್ಯ ಅನ್ನ ಸಾರು ಊಟಮಾಡಿದರು. ಸತ್ಕರಿಸುವವರೇ ಸತ್ಕರಿಸಿಕೊಂಡಿದ್ದು ಸಂಜೀವಪ್ಪನಿಗೆ ಒಂದು ಪಾಠವಾಯಿತು. ಬದುಕನ್ನು ಸರಳೀಕರಿಸಿಕೊಳ್ಳುವುದು ಮುಖ್ಯ ಎಂದು ಅರಿತರು. ೧೯೮೧ ರಲ್ಲಿ ರಾಯಚೂರಿನಲ್ಲಿ ಕ್ಯಾಂಪ್ ಮಾಡಿದಾಗ 'ಗೌಡರ ಗದ್ಲ' ನಾಟಕಕ್ಕೆ ಸಿನಿಮಾನಟ ರಾಮರಾವ್ ದೇಸಾಯಿ ಬಂದಿದ್ದರು. ರಾಯಚೂರಿಗೆ ಯಾವುದೇ ಸಂದರ್ಭ ಅಜ್ಜನವರ ನಾಟಕ ಕಂಪನಿ ಮತ್ತು ಅಜ್ಜನವರು ಬಂದರೆ ಗಣದಿನ್ನಿ ಚೆನ್ನಪ್ಪ ಗೌಡರು ಮತ್ತವರ ಕುಟುಂಬ ನೀಡುತ್ತಿರುವ ಸಹಕಾರ ತೋರಿಸುವ ಪ್ರೀತಿ ಮರೆಯಲಾಗದು.

ಮಹಾನ್ ನಟರ ಬಳಗ ಉತ್ತಮ ರಂಗ ಸಜ್ಜಿಕೆಯೊಡನೆ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ೧೫೦ನೇ ಪ್ರಯೋಗಗಳನ್ನು ಕಂಡಾಗ ರಾಯಚೂರಿನ ಎಲ್ಲಾ ಚಲನಚಿತ್ರ ಮಂದಿರಗಳು ಹಿನ್ನೆಡೆಯನ್ನು ಕಂಡವು. ಎಲ್ಲಾ ಟಾಕೀಸಿನ ಮಾಲಕರು ಸೇರಿ ನಾಟಕ ಕಂಪನಿಯ ಪರವಾನಗಿ ರದ್ದು ಮಾಡಬೇಕೆಂದು ದೂರುಕೊಟ್ಟರು. ನಾಟಕದ ಕ್ಯಾಂಪ್ ಬದಲಾಗಬೇಕಾಯಿತು. ಅಷ್ಟೊಂದು ಹೆಸರಾಗಿ ಇನ್ನು ನೂರಾರು ಪ್ರಯೋಗಗಳು ನಡೆಯುವತ್ತ ಹೆಜ್ಜೆ ಹಾಕುತ್ತಿರಬೇಕಾದರೆ ಇದ್ದಕ್ಕಿದ್ದಂತೆ ಕಂಪನಿಯನ್ನು ಮುಂದಿನ ಊರಿಗೆ ಹಾಕಲಾಯಿತು. ಈ ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮನ ನಾಟಕದಲ್ಲಿ ಸಂಜೀವಪ್ಪನವರು ನಾಗಮ್ಮನ ಪಾತ್ರದಲ್ಲಿ ಅದ್ಭುತ ನಟನೆಯನ್ನು ಮಾಡಿದ್ದರು. ಇವರಜೊತೆ ಅರ್ಜುನಸಾ ನಾಕೋಡ ಮಲ್ಲಿಕಾರ್ಜುನನ ಪಾತ್ರದಲ್ಲಿ ಜನ ಮನ್ನಣೆಯನ್ನು ಗಳಿಸಿದ್ದರು.

ಈ ಹಿಂದೆಯೂ ಗದುಗಿನಲ್ಲಿ ಇದೇ ನಾಟಕ ೩೭೬ನೇ ಪ್ರಯೋಗಗಳು ನಡೆದಾಗ ಎಷ್ಟೊಂದು ಜನಪ್ರಿಯತೆ ಎಂದರೆ ನಾಟಕ ಮಾಡಿದ ಪಾತ್ರಧಾರಿಗಳೆಲ್ಲರನ್ನು

ಮೆರವಣಿಗೆ ಮಾಡಲಾಗಿತ್ತು. ಮತ್ತು ಮಲ್ಲಮ್ಮನ ಪಾತ್ರ ಮಾಡುತ್ತಿದ್ದ ರೋಣದ ಮುದೇನಗುಡಿ ಶಿವಯ್ಯ ಸ್ವಾಮಿಯನ್ನು ಮನೆಮನೆಗೆ ಕರೆದು ಉಡಿತುಂಬಿದ್ದರು. ಅಷ್ಟೇ ಅಲ್ಲ ನಾಟಕದಲ್ಲಿ ಸೀರೆ ಕುಬಸ ಇಟ್ಟು ಉಡಿ ತುಂಬುವ ಕಾರ್ಯವನ್ನು ಜನರೆಲ್ಲಾ ಸೇರಿ ವಿಜೃಂಭಣೆಯಿಂದ ಮಾಡಿದ್ದರು.

ಕೆಲವುಸಲ ಪಾತ್ರದ ಅಭಿನಯವನ್ನು ಮೆಚ್ಚಿಕೊಂಡ ಊರಿನ ಜನ ಆಯಾರ ನೀಡುತ್ತಿದ್ದರು. ಬಹುಮಾನ ರೂಪವಾಗಿ ಪ್ಯಾಂಟ್‌ಷರ್ಟ್ ನೀಡಿದರೆ ಪಾತ್ರಧಾರಿಗಳಿಗೆ ಹೋಗುತ್ತಿತ್ತು. ಸೀರೆ ಮುಯ್ಯಿ ಮಾಡಿದರೆ ಅದು ಕಂಪನಿಗೆ ಇರುತ್ತಿತ್ತು. ಸಂಜೀವಪ್ಪನವರಿಗೆ ಹಾಗೆ ಪಡೆದ ಬಹುಮಾನಗಳು ಹಲವು. ನಾಟಕದಲ್ಲಿ ಅಷ್ಟೇ ಅಲ್ಲ ಹೊರಗೆಯೂ ಕೂಡಾ ಅವರ ಪಾತ್ರ ಇಷ್ಟವಾಗಿ ಜನರು ತುಂಬಾ ಉಡುಗೊರೆಗಳನ್ನು ನೀಡುತ್ತಿದ್ದರು. ಸಂಜೀವಪ್ಪ ಯಾವತ್ತು ಕಲಾಭಿಮಾನಿಗಳನ್ನು ಗೌರವದಿಂದ ಕಾಣುತ್ತಾರೆ. ಯಾಕೆಂದರೆ ಎಲ್ಲಿ ಹೋದರು ಜನರು ಅವರನ್ನ ಎಂದಿಗೂ ಜಾತಿಯಿಂದ ಗುರ್ತಿಸಲಿಲ್ಲ. ಅಜ್ಜನವರ ನಾಟಕ ಕಂಪನಿಯ ಕಲಾವಿದನಾಗಿ, ಅಷ್ಟೇ ಮುಖ್ಯವಾಗಿ ಅವರ ನಟನೆಯಿಂದಾಗಿ ಗುರ್ತಿಸಿಕೊಂಡರು.

ನಾಟಕಗಳು ಮತ್ತು ನಟನೆ ಇಡೀ ಸಮುದಾಯವನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದವು. ನಾಟಕ ರಚನೆ, ನಿರ್ದೇಶನ, ಮತ್ತು ನಟನೆಯಲ್ಲಿ ಒಂದು ಶಿಸ್ತು ಇತ್ತು. ಅಷ್ಟೊಂದು ಶಿಸ್ತಿನಿಂದ ನಾಟಕಗಳು ಮಾತ್ತು ಪಾತ್ರಧಾರಿಗಳು ಇರಲು ಕಾರಣ ಮ್ಯಾನೇಜರ್ ಮತ್ತು ನಿರ್ದೇಶಕರು. ಅವರೆಲ್ಲರ ನೆರಳಿನಲ್ಲಿ ಪಳಗಿದ ಸಂಜೀವಪ್ಪ ಶಿವಮೂರ್ತಿಸ್ವಾಮಿ ದೇವಗಿರಿಯವರನ್ನು ಬಹಳವಾಗಿ ನೆನೆಯುತ್ತಾರೆ. ನಾಟಕ ಕಂಪನಿ ಸೇರಿದಾಗಿನ ಪ್ರಥಮ ನಿರ್ದೇಶಕರಾದ ಅವರ ಶಿಸ್ತು ಇವರಿಗೆ ಇಷ್ಟವಾಗಿತ್ತು.

## ಬಣ್ಣ ಹಚ್ಚೋದೇ ಬಿಡಿತೀನಿ

ಒಮ್ಮೆ ಶಿರೋಳದಲ್ಲಿ 'ಶಿರೋಳದ ಸಿದ್ಧಲಿಂಗೇಶ್ವರ ಮಹಾತ್ಮೆ' ಪ್ರಥಮ ಪ್ರಯೋಗದ ನಾಟಕದ ರಂಗತಾಲೀಮು ನಡೆಯುವಾಗ ಊರಿನ ಹಿರಿಯರು ಆ ತಾಲೀಮನ್ನು ನೋಡಿ ಅನುಮಾನ ವ್ಯಕ್ತಪಡಿಸುತ್ತಾರೆ. "ನಮ್ಮೂರು ದೊಡ್ಡ ಸಂಸ್ಥಾನ ನಾಟಕ ಹೇಗಾಗ್ತಾದೋ ಏನೋ" ಎಂದರು. ರಂಗತಾಲೀಮಿನಲ್ಲಿ ತಾಯಿ ಪಾತ್ರದಲ್ಲಿ ಭಾಗವಹಿಸಿದ್ದ ಸಂಜೀವಪ್ಪ ತಕ್ಷಣವೇ ಎದ್ದು, "ನೀವು ಹೀಗೆಲ್ಲಾ ಅನುಮಾನ ವ್ಯಕ್ತ ಪಡಿಸಬೇಡ್ರಿ, ನಾಟಕ ಚೆಂದ ಆಗ್ತಾದ, ನಾಟಕ ಪ್ರೇಕ್ಷಕರನ್ನು ಮುಟ್ಟಲಿಲ್ಲ, ಮೆಚ್ಚಲಿಲ್ಲ ಫೇಲಾಯಿತು ಅಂದ್ರೆ ನಾನು ಅವತ್ತಿನಿಂದ ಬಣ್ಣ ಹಚ್ಚೋದೆ ಬಿಡತೀನಿ, ಊರಿಗೆ ಹೋಗಿ ಬಿಡ್ತೀನಿ" ಎಂದರು. ಆಯ್ತು ಎಂದು ಎಲ್ಲರೂ ಎದ್ದು ಹೋದರು. ಕಲಾವಿದರು ಪ್ರಥಮ ಪ್ರಯೋಗಕ್ಕೆ ರಂಗವನ್ನು ಸಜ್ಜು ಗೊಳಿಸಿಕೊಳ್ಳಲು ನಡೆದರು.

ಮೊಟ್ಟಮೊದಲ ಪ್ರಯೋಗವೆಂದು, ತಮ್ಮೂರಿನ ಮಹಾತ್ಮೆ ಎಂದು ಊರಿನ

ಜನ ಬಹಳ ಸೇರಿದ್ದರು. ನಾಟಕ ಆರಂಭವಾಗಿ ಯಶಸ್ವಿಯಾಗಿ ಮುಗಿಯಿತು. ಎಲ್ಲರೂ ನಾಟಕವನ್ನು ನೋಡಿ ಹೊಗಳುತ್ತಿದ್ದರು. ಬೆಳಿಗ್ಗೆ ಎಂದಿನಂತೆ ಎದ್ದು ಸಂಜೀವಪ್ಪನವರು ಬಟ್ಟೆ ತೆಗೆದುಕೊಂಡು ಸ್ನಾನ ಮಾಡಲು ಹೊರಟಿರುವಾಗ ಕಾಯ್ದು ಕುಳಿತಿದ್ದ ಆ ಊರಿನ ಹಿರಿಯರು "ನಿನ್ನೆ ನಮ್ಮ ಮಾತಿನಿಂದ ನಿಮಗೆ ಸಿಟ್ಟು ಬಂತೇನು ಸಂಜೀವಪ್ಪನವರೆ, ನಾಟಕ ಅದ್ಭುತ ಆಯ್ತು. ನಿಮಗೆ ಎಷ್ಟು ಧನ್ಯವಾದ ಹೇಳಿದರೂ ಸಾಲದು" ಎಂದು ನಮಸ್ಕರಿಸಿದಾಗ, ಸಂಜೀವಪ್ಪನವರು ತಮ್ಮ ಕೈಲ್ಲಿದ್ದ ಸಾಮಾನು ಕೆಳಗಿಟ್ಟು ಉದ್ದಕ್ಕೆ ಸಾಷ್ಟಾಂಗ ಹಾಕಿದರು. ಆ ಕ್ಷಣ ಆತನನ್ನು ಎಲ್ಲರೂ ಅಪ್ಪಿಕೊಂಡು ಅಭಿನಂದಿಸಿದರು. "ನೀವು ತೃಪ್ತಿ ಪಟ್ಟರೆ ನಮ್ಮ ಶ್ರಮ ಸಾರ್ಥಕ, ಹಾಗೆಯೇ ಅಜ್ಜನವರಿಗೂ ಹೆಸರು, ನಮಗೂ ಬಹಳ ಸಂತೋಷವಾಯಿತು" ಅಂತ ಹೇಳಿದಾಗ ಊರಿನ ಜನ ಸಂಜೀವಪ್ಪನವರನ್ನು ಕೊಂಡಾಡಿ ಆ ಊರಿನಲ್ಲಿ ಕ್ಯಾಂಪ್ ಇರುವವರೆಗೂ ಚೆನ್ನಾಗಿ ನೋಡಿಕೊಂಡರು.

ನಾಟಕ ಕಂಪನಿಯೊಳಗೆ ವಾರಕ್ಕೆ ಒಂದು ರೂಪಾಯಿ ವಿಶೇಷ ಉಡುಗೊರೆಯಾಗಿ ನೀಡುತ್ತಿದ್ದರು. ಅದನು ಕೊಡುವಾಗ ಎಲ್ಲರನು ಸಾಲಾಗಿ ನಿಲಿಸಿ ಕೊಡುತ್ತಿದ್ದರು. ಆದರೆ ಸರಿಯಾಗಿ ಒಂದು ರೂಪಾಯಿ ಕೊಡುತ್ತಿರಲಿಲ್ಲ. ಹಣ ಹಂಚುವಾತ ಯಾರಿಗೂ ತಿಳಿಯದೆ ನಾಲ್ಕಾಣೆ ಹಿಡಿದುಕೊಂಡು ಕೊಡುತ್ತಿದ್ದನು. ನಾಲ್ಕಾಣೆ ಕಡಿಮೆ ಕೊಟ್ಟಾಗ ಸಾಲಿನಲಿ ಮುಂದೆ ನಿಂತವರೇ ಯಾಕೆಂದು ಕೇಳುತ್ತಿದ್ದರು. ಅಷ್ಟೆ ಅವರ ಮೇಲೆ ಒಂದು ಕಣ್ಣಿರುತ್ತಿತ್ತು. ಮುಂದೆ ನಿಂತರೆ ನಾನು ಕೇಳಬೇಕಾಗುತ್ತದೆ, ಅವರು ನನ್ನ ಮೇಲೆ ಕಣ್ಣಿಡುವರೆಂದು ಸಂಜೀವಪ್ಪನವರು ಏನೊಂದು ಕೇಳದೆ ಸುಮ್ಮನೇ ತೆಗೆದುಕೊಳ್ಳುವ ಶಾಂತ ಸ್ವಭಾವದವರು.

## ನೀನ್ಯಾಕೆ ಹಾಗೆ ಮಾತಾಡಿದೆ?

ಬಿಜಾಪುರದ ಗೋಳಸಂಗಿಯಲ್ಲಿ ಕವಿ ಸಾಳುಂಕೆಯುವರ 'ಬದುಕು ಬಂಗಾರವಾಯಿತು' ನಾಟಕ ನಡೆದಿತ್ತು. ಅದರಲ್ಲಿ ಕಸ್ತೂರಮ್ಮನ ಪಾತ್ರವನ್ನು ಸಂಜೀವಪ್ಪನವರು ಮಾಡಿದ್ದರು. ಗೌಡನನ್ನು ಕೊಲೆ ಮಾಡುವ ಸನ್ನಿವೇಶವಿತ್ತು. ಸನ್ನಿವೇಶ ನಡೆದಾಗ ಗೌಡನ ಪಾತ್ರಧಾರಿಯು ಸಿಟ್ಟಿನಿಂದ ಮಾತಾಡುವ ಸಂದರ್ಭದಲ್ಲಿ ಸರಿಯಾಗಿ ಕ್ಯಾಚ್ ವರ್ಡ ಕೊಡಲಿಲ್ಲ. ನಾಟಕದಲ್ಲಿರುವುದು ಇರದೆ ಬೇರೆಯದೇ ಇತ್ತು. ಇದಕ್ಕೆ ಗಲಿಬಿಲಿಗೊಂಡ ಸಂಜೀವಪ್ಪ ತಾನೂ ಸಹ ಅದಕ್ಕೆ ಸಂಬಂಧಿಸಿರದ ಮಾತನ್ನು ಸಿಟ್ಟಿನಿಂದ ಮಾತಾಡಿದರು. ಗೌಡನ ಪಾತ್ರಧಾರಿ ಇದರಿಂದ ಗಲಿಬಿಲಿಗೊಂಡರು. ಹೇಗೋ ಸನ್ನಿವೇಶ ಮುಗಿಯಿತು. ಪರದೆ ಹಿಂದೆ ಬಂದ ಕೂಡಲೆ ಜಗಳ ಶುರು ಮಾಡಿದರು. 'ನೀನ್ಯಾಕೆ ಹಾಗೆ ಮಾತಾಡಿದೆ, ನೀನ್ಯಾಕೆ ಹಾಗೆ ಮಾತಾಡಿದೆ' ಎಂಬ ಜಗಳ ಜೋರಾಗಿ ಪ್ರೇಕ್ಷರಿಗೆ ಕೇಳಿಸಲು ತೊಡಗಿದಾಗ ಗದ್ದಲವಾಗಿ ನಾಟಕ ನಿಂತಿತು. ಮ್ಯಾನೇಜರ್‌ರವರು ಇಬ್ಬರನ್ನೂ ಕರೆಯಿಸಿ

ವಿಚಾರಿಸಿದರು. ನಂತರ ಗೌಡನ ಪಾತ್ರಧಾರಿ ಪ್ರೇಕ್ಷಕರಿಗೆ ನಾಟಕ ನಿಂತಿದ್ದಕ್ಕೆ ಕ್ಷಮೆ ಕೇಳಿದರು. ಮತ್ತೆ ನಾಟಕ ಆರಂಭವಾಯಿತು.

ಇದೇ ಸಂದರ್ಭದಲ್ಲಿ ಬಿಜಾಪುರದ ನಾಟಕ ಪ್ರದರ್ಶನಕ್ಕೆ ಅತಿಥಿಯಾಗಿ ಖ್ಯಾತ ಹಾಸ್ಯನಟ ತಾಳಿಕೋಟೆ ರಾಜು ಬಂದಿದ್ದರು. ಅವರ ಗೌರವಾರ್ಥ ನಾಟಕವನ್ನು ಪ್ರದರ್ಶಿಸಲಾಗಿತ್ತು. ಅಜ್ಜನವರ ನಾಟಕ ಕಂಪನಿಯಲ್ಲಿ ಹಾಸ್ಯನಟನ ಅದ್ಭುತ ಪ್ರದರ್ಶನ ನಡೆಯಿತು. ಉತ್ತಮವಾದ ಪ್ರೋತ್ಸಾಹ ಕಂಡುಬಂದ ಪರಿಣಾಮ ಕಲೆಕ್ಶನ್ ಜೋರಾಯಿತು. ಸಂಗ್ರಹವಾದ ಹಣದಿಂದ ಪ್ರಚಾರದ ವ್ಯಾನನ್ನು ಕೊಂಡು ಅಜ್ಜನವರ ಕಂಪನಿಗೆ ಭಕ್ತಿಯಿಂದ ಅರ್ಪಿಸಿದರು. ಕನ್ನಡ ನಾಡಿನ ಎಲ್ಲಾ ಕಲಾವಿದರು ಅಜ್ಜನವರಿಗೆ ಸಲ್ಲಿಸುವ ಭಕ್ತಿಯ ಸೇವೆಯನ್ನು ಕಣ್ಣಾರೆ ಕಂಡಿದ್ದ ಸಂಜೀವಪ್ಪನವರು ಅಜ್ಜನವರನ್ನು ನೆನೆಸುತ್ತಲೇ ಕಣ್ಣು ತೇವಗೊಳಿಸಿಕೊಳ್ಳುತ್ತಾರೆ.

## ಎಲ್ಲಾ ಪುಟ್ಟಜ್ಜನ ಕೃಪೆ

ಒಂದುಸಲ ನಾಟಕದ ಕ್ಯಾಂಪ್ ಸೇಡಂನಲ್ಲಿದ್ದಾಗ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ'ನ ನಾಟಕ ನಡೆದಿತ್ತು. ಆ ನಾಟಕದಲ್ಲಿ ಸಂಜೀವಪ್ಪ ನಾಗಮ್ಮನ ಪಾತ್ರದಲ್ಲಿ ಮಿಂಚಿದ್ದರು. ನಾಟಕ ನಡೆದಿತ್ತು ಮಳೆಬಂತು. ಹಳ್ಳದ ಪಕ್ಕದಲ್ಲಿ ನಾಟಕದ ಸ್ಟೇಜ್ ಇದ್ದುದರಿಂದ ರಂಗಭೂಮಿಯೊಳಗೆ ನೀರು ನುಗ್ಗುತ್ತಿತ್ತು. ಆ ಸಂದರ್ಭದಲ್ಲಿ ಇಟಗಿ ವಿರುಪಾಕ್ಷಪ್ಪನವರಿಗೆ "ನೀರು ತಗ್ಗಿಗೆ ಬರದಂತೆ ತಡಿಬೇಕು. ನೀರು ತಗ್ಗಿಗೆ ಬಂದರೆ ಎತ್ತಿಹಾಕುವ ಜವಾಬ್ದಾರಿ ನಿನ್ನದು. ಆ ಕೆಲಸ ಮಾಡಿದ್ದಾದರೆ ನಿನಗೆ ನಾಟಕದಲ್ಲಿ ಪಾತ್ರ ನೀಡುವೆವು" ಎಂದು ಮ್ಯಾನೇಜರ್ ಹೇಳಿದ ಕೂಡಲೆ ಇಟಗಿಯವರು ನಾಟಕ ನಿಲ್ಲದಂತೆ, ನೀರು ಸ್ಟೇಜಿಗೆ ನುಗ್ಗದಂತೆ ನೋಡಿಕೊಂಡರು. ಮುಂದೆ ಅವರಿಗೆ ನಾಟಕದಲ್ಲಿ ಪ್ರವೇಶ ನೀಡಲಾಯಿತು. ಈ ಸಂದರ್ಭವನ್ನು ನೆನೆಸಿಕೊಳ್ಳುವ ಸಂಜೀವಪ್ಪನವರು "ನಾಟಕದಲ್ಲಿ ಪಾತ್ರ ಮಾಡಲು ಸ್ಪರ್ಧೆ ಇರುತ್ತಿತ್ತು. ನಮ್ಮ ಪಾಳಿ ಬರುವವರೆಗೆ ಕಾಯಬೇಕು. ಆದರೆ ನನ್ನ ವಿಷಯದಲ್ಲಿ ಹಾಗಾಗಲಿಲ್ಲ. ಎಲ್ಲಾ ಪುಟ್ಟಜ್ಜನ ಕೃಪೆ" ಎಂದು ನೆನೆಯುತ್ತಾರೆ.

ಧಾರವಾಡದಲ್ಲಿ ಕ್ಯಾಂಪ್ ನಡೆದಾಗ ಪುಟ್ಟರಾಜ ಅಜ್ಜನವರ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕ ನೋಡಿದ ಧಾರವಾಡದ ಮೃತ್ಯುಂಜಯ ಶಿವಯೋಗಿಗಳು ಸಂಪೂರ್ಣ ಆನಂದಭರಿತರಾಗಿ ಅಂದು ನಾಟಕ ಕಂಪನಿಯ ಎಲ್ಲರನ್ನು ಕರೆದು ಹೋಳಿಗೆ ತುಪ್ಪದ ಊಟ ಮಾಡಿಸಿ ತಾವೇ ಸ್ವತಃ ಬಡಿಸುತ್ತಾ ಮಾತಾಡಿ " ನೀವೆಲ್ಲಾ ಪಂಚಾಕ್ಷರಿ ಅಜ್ಜನವರ ಶಿಷ್ಯರಪ್ಪ. ಹೀಗೇ ಚೆನ್ನಾಗಿ ನಡೀರಿ ಒಳ್ಳೇದಾಗ್ತದೆ" ಎಂದು ಆಶೀರ್ವದಿಸಿದ್ದರು.

ಕೊಟ್ಟೂರಿನಲ್ಲಿ ಬಸವೇಶ್ವರ ಜಾತ್ರೆಯ ನಡೆದಿತ್ತು. ಚಿಂದೋಡಿ ವೀರಪ್ಪ ನವರ ನಾಟಕ ಕಂಪನಿ, ಗೋಕಾಕ ರವರ ನಾಟಕ ಕಂಪನಿ, ಬಯಲಾಟ ಹಾಗೂ

ಮಹಿಳೆಯರ ತಂಡದಿಂದ ಒಂದು ತಂಡ ಬಂದಿದ್ದವು. ಇಷ್ಟೆಲ್ಲಾ ನಾಟಕ ಕಂಪನಿಗಳಿರಬೇಕಾದರೆ ನಾಟಕದ ಆರ್ಥಿಕ ಪರಿಸ್ಥಿತಿ ಕುಂಠಿತವಾಗಬಹುದೇ ಎಂಬ ಆತಂಕವಿದ್ದರೂ ಅಜ್ಜನವರ ನಾಟಕ ಕಂಪನಿಯು ಗೌಡ್ರ ಗದ್ಲ ನಾಟಕ ಯಶಸ್ವಿಯಾಯಿತು. ಅದೇ ಸಂದರ್ಭದಲ್ಲಿ 'ಕೊಟ್ಟೂರು ಬಸವೇಶ್ವರ ಮಹಾತ್ಮೆ' ನಾಟಕವನ್ನು ಆಡಲಾಯಿತು. ಈ ನಾಟಕದಲ್ಲಿ ಹಾಸ್ಯ ಪಾತ್ರ ಬಸಮ್ಮಳಾಗಿ ಸಂಜೀವಪ್ಪನವರು ಬಹಳ ಚಂದ ಮಾಡುತ್ತಿದ್ದರು. ಮುಂದೆಯೇ ಅಜ್ಜನವರು ಪೆಟ್ಟಿಗೆ ಹಿಡಿದು ಕುಳಿತಿದ್ದರು. ಆ ಸಂದರ್ಭದಲ್ಲಿ ಬಸಮ್ಮನ ಪಾತ್ರಧಾರಿ ಸಂಜೀವಪ್ಪ ಹಾಡುವ ಮಕ್ಕಳು ಬೇಕು ಎಂಬ ತುಂಟ  ಹಾಡು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿ 'ಒನ್ಸಮೋರ್' ಎಂದಾಗ ಅಜ್ಜನವರು ಆ ಹಾಸ್ಯ ಪಾತ್ರದ ಇಬ್ಬರನ್ನು ಕರೆಯಿಸಿ ಮತ್ತೊಮ್ಮೆ ಹಾಡಿಸಿದ್ದರು.

ಹೊಳೆಆಲೂರಿನಲ್ಲಿ 'ಕೊರವಂಜಿ' ನಾಟಕ ನಡೆದ ಸಂದರ್ಭದಲ್ಲಿ ಉಮಾಶ್ರೀ ಬರುವರೆಂದು ತಿಳಿದ ಜನ ಬಂಡಿಗಳಲ್ಲಿ, ಟ್ರ್ಯಾಕ್ಟರ್‌ಗಳಲ್ಲಿ ಇತರೆ ವಾಹನಗಳಲ್ಲಿ ಬಂದಿದ್ದರು. ಉಮಾಶ್ರೀ ಬಂದ ಕೂಡಲೆ ಜನರ ಗಲಾಟೆ ಬಹಳವಾಗಿ ಸುತ್ತಲೂ ಹಾಕಿದ್ದ ತಗಡುಗಳು ಬಿದ್ದು ಹೋದವು. ಗಲಾಟೆಯನ್ನು ನಿಯಂತ್ರಿಸಲು ಉಮಾಶ್ರೀಯವರು ತಾವೆ ನೇರವಾಗಿ ಮಾತಾಡುತ್ತಾ "ದಯವಿಟ್ಟು ಶಾಂತರಾಗಿ ಹಿಂದೆ ನಿಂತಿರುವ ನೀವು ಶಾಂತರಾಗಿರಿ, ನನ್ನ ತಮ್ಮನವರ ನಾಟಕ ನೋಡಲು ಅಜ್ಜನವರು ನನ್ನನ್ನು ಆಶೀರ್ವದಿಸಿ ಇಲ್ಲಿಗೆ ಕಳುಹಿಸಿದ್ದಾರೆ. ಅಜ್ಜನವರು ಜೀವನದುದ್ದಕ್ಕೂ ಶಾಂತರಾಗಿ ಅಂಧ ಅನಾಥರ ಸೇವೆ ಮಾಡುತ್ತಿದ್ದಾರೆ. ನೀವೆಲ್ಲಾ ಕೆಲಹೊತ್ತು ಸುಮ್ಮನಾಗಿರಿ. ನೀವು ನಿಂತ ಜಾಗದಲ್ಲಿಯೇ ಟ್ರ್ಯಾಕ್ಟರಗಳನ್ನು ಅಡ್ಡ ನಿಲ್ಲಿಸಿಕೊಂಡು ಅದರ ಮೇಲೆ ಕುಳಿತು ಅರಾಮವಾಗಿ ನೋಡಬಹುದು" ಎಂದಾಗ ಚಪ್ಪಾಳೆಗಳ ಮಳೆಸುರಿದು ಶಾಂತರಾದ ಜನ ವಾಹನಗಳ ಮೇಲೆ ನಿಂತು ನಾಟಕ ನೋಡಿದ್ದರು. ಆ ಸಮಯದಲ್ಲಿ ಉಮಾಶ್ರೀಯವರು ಹಾಡಿದ್ದರು ಮತ್ತು ಮಾತಾಡಿದ್ದರು.

ನಟಿ ಉಮಾಶ್ರೀಯವರಿಗೆ ನಾಟಕ ಕಂಪನಿಯಿಂದ ಟೋಪಿ ಸೆರಗಿನ ಸೀರೆ ಉಡಿ ತುಂಬಲಾಯಿತು. ತಕ್ಷಣವೇ ಸೀರೆ ಬದಲಿಸಿಕೊಂಡು ಬಂದು ಜನರನ್ನು ಕುರಿತು ಮಾತಾಡಿದ್ದರು. ಇದೆಲ್ಲಾ ಅಜ್ಜನ ಆಶೀರ್ವಾದ ಎಂದು ನುಡಿದಾಗ ತುಂಬಿದ್ದ ಜನರು ಚಪ್ಪಾಳೆಗಳ ಸುರಿಮಳೆ ಮಾಡಿದ್ದರು. ಅಂದು ಕೊರವಂಜಿ ನಾಟಕವನ್ನು ನೋಡಿದ್ದರು. ಆ ನಾಟಕದಲ್ಲಿನ ಸಂಜೀವಪ್ಪ ನಟಿಸಿದ ಶಾಂತಾ ಪಾತ್ರ ನೋಡಿ ಭಾವುಕರಾಗಿದ್ದರು. ಸಂಜೀವಪ್ಪನ ಪಾತ್ರಾಭಿನಯ ನೋಡಿ "ಅದ್ಭುತ ನಟನೆ ನಿಮ್ಮದು, ಬಹಳ ಖುಷಿಯಾಯಿತು. ನಿಮ್ಮ ಹಾಗೆ ನಟಿಸಲು ಹೆಣ್ಮಕ್ಕಳಿಗೂ ಬರಲ್ಲ" ಎಂದು ಕೈಮುಗಿದಿದ್ದರು. ಆ ಸಮಯದ ಉಮಾಶ್ರೀಯನ್ನು ನೋಡಿದ ಸಂಜೀವಪ್ಪನವರು "ಅಷ್ಟೊಂದು ಹೆಸರಾಗಿದ್ದರೂ ಸರಳ, ಗರ್ವದ ಕಿಂಚಿತ್ತು

ಗವ್ವನ್ನೂ ಸುಳಿಯದ ನಟಿ, ಕಲಾವಿದರನ್ನು ಅಷ್ಟೇ ಗೌರವದಿಂದ ಕಾಣುತ್ತಾರೆ" ಎಂದು ನೆನಪಿಸಿಕೊಳ್ಳುತ್ತಾರೆ.

## ಯರಂಗಿಳಿ ಶಿವಣ್ಣ, ಸುಭದ್ರಮ್ಮ ಮನ್ಸೂರು

ಒಂದುಸಲ ಕುರುಗೋಡಿನಲ್ಲಿ ದೊಡ್ಡಬಸವೇಶ್ವರ ಜಾತ್ರೆ ಸಂದರ್ಭದಲ್ಲಿ ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ನಾಟಕ ನಡೆದಿತ್ತು ಅದರಲ್ಲಿ ಮಾದೇವಿ ಪಾತ್ರದಲ್ಲಿ ಸಂಜೀವಪ್ಪ ಇದ್ದರು. ಯರಂಗಳಿ ಶಿವಣ್ಣನವರು ಚಿತ್ತರಂಜನಿಯ ಪಾತ್ರದಲ್ಲಿ ನೃತ್ಯವನ್ನು ಮಾಡಿದಾಗ ಹುಚ್ಚಾದ ಪ್ರೇಕ್ಷಕರು ಶಿಳ್ಳೆ ಹೊಡೆಯಲು ಕೇಕೆ ಹೊಡೆಯಲು ಗದ್ದಲವಾಯಿತು. ನಾಟಕ ನಿಂತಿತು. "ಇಲ್ಲಿ ಪಾತ್ರ ಮಾಡಿದವರು ನಿಮ್ಮ ಹಾಗೆ ಗಂಡಸರು. ಇಲ್ಲಿ ಯಾರು ಹೆಣ್ಣ ಮಕ್ಕಳು ಪಾತ್ರ ಮಾಡಿಲ್ಲ. ಇದು ಕಲಾಭೂಮಿ ನೀವೆಲ್ಲಾ ಕಲಾವಿದರನ್ನು ಗೌರವಿಸಲು ಸಂತೋಷವಾದರೆ ಚಪ್ಪಾಳೆ ಹೊಡೆಯಿರಿ ಆದರೆ ಗಲಾಟೆ ಬೇಡ" ಎಂದು ಮೈಕಿನಲ್ಲಿ ಹೇಳಿದಾಗ ನಾಟಕ ಮತ್ತೆ ಆರಂಭವಾಯಿತು. ಈ ಚಿತ್ತರಂಜನಿಯ ಪಾತ್ರವನ್ನು ಒಂದಲ್ಲ ಒಂದು ಸಲ ಮಾಡಬೇಕೆಂಬ ಆಸೆ ಸಂಜೀವಪ್ಪನಿಗಿತ್ತು. ಅದಕ್ಕೂ ಪಾಳಿ ಬರಲಿ ಎಂದು ಕಾಯುತ್ತಿದ್ದರು. ಯರಂಗಳಿ ಶಿವಣ್ಣನ ನಂತರ ಉಜಿನಿ ಕ್ಯಾಂಪ್‌ನಿಂದ ಆ ಪಾತ್ರವನ್ನು ಸಂಜೀವಪ್ಪ ಮಾಡಿದರು. ಕೊಟ್ಟ ಪಾತ್ರವನ್ನು ಕಲಾತ್ಮಕವಾಗಿ ನಟಿಸುವ ಜಾಣ್ಮೆ ಸಂಜೀವಪ್ಪನಿಗಿತ್ತು. ಅಂತೆಯೇ ಅಂದು ಅತಿಥಿಯಾಗಿದ್ದ ಹೆಸರಾಂತ ರಂಗನಟಿ ಸುಭದ್ರಮ್ಮ ಮನ್ಸೂರುರವರು ಸಂಜೀವಪ್ಪನ ಮಾಹಾದೇವಿ ಪಾತ್ರದ ನಟನೆಯನ್ನು ನೋಡಿ ಕಣ್ತುಂಬಾ ಹೊಗಳಿದ್ದರು.

## ಬದುಕುಗಳ ಬದಲಾಯಿಸಿದ ಪಾತ್ರಗಳು

"ನಾಟಕಗಳು ಬರೀ ಮನೋರಂಜನೆಯ ವಸ್ತುವಾಗಿರಲಿಲ್ಲ. ಎಷ್ಟೋಸಲ ಅವು ಬದುಕುಗಳನ್ನು ಬದಲಾಯಿಸಿವೆ. ಅಂತೆಯೇ ವ್ಯವಸ್ಥೆಯನ್ನೂ ಸಹ ಬದಲಾಗಿಸಿವೆ. ಮಾರುತೇಶ ಮಾಂಡ್ರೆ ವಿರಚಿತ 'ಮಹಾಲಿಂಗೇಶ್ವರ ಮಹಾತ್ಮೆ' ನಾಟಕದಲ್ಲಿನ ಕಣ್ಣಿಲ್ಲದ ನೀಲಮ್ಮನ ಪಾತ್ರದ ಮಾತಿನ ಮೂಲಕ ಪ್ರೇರಿತರಾದ ಜನರು ತಮ್ಮ ಊರಿನ ಅವ್ಯವಸ್ಥೆಯನ್ನು ಸರಿಪಡಿಸಿಕೊಂಡಿದ್ದಾರೆ ಎಂದು ಹೇಳುವ ಸಂಜೀವಪ್ಪನವರು "ನಾಟಕ ಒಂದು ಪ್ರಭಾವಿ ಮಾಧ್ಯಮವಾಗಲು ಬರೀ ನಟರಿದ್ದರಷ್ಟೇ ಸಾಲದು, ನಾಟಕವನ್ನು ಬರೆಯುವವರು ಮತ್ತು ಅವರು ಸಮಾಜದ ಬಗೆಗೆ ಇಟ್ಟುಕೊಂಡಿರುವ ಕಾಳಜಿಯೂ ಕೂಡಾ ಮುಖ್ಯ" ಎನ್ನುತ್ತಾರೆ.

ನೆಲ್ಲೂರು ನಂಬೆಕ್ಕ, ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ, ಶಿವಶರಣೆ ಅಕ್ಕ ಮಹಾದೇವಿ ಮತ್ತು ಇತರೆ ಮೌಲಿಕ ನಾಟಕಗಳಿಂದ ಜನ ತಮ್ಮ ವರ್ತನೆಗಳನ್ನು ಬದಾಲಾಯಿಸಿಕೊಂಡಿದ್ದಾರೆ. ನಾಟಕ ನೋಡಿದ ಮರುದಿನ ಬಂದು ಅವರು ತಮ್ಮ ತಪ್ಪುಗಳನ್ನು ತಿದ್ದಿಕೊಂಡ ಬಗೆಗಳನ್ನು ತಿಳಿಸಿದ್ದಾರೆ. ಅಂತೆಯೇ ಅವರ

ಊರಿನಲ್ಲಿದ್ದ ನಾಟಕ ಕಂಪನಿಯು ಬೇರೊಂದು ಊರಿಗೆ ತೆರಳುವಾಗ ಆ ಕಂಪನಿಯು ಬದಲಾಯಿತು. ಬೇರೆ ಊರಿಗೆ ಹೋಗುವುದೆಂದು ತಿಳಿದು ಕೆಲವು ಸಲ ಬೀಳ್ಕೊಡಲು ಊರಿಗೆ ಊರೆ ಬಂದುದನ್ನು ಸಂಜೀವಪ್ಪ ಕಣ್ಣಾರೆ ಕಂಡುದುದನ್ನು ಹೇಳುವಾಗ ಕಣ್ಣಲ್ಲಿ ನೀರು ತಾನಾಗಿಯೇ ಕಾಣಿಸಿಕೊಳ್ಳತ್ತದೆ.

ಎಷ್ಟೋ ಹೆಣ್ಣು ಮಕ್ಕಳು ನಾಟಕಗಳಿಂದ ಪ್ರಭಾವಿತರಾಗಿ ತಮ್ಮ ದೇವದಾಸಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ವೇಶ್ಯಾವೃತ್ತಿಯನ್ನು ಬಿಟ್ಟಿದ್ದಾರೆ. ಸಂಪೂರ್ಣ ಹೇಮರೆಡ್ಡಿಯ ಮಲ್ಲಮ್ಮನ ನಾಟಕದಲ್ಲಿನ ಚಿತ್ತರಂಜನಿಯ ಪಾತ್ರ ಹೇಗೆ ಬದುಕುಗಳನ್ನು ನಿರ್ನಾಮ ಮಾಡುತ್ತದೆ ಎಂದು ತಿಳಿದು ವೇಶ್ಯೆಯರ ಸಂಗವನ್ನು ಬಿಟ್ಟು ಬಂದ ಗಂಡಸರನ್ನು ಸಂಜೀವಪ್ಪ ಕಣ್ಣಾರೆ ಕಂಡಿದ್ದಾರೆ. ಅವರೇ ಹೇಳುವಂತೆ "ಭಕ್ತಿ ಪ್ರಧಾನ ನಾಟಕಗಳು ಬದುಕನ್ನು ತಿದ್ದಿದವು" ಎನ್ನುತ್ತಾರೆ. "ನಾಟಕಗಳನ್ನು ನೋಡಲು ಜನ ಮುಗಿಬೀಳುತ್ತಿದ್ರು. ಒಂದೊಂದು ಊರಿನಲ್ಲಿ ತಿಂಗಳುಗಟ್ಟಲೆ ಪ್ರದರ್ಶನ ನಡೆಯುತ್ತಿದ್ದುದೇ ಇದಕ್ಕೆ ಉದಾಹರಣೆ ಎನ್ನುತ್ತಾರೆ" ಸಂಜೀವಪ್ಪನವರು.

ನಾಟಕ ಕಂಪನಿಯ ಎಲ್ಲಾ ಕಲಾವಿದರಿಗೆ ಬೆಳಗಿನ ಮತ್ತು ಮಧ್ಯಾಹ್ನದ ಸಮಯದಲ್ಲಿ ಊರಿನ ಭಕ್ತರಿಂದ ದಾಸೋಹ ಇರುತ್ತಿತ್ತು. ಎಷ್ಟೇ ಜನರಿದ್ದರೂ ಸರಿ ಭಕ್ತರ ಭಿನ್ನ ಸಾಗುತ್ತಿತ್ತು. ರಾತ್ರಿ ಮಾತ್ರ ನಾಟಕದ ಕಂಪನಿಯಲ್ಲಿಯೇ ಅಡುಗೆ ಮಾಡಿ ಕಂಪನಿಯಿಂದಲೇ ಊಟ ಮಾಡಿಸಲಾಗುತ್ತಿತ್ತು. ರಾತ್ರಿ ನಾಟಕ ಮುಗಿದ ಮೇಲೆ ಎಲ್ಲರೂ ಊಟ ಮಾಡುತ್ತಿದ್ದರು. ಆ ಸಂದರ್ಭದಲ್ಲಿಯೂ ಎಷ್ಟೋ ಭಕ್ತರು ಅಡುಗೆಯನ್ನು ಮಾಡಿಕೊಂಡು ತಂದು ಕೊಡುತ್ತಿದ್ದರು. ಸಂಜೀವಪ್ಪನವರೇ ಹೇಳುವಂತೆ "ಆಗ ಭಕ್ತರು ತಮ್ಮ ಸೇವೆಯನ್ನು ಮನಸಾರೆ ಮಾಡುತ್ತಿದ್ದರು. ಅಂತೆಯೇ ನಾಟಕವನ್ನು ನೋಡಲು ದಂಡಿಗೆ ದಂಡೇ ಬರುತ್ತಿದ್ದರು. ಒಂದುಸಲ ಮುಧೋಳ ತಾಲೂಕಿನ ತೇರದಾಳದಲ್ಲಿ ಶಿವಶರಣೆ ಅಕ್ಕಮಹಾದೇವಿ ನಾಟಕ ನಡೆದಿತ್ತು. ನಾಟಕದಲ್ಲಿ ಪ್ರಭುದೇವರು ಮತ್ತು ಅಕ್ಕನ ಚರ್ಚೆ ನಡೆದಿತ್ತು. ತಲ್ಲೀನರಾಗಿ ನಾಟಕ ನೋಡುವಾಗ ಪ್ರೇಕ್ಷಕರ ಒಂದು ಮಗು ಅಳಲು ಶುರುಮಾಡಿತು. ಇನ್ನೇನು ತನ್ನ ಅಳು ನಿಲ್ಲಿಸಬಹುದೆಂದು ಅಂದುಕೊಂಡಿದ್ದ ಪ್ರೇಕ್ಷಕರಿಗೆ ನಿರಾಸೆಯಾಯಿತು. ತಕ್ಷಣವೇ ನಾಟಕ ನಡೆಯುವಾಗ ಪ್ರೇಕ್ಷಕರ ಮಧ್ಯದಿಂದ ಒಬ್ಬಾತ ಕೈ ಮುಗಿಯುತ್ತಾ 'ಮಗುವನ್ನು ಎದೆ ಹಾಲಿಗೇ ಹಾಕಿಕೋ ತಾಯಿ' ಎಂದು ಕೇಳಲು ಆ ತಾಯಿ ಮಗುವನ್ನು ಸುಮ್ಮನಾಗಿಸಿದಳು." ಇದನ್ನು ಬಣ್ಣಿಸಿಕೊಳ್ಳುವ ಸಂಜೀವಪ್ಪ ಈ ತರಹದ ಪ್ರೇಕ್ಷಕರ ಕೊರತೆ ಈಗ ಇದೆ ಎನ್ನುತ್ತಾರೆ. ಪ್ರೋತ್ಸಾಹಿಸುವ ಪ್ರೇಕ್ಷಕರು ಆಗ ಇದ್ದುದರಿಂದಲೇ ತನ್ಮಯರಾಗಿ ನಾಟಕವನ್ನು ಅಭಿನಯಿಸಲಾಗುತ್ತಿತ್ತು.

## ಯಲಿವಾಳ ಸಿದ್ದಯ್ಯ

ಪ್ರಸಿದ್ಧ ರಂಗನಟ ಎಲಿವಾಳ ಸಿದ್ದಯ್ಯನವರ ಜೊತೆ ಅಭಿನಯಿಸಿದ ಅನೇಕ

ಪ್ರಸಂಗಗಳು ಇವರೊಡಲಲ್ಲಿವೆ. ಅವರೇ ಹೇಳುವಂತೆ ಹುಬ್ಬಳಿಯಲ್ಲಿ ನಾಟಕದ ಕ್ಯಾಂಪ್ ನಡೆಯುತ್ತಿರುವಾಗ 'ಕೊಟ್ಟೂರು ಬಸವೇಶ್ವರ ಮಹಾತ್ಮೆ' ನಾಟಕದಲ್ಲಿ ಯಲಿವಾಳ ಸಿದ್ದಯ್ಯನವರು ಅಕ್ಬರನ ಪಾತ್ರದಲ್ಲಿ ಇರುವಾಗ ದರ್ಬಾರಿನಲ್ಲಿ ಸಿಂಹಾಸನದ ಮೇಲೆ ಕೊಟ್ಟೂರು ಬಸವೇಶ್ವರ ಬಂದು ಕುಳಿತಿರುವ ಸನ್ನಿವೇಶ. ಆ ಸಮಯದಲ್ಲಿ ಅಕ್ಬರನ ಪಾತ್ರಧಾರಿಯಾದ ಯಲಿವಾಳ ಸಿದ್ದಯ್ಯನವರು 'ಯಾರು ನೀನು?' ಎಂದಾಗ, "ನಾನ್ಯಾರೆಂದು ನಿನ್ನ ಅಲ್ಲಾನನ್ನು ಸ್ಮರಿಸಿಕೋ ತಿಳಿಯುತ್ತದೆ" ಎಂದ ಕೊಟ್ಟೂರು ಬಸವೇಶ್ವರ ನುಡಿವನು. ತಕ್ಷಣವೇ ಅಕ್ಬರನ ಪಾತ್ರಧಾರಿ ಯಲಿವಾಳ ಸಿದ್ದಯ್ಯನವರು "ಅಲ್ಲಾ ಹೋ ಅಕ್ಬರ್" ಎನುತ ಧ್ಯಾನಾಸಕ್ತನಾದಾಗ ನಾಟಕ ನೋಡಲು ಮುಂದಿನ ಸಾಲಿನಲ್ಲಿ ಕುಳಿತ ಕೆಲವು ಮುಸಲ್ಮಾರು ಎದ್ದು ನಿಂತು ಗೌರವವನ್ನು ಸೂಚಿಸಿದರು. ಇದನ್ನು ಕಾಣುವ ಸಂಜೀವಪ್ಪ ಯಲಿವಾಳ ಸಿದ್ದಯ್ಯನವರ ಪಾತ್ರದ ಪರಕಾಯ ಪ್ರವೇಶವನ್ನು ಕಂಡುಕೊಂಡರು.

ಸತತ ಒಂಬತ್ತು ವರ್ಷಗಳಕಾಲ ಅಜ್ಜನವರ ನಾಟಕದ ಕಂಪನಿಯಲ್ಲಿ ಪಾತ್ರಧಾರಿಯಾದ ಯಲಿವಾಳ ಸಿದ್ದಯ್ಯನವರು ಸಂಜೀವಪ್ಪನ ಜೊತೆ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕದಲ್ಲಿ ಭರಮರೆಡ್ಡಿಯಾಗಿ ಅಭಿನಯಿಸಿದ್ದರು. ಸಂಜೀವಪ್ಪ ನಾಗಮ್ಮನಾಗಿ ಅಭಿನಯಿಸಿದ್ದರು. ಭರಮರೆಡ್ಡಿಯನ್ನು ಹೀಯಾಳಿಸಿ ಹುಚ್ಚ ಎನ್ನುವ ನಾಗಮ್ಮನ ಮಾತಿಗೆ ತನ್ನ ಅವ್ವನ ಮುಂದೆ "ಯವ್ವಾ ನಾಗಮ್ಮ ನನ್ನ ಹುಚ್ಚ ಅಂತಾಳ, ನನ್ನ ಸೇರೋದೆ ಇಲ್ಲ, ನಾನು ಹುಲಿ ಮರಿಯಲ್ಲ ಇಲಿಮರಿ ಅಂತಾಳ. ನೀನಾರ ಹೇಳವ್ವಾ" ಎಂದಾಗ ನಾಗಮ್ಮ ಮತ್ತೆ ಹೀಯಾಳಿಸುವಳು. ಆ ಮಾತಿಗೆ ಸಿಟ್ಟಿಗೆದ್ದ ಭರಮರೆಡ್ಡಿ ಪಾತ್ರದಲ್ಲಿದ್ದ ಯಲಿವಾಳ ಸಿದ್ದಯ್ಯನವರು. "ನನ್ನ ಇಲಿ ಅಂತೀಯಾ ನೋಡು ನಾನು ಹುಲಿ" ಎಂದು ಹೇಳಿ ಸಿಂಹಘರ್ಜನೆ ಮಾಡಿ ಆಕೆಯ ಮೇಲೇರಿ ಹೋಗಿ ಮ್ಯಾಲೆ ಬಿದ್ದು ಉರುಳಾಡಿದರು.

ಆ ಪಾತ್ರದ ಸಂದರ್ಭ ಅವರ ಅಭಿನಯ ನೋಡಿ ಸಂಜೀವಪ್ಪ ಎಚ್ಚರ ತಪ್ಪಿ ಬಿದ್ದೇಬಿಟ್ಟರು. ಎಂತಹ ಅದ್ಭುತ ನಟನೆ ಎಂದು ತಿಳಿದು ಅವರ ಪಾತ್ರಕ್ಕೆ ಮರುಳಾಗಿ, ಪಾತ್ರದ ಪರಕಾಯ ಪ್ರವೇಶವನ್ನು ನೋಡಿ, ಸನ್ನಿವೇಶ ಮುಗಿದ ನಂತರ ಪರದೆಯ ಹಿಂದೆ ಹೋಗಿ "ನೀವು ದೊಡ್ಡವರಪ್ಪಾ" ಅಂತ ಸಾಷ್ಟಾಂಗ ಹಾಕಿ ನಮಸ್ಕರಿಸಿದ್ದರು. ಒಂದು ಸಲ ಹೂವಿನ ಹಡಗಲಿಯಲ್ಲಿ 'ಕೊರವಂಜಿ' ನಾಟಕದ ಸಮಯದಲ್ಲಿ ಕುಡಿತವನ್ನು ಚಟವನ್ನಾಗಿಸಿಕೊಂಡ ಮಹಾನ್‌ನಟರೊಬ್ಬರು, ನಾಟಕ ಇನ್ನು ಎರಡು ತಾಸು ಇರುವಾಗಲೇ ಕುಡಿದು ಎಚ್ಚರತಪ್ಪಿ ಮಲಗಿರುವುದನ್ನು ಕಂಡ ಸಂಜವಪ್ಪನವರು ಹೀಗೆ ಆದರೆ ಈದಿನ ನಾಟಕ ಕೆಡಬಹುದೆಂದು ತಿಳಿದು ಕಲ್ಮೇಶ ಹೂಗಾರರವರ ಜೊತೆಗೂಡಿ ಉಳ್ಳಾಗಡ್ಡಿಯನ್ನು ಜಜ್ಜಿ ಮೂಗಿಗೆ ಹಿಡಿದು ಎಬ್ಬಿಸಿದ್ದರು. ಅದೇ ನಟನ ಅಂದಿನ ನಾಟಕದ 'ರುದ್ರನ ಹಾಸ್ಯ' ಪಾತ್ರವನ್ನು

ನೋಡಿದ ಸಂಜೀವಪ್ಪನವರು ದೊಡ್ಡ ನಟರಿಗೆ ಇಂತಹ ದೌರ್ಬಲ್ಯಗಳು ಇರಬಾರದೆಂದು ಈಗಲೂ ಮರುಗುತ್ತಾರೆ.

## ಸಾಯಲು ಬಂದವನು ಬದುಕಿದ!

೧೯೬೮ರಲ್ಲಿ ರಾಯಚೂರು ಕ್ಯಾಂಪ್ ಇದ್ದಾಗ ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ನಾಟಕ ಪ್ರಯೋಗ ನಡೆದಿತ್ತು. ಆ ನಾಟಕಕ್ಕೆ ಜನರನ್ನು ಸೆಳೆಯಲು ಪ್ರಚಾರವನ್ನು ಕೂಡಾ ಮಾಡಲಾಗಿತ್ತು. ಪ್ರಚಾರದ ವಾಹನ ರೈಲು ನಿಲ್ದಾಣದ ಬಾಗದಲ್ಲಿ ತನ್ನ ಕೆಲಸವನ್ನು ಆರಂಭಿಸಿತ್ತು. ಅಲ್ಲಿಯೇ ಪಕ್ಕದಲ್ಲಿಯೇ ಇರುವ ರೈಲು ಹಳಿಯ ಮೇಲೆ ಸಾಯಲೆಂದು ಬಂದ ಹಿರೇಕೆರೂರು ತಾಲ್ಲೂಕಿನ ಚಿಕ್ಕೇರಿಯ ಪಕ್ಕದಲ್ಲಿನ ಸಾತನಳ್ಳಿಯ ಹುಡುಗ ಜೀವನದ ಮೇಲೆ ಬೇಸರವಾಗಿ ಸಾಯಲೆಂದು ರೈಲು ಹಳಿಯ ಮೇಲೆ ನಡೆಯುತ್ತಾ ರೈಲಿಗಾಗಿ ಕಾಯುತ್ತಿದ್ದನು. ಅದೇ ಸಂದರ್ಭದಲ್ಲಿ ನಾಟಕದ ಪ್ರಚಾರದ ಶಬ್ದವನ್ನು ಕೇಳಿ ಇವತ್ತೊಂದು ದಿನ ನಾಟಕ ನೋಡಿದರಾಯಿತು ಎಂದು ಯೋಚಿಸಿದವನು ಅಲ್ಲಿಂದ ವೀರಭದ್ರೇಶ್ವರ ಥೇಟರ್‌ನಲ್ಲಿ ನಡೆಯುತ್ತಿದ್ದ ನಾಟಕ ನೋಡಲು ಬಂದನು.

ಅಲ್ಲಿಗೆ ಕುಂಟುತ್ತಾ ಬಂದ ಹುಡುಗ ಹೊರಗಡೆ ನಿಂತಿದ್ದ ಸಂಜೀವಪ್ಪನನ್ನು ಮಾತನಾಡಿಸಿದನು. "ನಾನು ಸಾತನಳ್ಳಿ ಊರಿನವನು. ಜೀವನ ಜಿಗುಪ್ಸೆಯಾಗಿ ಸಾಯಲು ಹೊರಟಿದ್ದೆ. ನಿಮ್ಮ ನಾಟಕ ಕಂಪನಿ ಪ್ರಚಾರ ನೋಡಿ ನಾಟಕ ನೋಡೋಣ ಅಂತ ಬಂದೆ." ಎಂದನು. ಆಗ ಸಂಜೀವಪ್ಪನವರು, "ತಮ್ಮಾ ನೀ ಸಾಯಬೇಡ. ಇದು ಅಂಥ ಅನಾಥರಿಗೆ ಸೇವೆ ಮಾಡುವ ಗದುಗಿನ ಗಾನಯೋಗಿ ಪಂಚಾಕ್ಷರ ಗವಾಯಿಗಳವರ ನಾಟಕ ಕಂಪನಿ. ಕಣ್ಣಿಲ್ಲದ ಮಹಾತ್ಮರು ಕಣ್ಣಿಲ್ಲದವರ ಸೇವೆ ಮಾಡಾಕ ನಿಂತಾರ. ಅಂಥಾದ್ದರಲ್ಲಿ ನೀನ್ಯಾಕ ಸಾಯೋ ಕೆಲ್ಸ ಮಾಡ್ತಿ. ಅಜ್ಜನ ಆಶೀರ್ವಾದ ತಗೋ ಇಲ್ಲಿದ್ದು ಸೇವೆ ಮಾಡು" ಎಂದಾಗ. "ಆಯ್ತು ನಾಟಕ ನೋಡಿ ನಿಮ್ಮ ಜೊತೆಗೆಯೇ ಇರ್ತೀನಿ" ಎಂದವನು ಸುಮಾರು ಆರು ವರ್ಷಗಳ ಕಾಲ ನಾಟಕ ಕಂಪನಿಯಲ್ಲಿ ಸೇವೆ ಮಾಡ್ತಾ, ನೋಡ್ತಾ, ಸಣ್ಣಸಣ್ಣ ಪಾತ್ರ ಮಾಡ್ತಾ ಇದ್ದನು. ಹಾಗೇ ಕಂಪನಿ ಜೊತೆ ತಿರುಗಾಡ್ತಾ ಗದುಗಿಗೂ ಬಂದನು. ಅಲ್ಲಿಗೆ ಬಂದ ಕೂಡಲೆ ಊರಿಗೆ ಹೋಗಿ ಬರ್ತೀನಿ ಅಂತ ಹೇಳಿ ಹೋದವನು ಮತ್ತೆ ತಿರುಗಿ ಬರಲಿಲ್ಲ. ಆಗ ಫೋನುಗಳೂ ಇರಲಿಲ್ಲ. ಯಾಕೆ ಬಂದಿಲ್ಲ ಅಂತ ಕೇಳಲಿಲ್ಲ. ಸುಮ್ಮನಾಗಿ ಸ್ವಲ್ಪ ದಿನ ಕಳೆಯಿತು.

ನಾಟಕದ ಕ್ಯಾಂಪುಗಳು ಬದಲಾಗ್ತಾ ಬದಲಾಗ್ತಾ ಹಿರೇಕೆರೂರಿನ ಚಿಕ್ಕೇರಿಗೆ ಬಂತು. ಪ್ರಚಾರದ ವಾಹನ ಊರೂರು ತಿರುಗ್ತಾ ನಾಟಕದ ಪ್ರಚಾರ ಮಾಡ್ತಾ ಚಿಕ್ಕೇರಿಯ ಹತ್ತಿರದ ಸಾತನಳ್ಳಿಗೆ ಬಂತು. ಮೈಕಿನಲ್ಲಿ ಅಜ್ಜನವರ ನಾಟಕ ಕಂಪನಿಯ ಹೆಸರನ್ನು ಕೇಳಿಸಿಕೊಂಡ ಆ ಹುಡುಗನ ಕಿವಿ ಚುರುಕಾದವು. ಅಲ್ಲಿಂದ ಓಡುತ್ತಾ

ಬಂದು ಪ್ರಚಾರದ ವಾಹನವನ್ನು ಅಡ್ಡಗಟ್ಟಿ ಪ್ರಚಾರ ಮಾಡಲು ಬಂದವರನ್ನು ಮನೆಗೆ ಕರೆದು ಸತ್ಕರಿಸಿದನು. ಅವರಿಗೆ "ನಾಟಕದ ಕ್ಯಾಂಪ್ ರಾಯಚೂರಿನಲ್ಲಿರುವಾಗ ಸಾಯಲು ಬಂದ ನನ್ನ ಉಳಿಸಿದ್ದೆ ನಾಟಕ ಕಂಪನಿ" ಎಂದು ತನ್ನ ಬಗ್ಗೆ ಹೇಳಿಕೊಂಡನು. ಕುಟುಂಬದವರಿಗೆಲ್ಲಾ ಈ ವಿಷಯ ಹೇಳಲು ಎಲ್ಲರೂ ಖುಷಿಯಾಗಿ ರಾತ್ರಿ ನಾಟಕ ನೋಡಲು ಟ್ರ್ಯಾಕ್ಟರ್‌ನಲ್ಲಿ ಜನರನ್ನು ತುಂಬಿಕೊಂಡು ಬಂದನು. ಪ್ರದರ್ಶನ ಮುಗಿದ ಮೇಲೆ ಎಲ್ಲರನ್ನು ಭೆಟ್ಟಿಯಾಗಿ ಮಾತಾಡಿಸಿದನು. ನಾಟಕಕ್ಕೆ ಎಲ್ಲಾರೀತಿಯ ಸಹಾಯ ಮಾಡಿದನು. ಅಲ್ಲಿರುವವರೆಗೂ ಕಲಾವಿದರ ಊಟದ ವ್ಯವಸ್ಥೆ ಮಾಡಿದ್ದನು.

ಅಂತೆಯೇ ತನ್ನನ್ನು ಪ್ರೋತ್ಸಾಹಿಸಿ ಜೀವ ಉಳಿಸಲು ಕಾರಣವಾಗಿದ್ದ ಸಂಜೀವಪ್ಪನವರನ್ನು ಮತ್ತು ಅವರ ಕುಟುಂಬವನ್ನು ಟ್ರ್ಯಾಕ್ಟರನಲ್ಲಿ ಕರೆದುಕೊಂಡು ಹೋಗಿ ಸತ್ಕರಿಸಿದ್ದನು. ಆತನ ತಂದೆ ತಾಯಿಗಳು "ನನ್ನ ಮಗ ಸಾಯುವುದನ್ನು ಉಳಿಸಿದವರು ನೀವು. ನಿಮ್ಮಿಂದಲೇ ನಮ್ಮ ಮಗ ಉಳಿದದ್ದು. ಜೀವ ನೀಡಿದ್ದೇ ನೀವೆಂದು" ಸಂಜೀವಪ್ಪನವರನ್ನು ಹೊಗಳಿದರು. ಸಂಜೀವಪ್ಪ ಬರೀ ಪಾತ್ರಧಾರಿಯಾಗಿ ಮಾತ್ರ ಯಶಸ್ವಿಯಾಗಿಲ್ಲ. ತನ್ನತ್ತ ಬಂದವರ ಕಣ್ಣೀರನ್ನು ತನ್ನ ಸಾಂತ್ವನದ ಮಾತಿನಿಂದ ಒರೆಸಿದ್ದರು. ಅವರೇ ಹೇಳುವಂತೆ ಯಾವಾಗೋ ಒಂದೆರಡು ಸಲ ಕೋಪಿಸಿಕೊಂಡ ನೆನಪು ಎಂದು ಹೇಳುತ್ತಾರೆ. ಮಾಡಿದ್ದೆಲ್ಲವೂ ಸಾತ್ವಿಕ ಗುಣದ ಪಾತ್ರಗಳಾದ್ದರಿಂದ ಬಣ್ಣ ಹಚ್ಚಿದಾಗಲಷ್ಟೇ ಅಲ್ಲ ಅದನ್ನು ಒರೆಸಿಕೊಂಡ ನಂತರವೂ ಆ ಪಾತ್ರವನ್ನು ಆವಾಹಿಸಿಕೊಂಡು ಅದರಂತೆಯೇ ಆಗಿಬಿಡುವ ಬಗೆ ಅವರಿಗೊಂದೇ ಸಿದ್ಧಿಸುವ ಕಲೆಮಾತ್ರ.

ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮನ ನಾಟಕದಲ್ಲಿ ನಾಗಮ್ಮನ ಪಾತ್ರಧಾರಿಯಾಗಿದ್ದಾಗ ವೇಷ ಮರೆಸಿಕೊಂಡು ಬಂದ ಮಲ್ಲಿಕಾರ್ಜುನನಿಗೆ ಬಾರಿಗೆಯಿಂದ ಹೊಡೆಯುವಾಗ ಇಡೀ ಪ್ರೇಕ್ಷಕರು ನಾಗಮ್ಮನ ವಿರೋಧಿಗಳಾಗುತ್ತಾರೆ. ಆದರೆ ಗ್ರೀನ ರೂಮಿನ ಒಳಗಡೆ ಮಲ್ಲಿಕಾರ್ಜುನನ ಪಾತ್ರಧಾರಿ ಸಂಜೀವಪ್ಪನಿಗೆ ಕೇಳುವ ಪ್ರಶ್ನೆ ಏನೆಂದರೆ, "ಸಂಜೀವಪ್ಪ, ನೀನು ಬಾರಿಗೆಯನ್ನು ಮೈಗೆ ಮುಟ್ಟಿಸೊದೆ ಇಲ್ಲ ಆದರೂ ನಿನ ಹೊಡೆತಕ್ಕೆ ಪ್ರೇಕ್ಷಕರು ಸಿಟ್ಟಿಗೇಳುವಂತೆ ಮಾಡ್ತಿಯಲ್ಲ. ಅದು ಹೇಗೆ?." ಎಂದಾಗ ಪಾತ್ರವೇ ತಾನಾಗುವ ಸಂಜೀವಪ್ಪ ಎಲ್ಲಾ ಅಜ್ಜಂದು ನನ್ನದೇನು ಇಲ್ಲ ಎಂದು ವಿನಯದಿಂದ ನುಡಿಯುತ್ತಾರೆ. ಅಂತೆಯೇ 'ಕೋಡಿಕೊಪ್ಪದ ಹುಚ್ಚೀರೇಶ್ವರ ಮಹಾತ್ಮೆ' ಮತ್ತು 'ನರಗುಂದ ಪತ್ರಿವನ ಮಹಾತ್ಮೆ' ಯಲ್ಲಿ ಕುಷ್ಟರೋಗಿಯ ಪಾತ್ರವನ್ನು ಮಾಡಿ ಪ್ರೇಕ್ಷಕರನ್ನು ಮೂಗಿನ ಮೇಲೆ ಬೆರಳಿಡುವಂತೆ ಮಾಡಿದ್ದಾರೆ. "ನಿನ್ನೆ ನಾಗಮ್ಮನಾಗಿದ್ದ ಅಜ್ಜ ಇಂದು ಕುಷ್ಟರೋಗಿಯಾಗಿ ಅಬ್ಬಾ ಎಂಥಾ ನಟನೆ" ಎಂದು ಸಹೃದಯ ಮಾತಾಡುವಂತೆ, ಮನ ಕರಗುವಂತೆ ಮಾಡಿದ್ದಾರೆ. ಕ್ಯಾಂಪ್ ನಡೆದಾಗ ಆ ಊರಲ್ಲಿರುವವರೆಲ್ಲಾ ಮನ ಮೆಚ್ಚುವಂತೆ ನಟನೆ ಮಾಡಿದವರು. ಒಂದು ಕಡೆ ನಾಟಕಗಳನ್ನು ನೋಡಿ ಸಹೃದಯ ಬದಲಾಗಿ ಜೀವನ ಮೌಲ್ಯಗಳನ್ನು

ಕಟ್ಟಿಕೊಳ್ಳುತ್ತಿದ್ದರೆ ಇನ್ನೊಂದು ಕಡೆ ಸಂಜೀವಪ್ಪ ತನ್ನ ಜೀವನಕ್ಕೆ ಬೇಕಾದ ಮೌಲ್ಯಗಳನ್ನು ಪಾತ್ರಗಳ ಮೂಲಕ ಕಂಡುಕೊಂಡರು. ಜೀವನದುದ್ದಕ್ಕೂ ಅವುಗಳನ್ನು ಪಾಲಿಸಿಕೊಂಡು ಬಂದದ್ದು ನಿಜಕ್ಕೂ ಕಲಾವಿದ ಬದಲಾಯಿಸುವುದಕ್ಕಿಂತ ತಾನು ಬದಲಾಗುವ ಪರಿ ಆ ಮೂಲಕ ಸಮಾಜವನ್ನು ಬದಲಾಯಿಸುವ ಪ್ರಕ್ರಿಯೆ ಬಹಳ ಮಹತ್ವವಾದುದು.

## ಮೋಹಗೊಳಿಸಿದ ಪಾತ್ರಗಳು

ಸಂಜೀವಪ್ಪನವರು ನಾಟಕ ಕಂಪನಿಯಲ್ಲಿದ್ದಾಗ ಹಲವಾರು ಕೌತುಕಗಳನ್ನು ನೋಡಿದ್ದಾರೆ. ಅವೆಲ್ಲವುಗಳನ್ನು ಕಣ್ಣಾರೆ ಕಂಡು ವೈಚಾರಿಕ ಮತ್ತು ವೈಜ್ಞಾನಿಕ ದೃಷ್ಟಿಯಿಂದ ನೋಡದೆ ಭಾವಪರವಶರಾಗಿ ಭಕ್ತಿಯಿಂದ ಪುಟ್ಟರಾಜ ಗುರುಗಳ ಕೃಪೆ ಎನ್ನುವಂತೆಯೇ ನೋಡುತ್ತಾರೆ. ಅನ್ನ ನೀಡಿದ ದೇವರಾಗಿ ಎಲ್ಲವನ್ನು ಅವರಿಗೆ ಅರ್ಪಿಸಿಕೊಳ್ಳುತ್ತಾರೆ. ಕಾಣುವ ಘಟನೆಗಳೆಲ್ಲವೂ ಅವರ ಕೃಪೆಯೇ ಎಂಬಂತೆ ಬಹಳ ವಿಧೇಯರಾಗುತ್ತಾರೆ.

ಒಂದುಸಲ ನಾಟಕದ ಕ್ಯಾಂಪ್ ಚಿಕ್ಕೇರಿಯಲ್ಲಿರುವಾಗ ಆ ದಿನ ಕುಮಾರೇಶ್ವರರ ಪುಣ್ಯಾರಾಧನೆ ನಡೆದಿತ್ತು. ಪಕ್ಕದ ಹಳ್ಳಿಯ ಗುಡ್ಡದ ಮಲ್ಲಾಪುರ ಮಠದ ಎರಡು ಎತ್ತುಗಳಿಗೆ ಊರಿನಲ್ಲೆಲ್ಲಾ ವಿಶೇಷ ಪೂಜೆ ಪುನಸ್ಕಾರಗಳು ನಡೆದಿದ್ದವು. ಆ ಎರಡು ಎತ್ತುಗಳಲ್ಲಿ ಏನೋ ವಿಶೇಷತೆ ಇರಬೇಕೆಂದು ತಿಳಿಯಿತು. ನಾಟಕ ಕಂಪನಿಗೆ ಆ ಎರಡು ಎತ್ತುಗಳನ್ನು ಸ್ವಾಗತಿಸಿ ಪಾದ ಪೂಜೆ ಮಾಡಿ ಊರಿಗೆಲ್ಲಾ ಊಟ ಹಾಕೋಣ ಎಂದು ತೀರ್ಮಾನಿಸಲಾಯಿತು. ಅಂತೆಯೇ ಕಾರ್ಯಕ್ರಮ ಸಾಂಗವಾಗಿ ನಡೆಯಿತು. ಎತ್ತುಗಳ ಪಾದ ಪೂಜೆ ಊರಿಗೆ ಊಟ ಎಲ್ಲಾ ನಡೆದು ನಾಟಕ ಆರಂಭವಾಯಿತು. ನಾಟಕ ನೋಡಲು ಶಿಷ್ಯರ ಜೊತೆ ಆ ಎರಡು ಎತ್ತುಗಳು ಬಂದವು. ಪ್ರೇಕ್ಷಕರ ನಡುವಿನಿಂದ ನಿಧಾನವಾಗಿ ಬಂದು ಸ್ಟೇಜಿನ ಮುಂಭಾಗದಲ್ಲಿ ಹಾರ್ಮೋನಿಯಂ ಬಾರಿಸುವವರ ಹಿಂದೆ ಕುಳಿತವು.

ನಾಟಕ ಮುಗಿಯುವವರೆಗೆ ಮನುಷ್ಯರಂತೆ ನಾಟಕ ನೋಡುತ್ತಲೇ ಇದ್ದವು. ನಾಟಕದ ಮಧ್ಯದಲ್ಲಿ ಮುಯ್ಯಿ ಬರೆಯಿಸುವ ಸಮಯ ಬಂದಾಗ ಆ ಎತ್ತುಗಳ ಜೊತೆ ಬಂದ ಆ ಮಠದ ಶಿಷ್ಯರು ಮುಯ್ಯಿ ಬರೆಯಿಸಲು ಎದ್ದರು. ಎತ್ತುಗಳ ಜೊತೆ ಬಂದ ಶಿಷ್ಯರು ಮುಯ್ಯಿ ಹೇಳಿದಾಗ ಎತ್ತಿನ ಕಡೆಗೆ ನೋಡುತ್ತಿದ್ದರು. ಆ ಎತ್ತುಗಳಿಂದ ಏನೂ ಪ್ರತಿಕ್ರಿಯೆ ಬರದ ಕಾರಣ ಹಾಗೆ ಮುಯ್ಯಿಯ ಮೊತ್ತವನ್ನು ಕೂಗುತ್ತಾ ಸಾಗಿದರು. ಯಾವಾಗ ಶಿಷ್ಯರು ಒಂದು ಸಾವಿರದ ಒಂದು ಮತ್ತು ಐದು ಚೀಲ ಭತ್ತ ಎಂದ ಕೂಡಲೇ ಎತ್ತುಗಳು ಧಿಗ್ಗನೆಂದು ತಲೆ ಅಲ್ಲಾಡಿಸಲು ತೊಡಗಿದವು. ಆಗ ಅದೇ ಸರಿಯಾದ ಮುಯ್ಯಿ ಎಂದು ತೀರ್ಮಾನಿಸಿ ಹೊರಬಂದಾಗ ಎತ್ತುಗಳು ಅವರನ್ನು ಹಿಂಬಾಲಿಸಿದವು. ಈ ವಿಷಯವನ್ನು ಕಲಾವಿದರು ಪುಟ್ಟರಾಜ ಗುರುಗಳಿಗೆ ತಿಳಿಸಿದಾಗ "ಅವು ಜಗಜ್ಯೋತಿ ಬಸವೇಶ್ವರ

ಅದಕಾ ಹಿಂಗಾಗ್ಯಾದಾ" ಎಂದರಂತೆ. ಇದನ್ನು ಹೇಳುವ ಸಂಜೀವಪ್ಪನವರು ಅತಿ ಭಾವುಕರಾಗಿ ರಂಗಭೂಮಿಯಿಂದ ಆ ಎತ್ತುಗಳಿಗೆ ಕೈ ಮುಗಿದರಂತೆ.

ಗದುಗಿನಲ್ಲಿ ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ನಾಟಕದ ೩೦೦ನೇ ಪ್ರಯೋಗದ ಸಂದರ್ಭದಲ್ಲಿ ನಾಟಕದ ಒಂದು ಸನ್ನಿವೇಶದಲ್ಲಿ ಹೇಮರೆಡ್ಡಿ ಮಲ್ಲಮ್ಮ ಲಿಂಗಪೂಜೆಯ ಸಮಯದಲ್ಲಿ ಆಕಳು ಇರ್ತಿತ್ತು. ಎಲ್ಲಾ ಪ್ರಯೋಗಗಳಲ್ಲಿ ಒಂದೇ ಆಕಳನ್ನು ಬಳಸಲಾಗಿತ್ತು. ಅಂದು ಶಿವಯ್ಯಸ್ವಾಮಿ ಮುದೇನಗುಡಿ ಮಲ್ಲಮ್ಮನ ಪಾತ್ರಧಾರಿ ನಾಟಕದ ಆ ಸನ್ನಿವೇಶದಲ್ಲಿದ್ದರು. ಮಲ್ಲಮ್ಮ ಆಕಳನ್ನು ಕರೆಯುವ ಮಾತು ಆಡಿದ ಕೂಡಲೆ ಆಕಳು ಒಳಗೆ ಬರ್ತಿತ್ತು. ಅಂದೂ ಸಹ "ಗೋಮಾತೆ ಬಾಮ್ಮ" ಅಂದ ಕೂಡಲೇ ಆಕಳು ಒಳಬಂತು. ಆದರೆ ಅದು ಕೊರಳಿಗೆ ಕಟ್ಟಿದ್ದ ಕಣ್ಣಿ ಜೊತೆಗೆಯೇ ಬಂದಿತ್ತು. ನೋಡುಗರಿಗೇನೂ ಅನಿಸಲಿಲ್ಲ. ಆದರೆ ನಾಟಕ ಕಂಪನಿಯವರಿಗೆ ಇದು ವಿಶೇಷತೆ ಎನಿಸಿತು. ಅಂದು ಆಕಳು ಬಿಟ್ಟಿರಲಿಲ್ಲ. ಅದು ಆ ಸಮಯವಾದ ಕೂಡಲೆ ಕಟ್ಟಿದ ಗೂಟವನ್ನು ಕಿತ್ತುಕೊಂಡು ಗೂಟದ ಜೊತೆಗೆಯೇ ಬಂದಿತ್ತು. ಮರುದಿನ ಎಲ್ಲರ ಬಾಯಲ್ಲಿ ಗೋಮಾತೆಯ ಹೊಗಳಿಕೆಯೇ ನಡೆದಿತ್ತು. ಇದನ್ನು ಕಂಡವರ ಬಾಯಿಂದ ಕೇಳಿದ್ದ ಸಂಜೀವಪ್ಪನವರು ಹೇಳುವುದೇನೆಂದರೆ, ನಾಟಕ ಸಂಗೀತ ಎಂದ ಕೂಡಲೆ ಬರೀ ಮನುಷ್ಯರಷ್ಟೇ ಅಲ್ಲ, ಪ್ರಾಣಿ ಪಕ್ಷಿಗಳು ಸಹ ತಮಗರಿಯದೇ ತೊಡಗಿಕೊಂಡಿದ್ದವು. ಅವುಗಳೂ ಸಹ ಸ್ಪಂದಿಸುತ್ತಿದ್ದವು ಎಂದು.

ನಾಟಕ ಕಂಪನಿ ಬೆಳವಣಿಕಿಯಲ್ಲಿರುವಾಗ ಕೋಡಿಕೊಪ್ಪದ ಹುಚ್ಚೀರೇಶ್ವರ ಮಹಾತ್ಮೆ ನಾಟಕ ನಡೆದಿತ್ತು. ಈ ನಾಟಕದೊಳಗ ಒಂದು ನಾಯಿ ಪಾತ್ರಾನು ಇತ್ತು. ಪಾತ್ರಕ್ಕೆ ಉಪಯೋಗವಾಗಲಿ ಎಂದು ನಾಯಿಯನ್ನು ಕಂಪನಿಯಲ್ಲಿ ಸಾಕಲಾಗಿತ್ತು. ಹುಚ್ಚೀರಪ್ಪನವರು ನಾಟಕದಲ್ಲಿ ನಾಯಿಯನ್ನು ಕರೆಯುವ ಆ ಸಂದರ್ಭದಲ್ಲಿ ಆ ನಾಯಿಯನ್ನು ಅಲ್ಲೇ ಇರಿಸುತ್ತಿದ್ದರು. ಹಾಗಾಗಿ ನಾಟಕದ ಸಂದರ್ಭ ಬಂದಾಗ ನಾಯಿ ಪರದೆಯ ಹಿಂದಿದ್ದು ಕರೆದ ಕೂಡಲೇ ಬರುವುದು ಅಭ್ಯಾಸವಾಗಿ ಹೋಗಿತ್ತು. ಒಂದು ಸಲ ಏನಾಯಿತೆಂದರೆ, ನಾಟಕ ನಡೆದಿದೆ ಹುಚ್ಚೀರಪ್ಪನ ಪಾತ್ರಧಾರಿ ನಾಯಿಯನ್ನು "ಏ ಹುಚ್ಚೀರ ಎಲ್ಲಿದ್ದೀಯೋ ಬಾರೋ, ಉಣ್ಣಾನ ಬಾರೋ" ಎಂದು ಕರೆದರು. ನಾಯಿ ಬರಲಿಲ್ಲ. ಇನ್ನೊಂದು ಸಲ ಜೋರಾಗಿ ಕೂಗಿದಾಗ ಪ್ರೇಕ್ಷಕರ ಮಧ್ಯದಿಂದ ನಾಯಿ ಜಿಗಿಯುತ್ತಾ ಬಂತು. ಈ ದೃಶ್ಯವನ್ನು ಕಂಡ ಪ್ರೇಕ್ಷಕರು ಚಪ್ಪಾಳೆ ತಟ್ಟಿ ನಾಯಿಯನ್ನ ಹುರಿದುಂಬಿಸಿದರು. ಈ ದೃಶ್ಯ ಜನರ ಮನಸನ್ನು ಸೆಳೆದು ಬಹಳಷ್ಟು ಮುಯ್ಯಿ ಬಂದವು. ಈ ನಾಯಿಯನ್ನು ಹುಚ್ಚೀರೇಶ್ವರನ ಪಾತ್ರ ಮಾಡಿದ ರವಿಮಾಂಡ್ರೆಯವರು ಬಹಳಷ್ಟು ಮೆಚ್ಚಿಕೊಂಡಿದ್ದರು. ಅದು ಯಾವಾಗಲು ಅವರ ಬಳಿಯೇ ಇರುತ್ತಿತ್ತು. ನಾಟಕದಲ್ಲಿನ ಈ ದೃಶ್ಯಗಳನ್ನು ಭಕ್ತಿಯ ಭಾವ ತೀವ್ರತೆಯಿಂದ ನೋಡುವಾಗಲೆಲ್ಲಾ ಸಂಜೀವಪ್ಪ ಎಲ್ಲಾ ಅಜ್ಜನವರ ಮಹಿಮೆ ಎನ್ನುತ್ತಾರೆ.

ರಂಗಭೂಮಿ ಬರೀ ಪ್ರಾಣಿಗಳನ್ನಷ್ಟೇ ಮೋಹಗೊಳಿಸಲಿಲ್ಲ, ಅಷ್ಟೇ ತೀವ್ರವಾಗಿ ಮನುಷ್ಯರನ್ನು ಬದಲಾಯಿಸಿತ್ತು. ಪಾತ್ರ ಮಾಡುವವರನ್ನು ತಂದು ಮನೆಲ್ಲಿಟ್ಟುಕೊಂಡು ನೋಡಬೇಕೆನ್ನುವಷ್ಟರ ಮಟ್ಟಿಗೆ ಮೋಹಗೊಳಿಸಿತ್ತು. ಕಲಾವಿದನೊಬ್ಬ ಇಸ್ಪೀಟ್ ಆಡಿ ತಪ್ಪು ಮಾಡಿ ಸಿಕ್ಕು ಬಿದ್ದಿದ್ದಾಗ, ವಿಚಾರಣೆ ನಡೆದು ಆತ ಅಜ್ಜನವರ ನಾಟಕ ಕಂಪನಿಯ ಕಲಾವಿದ ಎಂದ ಕೂಡಲೆ ವಿಚಾರಣೆ ಮಾಡುವಾಧಿಕಾರಿ "ನೀವು ಮೊದಲು ಹೋಗಿ ಇನ್ನೊಂದು ಸಲ ಈ ತಪ್ಪು ಮಾಡಬೇಡಿ" ಎಂದು ಕಳಿಸಿಕೊಟ್ಟದ್ದು ಕೂಡಾ ಕಂಪನಿಯ ಕಲಾವಿದರು ಅಭಿನಯಿಸುವ ನಟನೆಯಿಂದ ಪ್ರಭಾವಿಸಿರಬಹುದಾದ ಸಾಧ್ಯತೆ ಇದೆ ಎಂದೆನಿಸುತ್ತದೆ. ಹರೆಯದ ಹೆಣ್ಣುಗಳು ನಾಟಕ ನೋಡಿ ಪಾತ್ರಕ್ಕೆ ಮರುಳಾಗಿ 'ನೀವು ಬೇಕೆಂದು' ಹಿಂದೆ ಬಿದ್ದು ಗದ್ದಲ ಮಾಡಿಕೊಂಡಾಗ ಅಜ್ಜನವರ ನಾಟಕ ಕಂಪನಿ ಎಂದು ಗೌರವ ನೀಡಿ, ಹುಡುಗರು ಮಾಡಿದ ತಪ್ಪುಗಳನ್ನು ಮನ್ನಿಸುವಷ್ಟರ ಮಟ್ಟಿಗೆ ರಂಗಭೂಮಿ ಜನರನ್ನು ಬದಲಾಯಿಸಿತ್ತು. ಕಲೆಯನುಳಿಸಲು ಕಲಾವಿದರೂ ತಪ್ಪುಗಳನ್ನು ತಿದ್ದಿಕೊಂಡಿದ್ದರು. ಅಂತೆಯೇ ಸಮಾಜವೂ ಸಹ. ಗುರು ಪುಟ್ಟರಾಜರು ನುಡಿದಂತೆ "ಕಡಿದ ತಗಣಿಯ ಸುಡುವುದಷ್ಟೇ ಮುಖ್ಯ ಹೊರತು, ತಗಣಿ ಇರುವ ಮನೆಯೆಂದು ಮನೆ ಬೀಳಿಸುವಷ್ಟರ ಮಟ್ಟಿಗೆ ಹೋಗಲಾಗದು" ಎಂಬ ಮಾತನ್ನು ನಿಯಮದಂತೆ ಪಾಲಿಸಿತ್ತು ನಾಟಕ ಕಂಪನಿ ಮತ್ತು ಸಮಾಜ.

## ಒಡನಾಡಿಗಳ ಜೊತೆ ನಾಡು ಸುತ್ತುತ್ತಾ

ನಾಟಕ ಕಂಪನಿಯ ಜೊತೆಗಿನ ತಿರುಗಾಟ ೧೯೬೦ರಲ್ಲಿ ದಾವಣಗೆರೆಯಿಂದ ಆರಂಭವಾಗಿ ನಾಡಿನಾದ್ಯಂತ ೨೦೦೯ ರವರೆಗೆ ನಿರಂತರವಾಗಿ ರಂಗಪಯಣ ಮಾಡಿದರು. ದಾವಣಗೆರೆ, ಬಿಜಾಪುರ, ಗೊಳಸಂಗಿ, ಮಹಾಲಿಂಗಪುರ, ತೇರದಾಳ, ಶಿವಮೊಗ್ಗಾ, ಬೆಂಗಳೂರು, ಸಿಂಧನೂರು, ಮಾನ್ವಿ, ಸಿರಿವಾರ, ಗಬ್ಬೂರು, ದೇವದುರ್ಗ, ಗೂಗಲ್, ಅಯ್ಯಾಳ. ಗುಲ್ಬರ್ಗಾ, ಸಿಂಧಗಿ, ಮೂಡಲಗಿ, ಶಿರೋಳು, ರಾಂಪುರ, ಕಂಪ್ಲಿ, ಹಗರಿಬೊಮ್ಮನಳ್ಳಿ, ಅಲಮೇಲು. ಹೊಳೆಆಲೂರು, ಗದಗ, ಬೆಟಗೇರಿ, ರೋಣ, ಗಜೇಂದ್ರಗಡ, ಮಲ್ಲಾಪುರ, ತಾಳಿಕೋಟೆ, ಹಿರೆಕೆರೂರು, ಬೆಳವಣಿಕಿ, ಬನಶಂಕರಿ, ಮುದ್ದೇಬಿಹಾಳ, ಸಿಂಧಗಿ, ಕಲಕೇರಿ, ದೇವರಹಿಪ್ಪರಗಿ, ಕೂಡಲಸಂಗಮ, ಸವಡಿ, ಹಿರೇಸಿಂಧೋಗಿ, ಡೋಣಿ, ಮುಂಡರಗಿ, ಉಪ್ಪಿನ ಬೆಟಗೇರಿ, ಮುಸಿಗೇರಿ, ಗುಡಿಗೇರಿ, ಬಾದಾಮಿ, ಬನಶಂಕರಿ, ದೇವರಹಿಪ್ಪರಗಿ, ರಾಯಚೂರು, ರಾಣೆಬೆನ್ನೂರು, ಹುಬ್ಬಳ್ಳಿ, ಬೀದರ, ಸೇಡಂ, ಅಥಣಿ, ಬಾಗಲಕೋಟೆ, ಸಿರಗುಪ್ಪಾ, ಬಳ್ಳಾರಿ, ಕುರುಗೋಡು, ಉಜಿನಿ, ಹೊಸಪೇಟೆ, ಹಿಟ್ನಾಳ, ಗಂಗಾವತಿ, ಕಾರಟಗಿ, ನಂದಿಕೇಶ್ವರ, ಇಲಕಲ್, ಸಂತೆಕಲ್ಲೂರ್, ಕೋಡಿಕೊಪ್ಪ, ಕೋಸಗಿ, ಬದಿನಿಹಾಳ, ಕೌತಾಳ, ಕೊಡೇಕಲ್, ಆಂದ್ರ ಪ್ರದೇಶದಲ್ಲಿ ಒಂಬತ್ತು ವರ್ಷ ಮಾಡಿದರು. ಯಮ್ಮಿಗನೂರು, ಗುಡೇಕಲ್,

ಗೂಳ್ಯಂ, ಹಾಲ್ವಿ, ಮತ್ತು ಆದೋನಿ, ಒಳಗುಂದಿ ಹೀಗೆ ಪಟ್ಟಿ ಬೆಳೆಯುತ್ತದೆ. ಯಾವುದೇ ಊರಲ್ಲಿ ಕ್ಯಾಂಪ್ ಇದ್ದರೂ ಅಲ್ಲಿ ತಿಂಗಳುಗಟ್ಟಲೆ ಇರುವುದಾಗಿತ್ತು. ಹೀಗೆ ನಾಡಿನ ಅನೇಕ ಊರುಗಳನ್ನು ನಾಟಕ ಕಂಪನಿಯ ಜೊತೆ ಸುತ್ತಿದ ಸಂಜೀವಪ್ಪನವರು ನಾಟಕ ರಂಗಭೂಮಿಯ ಅಪಾರ ಅನುಭವವನ್ನು ಪಡೆದವರು.

ಕನ್ನಡ ನಾಡಿನಾದ್ಯಂತ ನಾಟಕ ಕಂಪನಿಯ ಜೊತೆ ಮೂರು ಸಲ ಸುತ್ತಿದರು. ಪುಟ್ಟರಾಜ ಗುರುಗಳ ಜೊತೆ ಹೋಗಿ ವಿಶೇಷ ಪ್ರದರ್ಶನಗಳನ್ನು ಕೂಡಾ ನಡೆಸಿದ್ದಾರೆ. ಕೆಲವು ಸಲ ಸಹಾಯಾರ್ಥ ನಾಟಕಗಳನ್ನೂ ಆಡಿದ್ದುಂಟು. ಹಲವಾರು ನಾಟಕಗಳಂತೂ ನೂರಾರು ಪ್ರಯೋಗಗಳನ್ನು ಕಂಡಿವೆ. ಉದಾಹರಣೆಗಾಗಿ ಕೆಲವು ನಾಟಕ ಹೆಸರಿಸುವುದಾದರೆ, ಹೇಮರೆಡ್ಡಿ ಮಲ್ಲಮ್ಮ, ಸಿದ್ಧಲಿಂಗೇಶ್ವರ ಮಹಾತ್ಮೆ, ಗೌಡ್ರ ಗದ್ಲ, ಮಲಮಗಳು ಹೀಗೆ ಹಲವು ನಾಟಕಗಳು ಸೇರುತ್ತವೆ. ಈ ನಾಟಕಗಳ ಪಾತ್ರಗಳ ಮೂಲಕ ಸಂಜೀವಪ್ಪ ಪ್ರೇಕ್ಷಕರ ಮನ ಗೆದ್ದಿದ್ದಾರೆ.

ನಾಟಕ ಕಂಪನಿಯಲ್ಲಿ ಆರಂಭದಲ್ಲಿ ಸುಮಾರು ಎಪ್ಪತ್ತರಿಂದ ಎಂಭತ್ತು ಜನ ಇದ್ದರು. ಕೆಲವರು ಸಂಗೀತ ಕಲಿಯುತ್ತಿದ್ದರು. ಇನ್ನೂ ಕೆಲವರು ಸಂಗೀತದ ಜೊತೆಗೆ ನಾಟಕದ ಪಾತ್ರಗಳನ್ನು ಮಾಡುತ್ತಿದ್ದರು. ಸಂಜೀವಪ್ಪನವರು ಕಂಪನಿ ಸೇರಿದಾಗ ಮೊಟ್ಟಮೊದಲ ನಿರ್ದೇಶಕರಾದ ಶಿವಮೂರ್ತಿ ಸ್ವಾಮಿ ದೇವಗಿರಿ ರವರ ಕೈಯೊಳಗೆ ಹದಿನಾರು ವರ್ಷ ಪಳಗಿದರು. ನಂತರ ಹುಬ್ಬಳ್ಳಿ ಶೆಟ್ರು ಮ್ಯಾನೇಜರರಾದರು. ನಂತರದಲ್ಲಿ ಕರೀಮಸಾಬ್ ದೇವಗಿರಿ, ಬಾಬು ಸಾಳಹಳ್ಳಿ, ರೇವಣಸಿದ್ದಯ್ಯ ಸ್ವಾಮಿ, ವಿರುಪಾಕ್ಷಯ್ಯ ಸ್ವಾಮಿ ಹೀಗೆ ಅನೇಕ ಮ್ಯಾನೇಜರುಗಳ ಕೈಯಲ್ಲಿ ಪಳಗಿ ಸಹೃದಯಿಗಳೆನಿಸಿಕೊಂಡರು. ಮ್ಯಾನೇಜರ್‌ರವರು ಯಾವುದೇ ಕೆಲಸ ಹೇಳಿದರು ಸಂಜೀವಪ್ಪ ವಿಧೇಯತೆಯಿಂದ ಅವರ ಮಾತನ್ನು ನಡೆಸಿಕೊಟ್ಟವರು.

ಗೇಟಿನ ಜವಾಬ್ದಾರಿ, ಗ್ರೀನ್‌ರೂಮ್ ಜವಾಬ್ದಾರಿ, ಬುಕಿಂಗ್ ಆಫೀಸಿನ ಕೆಲಸ, ಅಡಿಗೆ ಸಹಾಯಕರಾಗಿ, ವ್ಯವಸ್ಥಾಪಕರಾಗಿ ಎಲ್ಲಾ ಸೇವೆಗಳನ್ನು ಅಜ್ಜನವರ ಸೇವೆಯೆಂದು ತಿಳಿದು ಮಾಡಿದವರು. ಅಂತೆಯೇ ಸುಧೀರ್ಘಸೇವೆ ಮಾಡಿದ ಅನುಭವ ಅವರಲ್ಲಿದೆ. ಅಡಿಗೆ ಮಾಡುವ ಮತ್ತು ಬಡಿಸುವ ಕೆಲಸ ಲಿಂಗವಂತ ಕಲಾವಿದರದ್ದಾಗಿತ್ತು. ಕೆಲವು ಮೇಲ್ವರ್ಗದ ಕಲಾವಿದರಿಗೆ ಕೆಳಜಾತಿಯ ಕಲಾವಿದರ ನಡುವೆ ಪಾತ್ರ ಮಾಡುವಲ್ಲಿ ಸ್ಪರ್ಧೆ ಇತ್ತು. ಕೆಲವು ಕಲಾವಿದರು ಊರಿಗೆ ಹೋದಾಗ ಆ ಪಾತ್ರ ನನಗೆ ನಿನಗೆ ಎಂಬ ವಾದ ನಡೆಯುತ್ತಿತ್ತು. ಆದರೆ ಸಂಜೀವಪ್ಪನವರು ಯಾವುದೇ ಪಾತ್ರಕೊಟ್ಟರೂ ಯಾವುದೇ ಕೆಲಸ ಕೊಟ್ಟರೂ ಅಜ್ಜನವರ ಸೇವೆ ಎಂದು ತಿಳಿದವರು. ಉಳಿದಂತೆ ಎಲ್ಲಾ ಜಾತಿಯ ಕಲಾವಿದರು ಎಲ್ಲಾ ಕೆಲಸಗಳನ್ನು ಮಾಡುತ್ತಾ ಸೌಹಾರ್ದಯುತವಾಗಿ ಕಂಪನಿಯಲ್ಲಿ ಬದುಕುತ್ತಿದ್ದರು.

ಸಂಜೀವಪ್ಪನವರ ಗೆಳೆಯರಾದ ನಟ ಹಾಗೂ ಸಂಗೀತಗಾರರಾದ ಇಟಗಿ ವಿರುಪಾಕ್ಷಪ್ಪನವರು ಹೇಳುವಂತೆ "ಸಂಜೀವಣ್ಣನ ಪಾತ್ರ ನೋಡುವುದೇ ಒಂದು ಭಾಗ್ಯ" ಎಂದು ಭಾವಪೂರ್ಣರಾಗುತ್ತಾರೆ. "ಗ್ರೀನ್‌ರೂಮಿನಲ್ಲಿ ಅವರನ್ನು ಮೊದಮೊದಲು ಕಂಡೆ ಅವರ ಕೆಲಸ ಚೊಕ್ಕ ಚಿನ್ನವಾಗಿರುತ್ತಿತ್ತು." ಎನ್ನುತ್ತಾರೆ. ಹಾಗೆಯೇ ಅವರ ಇನ್ನೊಬ್ಬ ಗೆಳೆಯ ಬಾನ್ಸುರಿ ವಾದಕರಾದ ಗೋವಿಂದರಾಜ ಬೊಮ್ಮಲಾಪುರ ಹೇಳುವಂತೆ "ಸಂಜೀವಣ್ಣ ನಮಗ ಸೇವೆ ಬಹಳ ಮಾಡ್ಯಾನ್ರಿ, ನಮ್ಮಂತಹ ಅಂಥ ಕಲಾವಿದರ ಮೇಲೆ ಬಹಳ ಜೀವ ಇದ್ದರು. ಬೆಳಗಿನಿಂದ ಸಂಜೆವರೆಗೂ ಹಲವಾರು ಸೇವೆಗಳನ್ನು ಅವರಿಂದ ಮಾಡಿಸಿಕೊಂಡಿವಿ. ಅವರಂಥ ಸೌಮ್ಯ ಜೀವಿ ನಮ್ಮ ನಾಟಕ ಕಂಪನಿಯೊಳಗ ಇದ್ದದ್ದು ನಮಗ ಖುಷಿಯಾಗಿತ್ತು." ಎನ್ನುತ್ತಾರೆ. ಹಿರಿಯರಾದ, ಹಾರ್ಮೋನಿಯಂ ಕಲಾವಿದರಾದ ಹುಚ್ಚಯ್ಯಜ್ಜ ಕಟಿಗಿಹಳ್ಳಿ ಅವರು ಸಂಜೀವಪ್ಪನವರ ಬಗೆಗೆ ಹೇಳುವುದೇನೆಂದರೆ "ಸಂಜೀವಪ್ಪನ ಪಾತ್ರ ಅಂದರೆ ಪಾತ್ರ, ಹಣ್ಣೇ ತಾನಾಗಿ ನಟಿಸುತ್ತಿದ್ದ. ಅಜ್ಜನವರೆಂದರೆ ಭಹಳ ಭಕ್ತಿ" ಎನ್ನುತ್ತಾರೆ.

ಸಂಜೀವಪ್ಪನವರೇ ಹೇಳುವಂತೆ ಕೆಲವುಸಲ ತಾವು ನಾಟಕದಲ್ಲಿ ಪತ್ರಧಾರಿಗಳಾಗಿ ನಟಿಸುತ್ತಿರುವಾಗ ಯಾವುದಾದರೂ ಮಾತು ತಪ್ಪಿದರೆ ಅಥವಾ ಸನ್ನಿವೇಶದಲ್ಲಿ ಮರೆತು ನಿಂತು ಬಿಟ್ಟರೆ ಸ್ಟೇಜಿನ ಮುಂದಿನ ಕಟ್ಟೆಯಲ್ಲಿ ಕುಳಿತ ವಾದ್ಯವೃಂದದ ಗೆಳೆಯರು ತಕ್ಷಣವೇ ತಮ್ಮ ಸಂಗೀತದ ವಿಶೇಷ ಶಬ್ದಗಳ ಮೂಲಕ ಎಚ್ಚರಿಸುತ್ತಿದ್ದರಂತೆ. ವಾದ್ಯ ವೃಂದದಲ್ಲಿ ಹಾರ್ಮೋನಿಯಂ ವಾದಕರಾಗಿ ಮಣ್ಣೂರು ಪಂಚಯ್ಯ, ರೋಣದ ಬಸಪ್ಪ, ಮಹಾಲಿಂಗಪ್ಪ ಗವಾಯಿಗಳು ಹಿರೇಗುಂಜಾಳ, ತಬಲಾ ವಾದಕರಾಗಿ ಶಿವಮೂರ್ತೆಪ್ಪ ಅಳವಂಡಿ, ಭೀಮಾಶಂಕರ, ಶರಣ ಶಿರಸಗಿ, ವಾಯಲಿನ್ ವಾದಕರಾಗಿ ಸಿದ್ದಪ್ಪ ಗೂಳ್ಯಂ, ದಿಲ್‌ರುಬಾದಲ್ಲಿ ಶಂಕರಪ್ಪ ಹುಲ್ತಿ ಮತ್ತು ಪೀರ್‌ಸಾಬ್ ಬಾಳೆಹೊಸೂರ್, ಕ್ಲಾರ್‌ನೆಟ್ ವಾದಕರಾಗಿ ಬಿ.ಡಿ.ಬಜಂತ್ರಿ, ಕೊಳಲು ವಾದಕರಾಗಿ ಗೋವಿಂದರಾಜ್ ಬೊಮ್ಮಲಾಪುರ, ಜಯಪ್ಪ ಗಜೇಂದ್ರಗಡ, ಮತ್ತು ಡ್ರಮ್ ವಾದನದಲ್ಲಿ ಅಶೋಕ ಸೇಬಿನಕಟ್ಟಿ ಇವರೆಲ್ಲರ ಜೊತೆ ಸಂಜೀವಪ್ಪನವರ ಗೆಳೆತನ ಚೆನ್ನಾಗಿತ್ತು.

ಅಷ್ಟೇ ಅಲ್ಲ ಅಜ್ಜನವರ ನಾಟಕ ಕಂಪನಿಯಲ್ಲಿದ್ದು ನಟರಾಗಿ ಮ್ಯಾನೇಜರುಗಳಾಗಿ ಅನುಭವ ಪಡೆದು ಅಲ್ಲಿಂದ ದೂರಾಗಿ "ಗುರು ಪುಟ್ಟರಾಜ ವಿಜಯ ನಾಟಕ ಸಂಘ ದೇವಗಿರಿ" ನಾಟಕ ಕಂಪನಿ ಕಟ್ಟಿದ ದೇವಗಿರಿ ಶಿವಯೋಗಿ ಶಾಸ್ತ್ರಿಗಳು ಗಡ್ಡದಮಠ, "ಶಿವ ಕೃಪ ನಾಟ್ಯ ಸಂಘ" ಕಟ್ಟಿದ ಯರಂಗಳಿ ಶಿವಣ್ಣ ಮತ್ತವರ ಗೆಳೆಯ ಕರೀಂಸಾಬ್ ದೇವಗಿರಿ, "ಕುಮಾರ ವಿಜಯ ನಾಟ್ಯ ಸಂಘ"

ಕಟ್ಟಿದ ಚಿತ್ತರಗಿ ಗಂಗಾಧರ ಶಾಸ್ತ್ರಿ ಇವರೆಲ್ಲರ ಜೊತೆ ಪಾತ್ರ ಮಾಡಿದ ಅನುಭವ ಸಂಜೀವಪ್ಪನವರದ್ದಾಗಿದೆ. ಕೆಲವರು ತಮ್ಮಿಂದಲೇ ನಾಟಕ ಕಂಪನಿ ನಡೆಯುವುದೆಂಬ ಗರ್ವದಿಂದ ವರ್ತಿಸುತ್ತಿದ್ದರು. ಹೀಗಾಗಿ ಕೆಲವು ಸಲ ಗುಂಪುಗಾರಿಕೆಯೂ ಕೂಡಾ ನಡೆದಿತ್ತು, ಅಂತಹ ಕೆಲವರು ಇಲ್ಲಿನ ಅನುಭವ ಪಡೆದು ಹೊರಹೋಗಿ ಹೊಸ ನಾಟಕ ಕಂಪನಿ ಕಟ್ಟಿಕೊಂಡಿದ್ದಾರೆ. ಮತ್ತೆ ಕೆಲವರು ತಮ್ಮ ತಪ್ಪು ತಿಳಿದುಕೊಂಡು ಮರಳಿ ಬಂದಾಗ ಅಜ್ಜನವರ ಆಶೀರ್ವಾದವೂ ಸಿಕ್ಕಿದೆ.

ಅಜ್ಜನವರ ನಾಟಕದ ಕಂನಿಯಲ್ಲಿದ್ದು ನಾಟಕದ ಪಾತ್ರದ ಜೊತೆ ಸಂಗೀತ ಸಾಧನೆಯನ್ನು ಮಾಡಿಕೊಂಡು ಹೆಸರಾದ ಮತ್ತಿಕಟ್ಟಿ ಪಂಚಾಕ್ಷರಿ, ಬಸವರಾಜ ರಾಜಗುರು, ಸಿದ್ಧರಾಮ ಜಂಬಲದಿನ್ನಿ, ದೊಡ್ಡ ಬಸವಾರ್ಯ ಮಲ್ಕಾಪುರ, ದೊಡ್ಡಬಸವ ಜಾಲಿಬೆಂಚಿ, ಅರ್ಜುನಸಾ ನಾಕೋಡ, ಈಶ್ವರ ಮೋರಗೇರಾ, ಮದರಿ ಮರಿಸ್ವಾಮಿ ಮತ್ತು ನಾಗನಗೌಡ ಸಿರಿಗೇರಿ ಇನ್ನಿತರರ ಜೊತೆ ನಟಿಸಿದ ಸಂಜೀವಪ್ಪನವರು ಉತ್ತಮ ಬಾಂಧವ್ಯವನ್ನು ಹೊಂದಿದ್ದರು. ಅಂತೆಯೇ ವೀರೇಶ್ವರ ಪುಣ್ಯಾಶ್ರಮದ ಭಕ್ತರು, ಸಂಗೀತ ಕಲಾವಿದರು ಹಾಗೂ ಕಾರಕೂನರಾದ ಬಸವರಾಜ ಸ್ವಾಮಿಗಳು ಹಿಡ್ಕಿಮಠ ಇವರೆಲ್ಲರ ಜೊತೆ ಈಗಲೂ ಭಾವನಾತ್ಮಕ ಸಂಬಂಧವನ್ನಿಟ್ಟು ಕೊಂಡಿದ್ದಾರೆ.

ಸಂಜೀವಪ್ಪನವರ ಜೊತೆ ಪಾತ್ರಧಾರಿಗಳಾಗಿ ಶಿವಮೂರ್ತಿಸ್ವಾಮಿ ದೇವಗಿರಿ, ಶಿವಯ್ಯಸ್ವಾಮಿ ಮುದೇನಗುಡಿ, ಲಾಯದಗುಂದಿ ಶಿವಪ್ಪ, ದುರುಗೇಶ ಗವಾಯಿ ಗಂಗಾವತಿ, ರೋಣದ ವೆಂಕಪ್ಪನವರು, ರೋಣದ ಮರಿಯಪ್ಪನವರು, ಬಾಲಚಂದ್ರ ಶಾಸ್ತ್ರಿ ಚಿಕ್ಕಮಣ್ಣೂರು, ರಾಚಯ್ಯಸ್ವಾಮಿ ಬಡ್ನಿ, ಗುರಯ್ಯ ಸ್ವಾಮಿ ಹಿರೇಮಠ, ಗುರಯ್ಯಸ್ವಾಮಿ ಸಂಕನೂರು, ಬಾಬಣ್ಣ ಕಲ್ಮನಿ ಕುಕನೂರು, ಶರಣಪ್ಪ ಕುಕನೂರು, ಕುರುವಗೊಂಡ ಹನುಮಂತಪ್ಪ, ವೀರಭದ್ರಪ್ಪ ತಿಮ್ಮಾಪುರ, ಶೇಷಪ್ಪ ಗವಾಯಿ ಗಬ್ಬೂರು, ಬಸವಣ್ಣಯ್ಯ ಹಿರೇಮಠ, ಮತ್ತಿಕಟ್ಟಿ ರುದ್ರಪ್ಪ ಮಾಸ್ತರರು, ರೇವಣಸಿದ್ದಯ್ಯ ಶ್ರೀಧರಗಡ್ಡೆ, ವಿರುಪಾಕ್ಷಯ್ಯಸ್ವಾಮಿ ಬೇನಾಳ, ಕರೀಮಸಾಬ್ ದೇವಗಿರಿ, ಅಶೋಕ ಪುರದ ದೇವಗಿರಿ, ಗುರುಪಾದಯ್ಯಸ್ವಾಮಿ, ಬಾಬು ಸಾಲಹಳ್ಳಿ, ಶಿವು ಸಾಲಹಳ್ಳಿ, ಚನ್ನವೀರಯ್ಯ ಸುಳ್ಳ, ವೀರೇಶ ಶಾಸ್ತ್ರಿಗಳು ಮಾಡಲಗೇರಿ, ವಿಜಯಾನಂದ ಕರಡೀಗುಡ್ಡ, ಚಿದಾನಂದಪ್ಪ ಅಬ್ಬಿಗೇರಿ, ವಿರುಪಾಕ್ಷಪ್ಪ ಇಟಗಿ, ಗುರುಬಸ್ಸಯ್ಯ ಕುರುಕುಂದಿ, ಕುಮಾರಸ್ವಾಮಿ ಹೊಸೂರಮಠ, ಅಜ್ಜಪ್ಪ ಬೆಳವಣಿಕಿ, ಹುಸೇನ್ ಬದಾಮಿ, ಗುರಯ್ಯ ಸ್ವಾಮಿ ಸಂಕನೂರು, ಲೋಕಯ್ಯ ಸಂಕನೂರು, ಚಂದ್ರು ಬಮ್ಮಿಗಟ್ಟಿ, ಮಹಾದೇವ ಹೊಸೂರು, ಕಲ್ಲೇಶ ಹೂಗಾರ ಹುಲ್ಲೂರು, ನೂರುದ್ದೀನ್ ಮಂಗಳೂರು, ಲೋಕೇಶ ಶಶಿಮಠ, ನಾಗೇಶ ಶಿಗ್ಗಾಂವ, ಕುಮಾರ ಶಿಗ್ಗಾಂವ, ಕೃಷ್ಣಮೂರ್ತಿಶಾಸ್ತ್ರಿ ಶಲವಡಿ,

ಸೋಮಶೇಖರ ಜಮುಖಂಡಿ, ಬಾಷಾ ಬಾಗಲಕೋಟೆ, ಮುನವಳ್ಳಿ ಬಾಬು ಮುಂಡರಗಿ, ಸಂಗಮೇಶ ಬಾಗಲಕೋಟೆ ಹೀಗೆ ಅನೇಕರ ಜೊತೆ ನಟಿಸುತ್ತಾ ನಗಿಸುತ್ತಾ ಕಾಲಕಳೆದವರು. ಎಲ್ಲಾ ಸಹ ಪಾತ್ರಗಳ ಜೊತೆ ನಟಿಸಿ ಜೀವತುಂಬಿ ಪಾತ್ರವೇ ತಾನಾದವರು.

ನಾಟಕ ಕಂಪನಿಯಲ್ಲಿರುವಾಗ ನಟರು ನಟರ ಮಧ್ಯೆ ಸ್ಪರ್ಧೆ ಇತ್ತು. ಆ ಸ್ಪರ್ಧೆಯಲ್ಲಿ ಎಲ್ಲರೂ ಭಾಗವಹಿಸಲೇಬೇಕು. ಅಂತೆಯೇ ಕಂಪನಿಯ ಕಲಾವಿದರ ಕೀರ್ತಿ ಬೆಳಗುತ್ತದೆ. ಸಂಜೀವಪ್ಪನವರು ಮಾರುತಿ ಮಾಂಡ್ರೆಯವರ 'ಕೋಡಿಕೊಪ್ಪದ ಹುಚ್ಚೀರೇಶ್ವರ ಮಹಾತ್ಮೆ' ನಾಟಕದ ಹುಚ್ಚೀರನ ಪಾತ್ರಧಾರಿಯಾದ ರವಿ ಮಾಂಡ್ರೆಯವರನ್ನು ಈಗಲೂ ನೆನೆಸಿಕೊಳ್ಳುತ್ತಾರೆ. ಸಂಪ್ರದಾಯ ವಿರೋಧಿ, ವೈಚಾರಿಕ ಚಿಂತಕ, ಇಂಗ್ಲೀಷ್ ಉಪನ್ಯಾಸಕನಾಗಿದ್ದು ಹುದ್ದೆ ಬಿಟ್ಟು ನಾಟಕದಿಂದ ಪ್ರೇರಿತರಾಗಿ ಹುಚ್ಚೀರನೇ ತಾನಾದವರು. ರವಿ ಮಾಂಡ್ರೆಯವರು ಪಾತ್ರದೊಳಗೆ ಪರಕಾಯ ಪ್ರವೇಶ ಮಾಡುತ್ತಿದ್ದರು. ತಂದೆ ನಾಟಕಕಾರ ಮಗ ಹೆಸರಾಂತ ನಟ. ಗಂಗಾವತಿಯ ಡಂಕನಕಲ್‌ನಲ್ಲಿ ತಮ್ಮದೇ ಸಿದ್ಧಾಂತದ ಒಂದು ಮಠವನ್ನು ಕಟ್ಟಿಕೊಂಡು ಅಲ್ಲಿಯೇ ವಾಸವಾಗಿದ್ದವರು. ಕೋಡಿಕೊಪ್ಪದ ಹುಚ್ಚೀರೇಶ್ವರ ಮಹಾತ್ಮೆಯ ಹುಚ್ಚೀರನ ಪಾತ್ರ ಅವರೇ ಮಾಡಬೇಕೆಂದಾಗ ಅವರನ್ನು ಕರೆಯಲು ಸಂಜೀವಪ್ಪನವರು ಡಂಕನಕಲ್‌ಗೆ ಹೋಗಿದ್ದರು. ತತ್ವಜ್ಞಾನ ಮತ್ತು ಅಧ್ಯಾತ್ಮದೆಡೆ ಅವರ ಸೆಳೆತವಿತ್ತು.

ಒಂದು ಸಲ ನಾನು ಹುಲಿಹೈದರ ಗ್ರಾಮಕ್ಕೆ ಹೋದಾಗ ಚೆನ್ನದಾಸರ ಓಣಿಯಲ್ಲಿನ ಮಾರೆಮ್ಮನ ಗುಡಿ ಮುಂದೆ ಒಬ್ಬ ವ್ಯಕ್ತಿ ಅರೆ ಬಟ್ಟೆಯಲ್ಲಿ ಕುಳಿತಿದ್ದರು. ಸುತ್ತಲೂ ಬಹಳ ಜನರು ಕುಳಿತಿದ್ದರು. ನಾನು ಹೋದಕೂಡಲೇ ನನ್ನನ್ನು ಅವರಿಗೆ ಪರಿಚಯಿಸಿದರು. ನಾನು ನಮಸ್ಕರಿಸಿ ದಾಸಜನಾಂಗದವರ ಜೊತೆ ಚರ್ಚೆಯಲ್ಲಿ ತೊಡಗಿದಾಗ ಅರೆ ಬಟ್ಟೆಯಲ್ಲಿ ಕುಳಿತ ಆ ವ್ಯಕ್ತಿ ನನ್ನನ್ನು ಉದ್ದೇಶಿಸಿ ಇಂಗ್ಲೀಷಿನಲ್ಲಿ ಮಾತಾಡಲು ತೊಡಗಿದರು. ಆಗ ನಾನು ಮತ್ತು ಅವರು ಸಾಕಷ್ಟು ಚರ್ಚೆ ಮಾಡಿದೆವು. ಆಗ ನನಗೊಂದು ಸಂಶಯ ಬಂತು. ಇಷ್ಟು ಚೆನ್ನಾಗಿ ಇಂಗ್ಲೀಷ ಮಾತಾಡುವ ಮತ್ತು ಮಕ್ಕಳಿಗೆ ತಿಳಿಸುವಂತೆ ಹೇಳುತ್ತಾ ಹಲವು ವಿದ್ಯಮಾನ ಚರ್ಚೆ ಮಾಡಿದ್ದುದನ್ನು ಗಮನಿಸಿದಾಗ, ಸರ್ ತಾವು ಯಾರು? ಏನಿದ್ದೀರಿ? ಎಂದೆ. ಅವರು "ನಾನು ರವಿ ಮಾಂಡ್ರೆ ಅಂತ ಈ ಮುಂಚೆ ಇಂಗ್ಲೀಷ್ ಉಪನ್ಯಾಸಕನಾಗಿದ್ದೆ. ಅಜ್ಜನವರ ನಾಟಕ ಕಂಪನಿಯಲ್ಲಿದ್ದೆ. ಈಗ ಪ್ರಸ್ತುತ ನಿಮ್ಮ ಮುಂದಿದ್ದೀನಿ" ಎಂದರು.

ತೇಲಿಸಿ ಮಾತಾಡಿದ ಮಾತು ಕೇಳಿ ನನ್ನ ಗರ್ವ ಇಳಿದು ಹೋಯಿತು. ಮಹಾನ್ ನಾಟಕಕಾರರಾದ ಮಾರುತೇಶ ಮಾಂಡ್ರೆಯವರ ಮಗ. ದೊಡ್ಡ ನಟ.

ಎಂದಾಗ ನನಗೂ ಅವರಿಂದ ಹಸ್ತಾಕ್ಷರ ಪಡೆಯಬೇಕೆನಿಸಿತು. ತಕ್ಷಣವೇ ನನ್ನ ಬಟ್ಟೆ ಚೀಲದಿಂದ ಒಂದು ಪುಸ್ತಕ ತೆಗೆದು 'ಸರ್ ಆಟೋಗ್ರಾಫ್' ಎಂದೆ. ಆಗ ಖುಷಿಯಿಂದ ಪುಸ್ತಕದ ಒಳ ಪುಟದ ಮೇಲೆ "ಯಾವುದು ಹೌದು ಅದು ಅಲ್ಲ. ಯಾವುದು ಅಲ್ಲ ಅದು ಹೌದು." ಎಂದು ಬರೆದರು. ರವಿಮಾಂಡ್ರೆ ಯವರು ಬರೆದ ಈ ಶಬ್ದ ಈಗಲೂ ಮರೆಯಲಾಗಿಲ್ಲ. ಇದು ಕೋಡಿಕೊಪ್ಪದ ಹುಚ್ಚೀರೇಶ್ವರ ಸ್ವಾಮಿಗಳ ಮಾತು ಆಗಾಗ ನನಗೂ ಕಾಡುತ್ತಿರುತ್ತದೆ. ಕೋಡಿಕೊಪ್ಪದ ಹುಚ್ಚೀರೇಶ್ವರ ಮಹಾತ್ಮೆಯ ನಾಟಕದ ಪಾತ್ರದ ಫಲವಾಗಿ ರವಿಮಾಂಡ್ರೆಯವರು ಅಧ್ಯಾತ್ಮದ ಕಡೆಗೆ ಮರಳಿದರು. ಅಂತೆಯೇ ಸಂಜೀವಪ್ಪನವರಿಗೆ ಪರಕಾಯ ಪ್ರವೇಶ ಮಾಡುವ ನಟನಾಗಿ ಇಂದಿಗೂ ಉಳಿದಿದ್ದಾರೆ.

## ಬಣ್ಣದ ಜೊತೆ ಸಂಜೀವಪ್ಪನ ಬದುಕು

ಕಲಾವಿದರಿಗೆ ಮದುವೆಯಾಗಿ ಕುಟುಂಬವಿದ್ದರೆ ಅವರನ್ನೂ ಕರೆದುಕೊಂಡು ನಾಟಕದ ಜೊತೆ ಸಾಗುತ್ತಿದ್ದರು. ಎಲ್ಲರಿಗೂ ಊಟದ ವ್ಯವಸ್ಥೆ ಇರುತ್ತಿತ್ತು. ಕಂಪನಿಯ ರಂಗತಾಲೀಮು, ರಾತ್ರಿ ರಂಗಪ್ರದರ್ಶನದ ನಂತರ ಮನೆ ಸೇರಿ ತಮ್ಮ ಕುಟುಂಬದ ಜೊತೆ ಕಾಲಕಳೆಯುವುದು ಪದ್ಧತಿಯಾಗಿತ್ತು. ನಾಟಕ ಕಂಪನಿ ಹೋದಲ್ಲೆಲ್ಲಾ ಕುಟುಂಬವೂ ಹೋಗುತ್ತಿತ್ತು. ಕುಟುಂಬಕ್ಕಾಗಿ ಆ ಊರೊಳಗೆ ಬಾಡಿಗೆ ಮನೆ ಹುಡುಕಿ ಅಲ್ಲಿರಬೇಕಾಗುತ್ತಿತ್ತು. ಎಷ್ಟೋ ಸಲ ಬಾಡಿಗೆಯೇ ಬೇಡ ನೀವು ಅಜ್ಜನ ಕಂಪನಿಯವರು. ಎಷ್ಟು ದಿನ ಇರ್ತೀರಿ ಇದ್ದು ಹೋಗಿರಿ ಅಂತ ಬಾಡಿಗೆ ಕೇಳುತ್ತಿರಲಿಲ್ಲ.

ಸಂಜೀವಪ್ಪನವರು ಅವರ ತಾಯಿ ಬಾಬಮ್ಮ, ಸೋದರತ್ತೆ ಯಂಕಮ್ಮನ ಆಶ್ರಯದಲ್ಲಿ ಬೆಳೆದವರು. ನಾಟಕ ಕಂಪನಿ ಸೇರಿದ ಆರು ವರ್ಷ ನಂತರ ೧೯೬೩ ರಲ್ಲಿ ಗಬ್ಬೂರಿನ ವಾಟಂ ಸಾಯಣ್ಣನ ಮಗಳು ಶಾರದಮ್ಮನವರನ್ನು ಮದುವೆಯಾದರು. ನಾಟಕ ಕಂಪನಿಯ ಯಾರೇ ಕಲಾವಿದರು ಮದುವೆಯಾದರೆ ಅವರಿಗೆ ಒಂದು 'ಬೆನಿಫಿಟ್ ಷೋ' (ಸಹಾಯಾರ್ಥ) ಕೊಡುವುದು ಪದ್ಧತಿ ಇತ್ತು. ಅಂತೆಯೆ ಸಂಜೀವಪ್ಪ ಮದುವೆಯಾದಾಗ ಆತನಿಗೂ ಒಂದು 'ಸಹಯಾರ್ಥ ನಾಟಕ' ಸಿಕ್ಕಿತ್ತು. ಆಗ ದೇವದುರ್ಗದಲ್ಲಿ ಸಂಜೀವಪ್ಪನವರಿಗೆ ಹದಿನಾರು ಸಾವಿರ ಕಲೆಕ್ಷನ್ ಆಗಿತ್ತು. ಆ ಸಂದರ್ಭದ ಮದುವೆಯ ಸಾಲ ಮತ್ತಿತರೆ ಖರ್ಚುಗಳಿಗೆ ಸಹಾಯವಾಯಿತು ಎಂದು ಸಂಜೀವಪ್ಪ ನೆನೆಯುತ್ತಾರೆ.

ದೇವದುರ್ಗದಿಂದ ಸಂಜೀವಪ್ಪ ತಮ್ಮ ಕುಟುಂಬವನ್ನು ನಾಟಕ ಕಂಪನಿಯ ಜೊತೆ ಕರೆದೊಯ್ದರು. ಅವರ ಕುಟುಂಬದಲ್ಲಿ ಅಣ್ಣ ಹನುಮಂತಣ್ಣ ಮತ್ತು ತಮ್ಮ ಯಲ್ಲಪ್ಪನ ಕುಟುಂಬ ನಾಟಕ ಕಂಪನಿಯ ಜೊತೆಗೆಯೇ ಇರುತ್ತಿತ್ತು. ಕಂಪನಿಯ

ಜೊತೆ ಕುಟುಂಬ ಸಾಗುತ್ತಿದ್ದಾಗ ಅಣ್ಣ ಹನುಮಂತು ಪಿಟೀಲು ಹಿಡಿದು, ತಮ್ಮ ಯಲ್ಲಪ್ಪ ಏಕತಾರಿ ಹಿಡಿದು ಊರೂರು ತಿರುಗಿ ಭಿಕ್ಷೆ ಬೇಡುತ್ತಿದ್ದರು. ತಾಯಿ ಬಾಬಮ್ಮ ಅತ್ತೆ ಯಂಕಮ್ಮ ಮತ್ತು ಹೆಂಡತಿ ಶಾರದಮ್ಮನವರು ಸಹ ಸುಮಾರು ಹತ್ತು ಹನ್ನೆರಡು ವರ್ಷಗಳ ಕಾಲ ನಾಟಕ ಕಂಪನಿಯ ಜೊತೆಯಲ್ಲಿಯೇ ಇದ್ದರು. ಸಂಜೀವಪ್ಪ ನಟನೆಯಲ್ಲಿದ್ದರೆ ಇವರು ಕೂಲಿ ಇಲ್ಲವೆ ಬೇರೆ ಬೇರೆ ವೃತ್ತಿಯನ್ನು ಮಾಡಿ ಜೀವನ ಸಾಗಿಸುತ್ತಿದ್ದರು.

## ಕುಟುಂಬಕ್ಕೆ ಬೀಸಿದ ಹುಚ್ಚು ಗಾಳಿ

ಅಲಮೇಲುವಿನಲ್ಲಿ ಕ್ಯಾಂಪ್ ಇದ್ದಾಗ ಅವರ ಅಣ್ಣ ಹನುಮಂತಣ್ಣನಿಗೆ ಹುಚ್ಚು ಹಿಡಿಯಿತು. ಅಂದಿನಿಂದ ಸಂಜೀವಪ್ಪನವರು ಸಂಗೀತ ಸಾಧನೆಯನ್ನು ಮರೆತು ನಾಟಕದ ಪಾತ್ರದ ಕಡೆ ಮಾತ್ರ ಗಮನಕೊಟ್ಟರು. ಉಳಿದ ಸಮಯ ಅಣ್ಣನನ್ನು ಸಂಭಾಳಿಸುವುದೇ ದೊಡ್ಡ ಕಷ್ಟವಾಗಿ ಮಾನಸಿಕ ಹಿಂಸೆಯಾಯಿತು. ಅದುವರೆಗೂ ಅವರಿಗೆ ಮಹಾಲಿಂಗರಾಜ ಹಿರೇಗುಂಜಾಳ ಸಂಗೀತದ ಗುರುವಾಗಿದ್ದರು.

೧೯೭೦ರಲ್ಲಿ ನಾಟಕದ ಕ್ಯಾಂಪ್ ಸಿಂಧಗಿಯಲ್ಲಿರುವಾಗ ಸಂಜೀವಪ್ಪನವರ ಅಣ್ಣನ ಹುಚ್ಚು ಜಾಸ್ತಿಯಾಯಿತು. ಹೇಗೇಗೋ ಮಾತಾಡುತ್ತಿದ್ದ, ಅತಿ ಅಶ್ಲೀಲ ಶಬ್ದದಿಂದ ಬೈಯುತ್ತಿದ್ದ, ಮೈಮೇಲಿನ ಬಟ್ಟೆಯ ಪರಿವೆ ಇಲ್ಲದೆ ಮನೆ ಬಿಟ್ಟು ಓಡಿಹೋಗುತ್ತಿದ್ದ. ಹೀಗಿರುವ ಅಣ್ಣನವರನ್ನು ಹಿಡಿದಿಡುವುದೇ ಸಂಜೀವಪ್ಪನವರಿಗೆ ಚಿಂತೆಯಾಯಿತು. ಬಾಡಿಗೆ ಮನೆಯವರು ಅನುಕಂಪ ತೋರಿದರು. ಮನೆ ಬಿಡಿಸುವ ಯಾವ ಕಿರಿಕಿರಿಯನ್ನು ಮಾಡಲಿಲ್ಲ. ಅಜ್ಜನವರ ನಾಟಕ ಕಂಪನಿಯ ಪಾತ್ರಧಾರಿ, ಅದರಲ್ಲಿಯೂ ಉತ್ತಮವಾಗಿ ಅಭಿನಯಿಸುವ ಸಂಜೀವಪ್ಪನ ಅಣ್ಣ ಹೀಗಾದನಲ್ಲ ಎಂಬ ಸಾಂತ್ವನ ವ್ಯಕ್ತಪಡಿಸುತ್ತಿದ್ದರು. ಏನೋ ನಾಟಕದ ಕಂಪನಿ ಇರುವಷ್ಟು ದಿನ ಇರ್ತಾರೆ ಪಾಪ ಎಂದು ಸುಮ್ಮನಾಗುತ್ತಿದ್ದರು.

ಸಂಜೀವಪ್ಪ ಹಗಲಿನಲ್ಲಿ ಆತನನ್ನು ಸಂಭಾಳಿಸುತ್ತಿದರು. ರಾತ್ರಿಯಾದರೆ ಆತನನ್ನು ಹಿಡಿದು ಕೈಕಾಲು ಕಟ್ಟಿಹಾಕಿ ನಾಟಕದ ಕಂಪನಿಗೆ ಬರುತ್ತಿದ್ದರು. ಹೀಗಿರುವಾಗ ಒಂದುಸಲ ಕಟ್ಟಿದ ಹಗ್ಗಗಳನ್ನು ಬಿಡಿಸಿಕೊಂಡ ಸಂಜೀವಪ್ಪನ ಅಣ್ಣ ಹನುಮಂತ ಊರು ಬಿಟ್ಟು ತಪ್ಪಿಸಿಕೊಂಡು ಹೋಗಿದ್ದರು. ಎಲ್ಲಿ ಹುಡುಕಿದರೂ ಸಿಗಲಿಲ್ಲ. ಕುಟುಂಬದ ಎಲ್ಲರೂ ಹುಡುಕಿದರು. ಒಂದು ವಾರವಾಯಿತು. ಹನುಮಂತಣ್ಣ ಎಲ್ಲಿರುವನೆಂದು ತಿಳಿಯಲಿಲ್ಲ. ಅವರ ಅತ್ತೆ ಯಂಕಮ್ಮ ಊರೂರು ತಿರುಗಿ ನೋಡಿ ಬರುತ್ತೇನೆಂದು ಹೋದಳು. ಹಾಗೆ ಊರೂರು ಅಲೆಯುತ್ತಾ ಸಾಗಿದಾಗ

ಬಿಜಾಪುರದ ಅಸ್ಪತ್ರೆಯಲ್ಲಿರುವನೆಂದು ತಿಳಿಯಿತು. ಅಲ್ಲಿಗೆ ಹೋದ ಸಂಜೀವಪ್ಪನ ಅತ್ತೆ ಯಂಕಮ್ಮಳಿಗೆ ಇವನು ನಮ್ಮ ಹುಡುಗ ಎಂದು ಸಾಬೀತು ಮಾಡಲು ಆಗಲಿಲ್ಲ. ಅಜ್ಜನವರ ನಾಟಕ ಕಂಪನಿಯಲ್ಲಿ ಪಾತ್ರ ಮಾಡುವ ಸಂಜೀವಪ್ಪನವರ ತಮ್ಮನೆಂದು ಹೇಳಿದಾಗ 'ಸರಿ ಹಾಗಾದರೆ ಅಲ್ಲಿಂದ ಒಂದು ಪತ್ರ ತೆಗೆದುಕೊಂಡು ಬನ್ನಿರಿ ನಾವು ನಿಮ್ಮ ಹುಡುಗನನ್ನು ಕಳಿಸುತ್ತೇವೆ" ಎಂದರು. ಅಲ್ಲಿಂದಲೇ ಇದ್ದ ವಿಷಯ ಸಂಜೀವಪ್ಪನಿಗೆ ಫೋನ್ ಮೂಲಕ ತಿಳಿಸಿದಾಗ ಅವರು ನಾಟಕ ಕಂಪನಿಯ ಮ್ಯಾನೇಜರ್‌ರವರಿಂದ ಒಂದು ಪತ್ರ ತೆಗೆದುಕೊಂಡು ಹೋದರು. ಆಗ ಸಂಜೀವಪ್ಪನವರ ಅಣ್ಣ ಹನುಮಂತಣ್ಣನನ್ನು ಕಳುಹಿಸಿಕೊಟ್ಟರು.

ಅದಾದ ನಂತರ ಹುಬ್ಬಳ್ಳಿ ಕ್ಯಾಂಪ್‌ನಲ್ಲಿರುವಾಗ ಮನೆಯಲ್ಲಿ ತೊಂದರೆ ಕೊಡುವನು ಎಂದು ಹುಚ್ಚ ಹನುಮಂತಣ್ಣನನ್ನು ನಾಟಕದ ಸ್ಟೇಜ್‌ನ ಒಳಗೆ ಒಂದು ಕಡೆ ಮೂಲೆಯಲ್ಲಿ ಕಟ್ಟಿಹಾಕಿ ಸಂಜೀವಪ್ಪ 'ಶಿವಶರಣೆ ಅಕ್ಕಮಹಾದೇವಿ' ನಾಟಕದಲ್ಲಿ ಸಖಿಯ ಪಾತ್ರ ಮಾಡುತ್ತಿದ್ದರು. ನಾಟಕ ನಡೆದಾಗ ಒಳಗಡೆ ಇದ್ದಕ್ಕಿದ್ದಂತೆ ಹುಚ್ಚ ಹನುಮಂತಣ್ಣ ಹೊಲಸು ಮಾತಿನಿಂದ ಬೈಯಲು ಶುರುಮಾಡಿದನು. ಹತ್ತು ನಿಮಿಷಗಳ ಕಾಲನಾಟಕ ನಿಂತಿತು. ಪ್ರೇಕ್ಷಕರು ಗದ್ದಲ ಮಾಡುತ್ತಿದ್ದರು. ಆಗ ಮಧ್ಯಪ್ರವೇಶಿಸಿದ ಮ್ಯಾನೇಜರ್‌ರವರು ಇದ್ದ ವಿಷಯವನ್ನು ಪ್ರೇಕ್ಷಕರಿಗೆ ತಿಳಿಸಿ ಹೇಳಲು ಸಮಾಧಾನವಾದರು. ನಾಟಕ ಮುಂದುವರೆದು ಮುಗಿಯಿತು.

ಮರುದಿನ ಬೆಳಿಗ್ಗೆ ಒಂದಿಬ್ಬರು ಸಂಜೀವಪ್ಪನವರನ್ನು ಕೇಳಿಕೊಂಡು ನಾಟಕ ಕಂಪನಿಗೆ ಬಂದರು. ಅವರು ಯಾರೆಂದು ವಿಚಾರಿಸಲಾಗಿ ಹುಬ್ಬಳ್ಳಿಯ ಮಾನಸಿಕ ಮತ್ತು ನರರೋಗ ಆಸ್ಪತ್ರೆಯ ಸಿಬ್ಬಂದಿಯಾಗಿದ್ದರು. ಅವರು ಹಿಂದಿನ ದಿನ ನಾಟಕ ನೋಡಲು ಬಂದಿದ್ದು ಅಲ್ಲಿ ನಡೆದ ಹನುಮಂತಣ್ಣನ ಪ್ರಸಂಗವನ್ನು ಗಮನಿಸಿದ್ದರು. ಅಜ್ಜನವರ ನಾಟಕ ಕಂಪನಿಯ ಕಲಾವಿದರ ಕುಟುಂಬದವರೊಬ್ಬರಿಗೆ ಹೀಗಾದುದು ತಿಳಿದು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬಂದಿದ್ದರು. ಈ ವಿಷಯ ತಿಳಿದ ಸಂಜೀವಪ್ಪನವರು ಅವರಿಗೆ ಕೈ ಮುಗಿದು ಆಸ್ಪತ್ರೆವರೆಗೆ ಹೋಗಿ ಹನುಮಂತಣ್ಣನನ್ನು ಸೇರಿಸಿ ಬಂದರು.

ಒಂದು ತಿಂಗಳ ಕಾಲ ನಿಮ್ಹಾನ್ಸ್‌ನಲ್ಲಿದ್ದ ಹನುಮಂತಣ್ಣ ಅರಾಮವಾಗಿ ಬಂದದ್ದನ್ನು ಕಂಡು ಕುಟುಂಬದವರು ನೆಮ್ಮದಿಯಿಂದಿದ್ದರು. ಸ್ವಲ್ಪದಿನಗಳ ಕಾಲ ಅರಾಮವಾಗಿದ್ದ ಹನುಮಂತಣ್ಣ ಮತ್ತೆ ಅದೇ ರೀತಿಯಾದನು. ಹುಬ್ಬಳ್ಳಿಯಿಂದ ನಾಟಕದ ಕ್ಯಾಂಪ್ ಗದುಗಿಗೆ ಬಂದಾಗ ನಿಡಗುಂದಿಯ ಕೊಪ್ಪದ ಶ್ರೀಗಳ ಹತ್ತಿರ ಕರೆದುಕೊಂಡು ಹೋಗಿ ತೋರಿಸಲಾಗಿ ಈತನಿಗೆ ಗ್ರಹಕಾಟ ಇದೆ ಎಂದು ಕೆಲವು ಔಷಧಿ ಕೊಟ್ಟರು. ಆದರೂ ಕಡಿಮೆಯಾಗಲಿಲ್ಲ ಈ ಗೋಳಾಟ ಹಾಗೆ ಒಂದು ವರ್ಷಕಾಲ ಸಾಗಿ ನಂತರ ತೀರಿಕೊಂಡರು.

ಸಂಜೀವಪ್ಪನವರಿಗೆ ಅಣ್ಣ ಹನುಮಂತಣ್ಣನ ತಾಪತ್ರಯ ಒಂದು ಕಡೆಯಾದರೆ ತಮ್ಮ ಯಲ್ಲಪ್ಪನ ಹೆಂಡತಿಯದು ಇನ್ನೊಂದು ಕಡೆ. ಒಂದು ಸಲ ಸವಣೂರು ಕ್ಯಾಂಪ್‌ನಲ್ಲಿರುವಾಗ ಮಧ್ಯರಾತ್ರಿ ನಾಟಕ ನಡೆದಿತ್ತು ತಮ್ಮನ ಹೆಂಡತಿ ಜಗಳವಾಡಿಕೊಂಡು ಹೋದಳೆಂದು ತಿಳಿದಾಗ ಸಂಜೀವಪ್ಪನವರು ಬಹಳ ಹಿಂಸೆ ಪಟ್ಟುಕೊಂಡರು. ಸನ್ನಿವೇಶದಲ್ಲಿ ತಮ್ಮ ಪಾತ್ರ ಮುಗಿಸಿಕೊಂಡು ಇದ್ದ ವಿಷಯವನ್ನು ಮ್ಯಾನೇಜರರಿಗೆ ತಿಳಿಸಿದರು. ಮುಂದಿನ ಸನ್ನಿವೇಶ ಬರಲು ತಡವಿದೆ ಅಷ್ಟರೊಳಗೆ ಬರುವೆನೆಂದು ಅಪ್ಪಣೆ ಪಡೆದು ಬಣ್ಣದ ಜೊತೆ ಹಾಗೆಯೇ ಓಡಿಹೋಗಿ ತಮ್ಮನ ಹೆಂಡತಿಯನ್ನು ಸಮಾಧಾನ ಮಾಡಿ ಮನೆಗೆ ಕರೆತಂದರು.

ತಮ್ಮನಿಗೆ ಮದುವೆಯಾಗಿ ಕೆಲವರ್ಷಗಳಾಗಿತ್ತು. ಆತನ ಹೆಂಡತಿಗೆ "ಮನೆ ಸಂಸಾರ ನಡೆಯುವುದು ನನ್ನಿಂದ ಮತ್ತು ನನ್ನ ಗಂಡನಿಂದಲೇ" ಎಂಬ ಜಂಬ ಇದ್ದುದರಿಂದ ಜಗಳವಾಡಿಕೊಂಡು ಮೂರು ನಾಲ್ಕು ಸಲ ಹೀಗೆ ಹೋದಾಗಲೆಲ್ಲ ಸಂಜೀವಪ್ಪ ಬಹಳ ನೊಂದಿದ್ದರು. ಆ ನೋವಿನಲ್ಲೆಲ್ಲಾ ಪಾತ್ರ ಮಾಡುವಾಗ ಕುಟುಂಬದ ಯಾವುದೇ ಯೋಚನೆ ಇಟ್ಟುಕೊಳ್ಳದೆ ತನ್ಮಯರಾಗಿ ನಟಿಸುತ್ತಿದ್ದರು. ಒಂದುಸಲ ಅಲಮೇಲು ಕ್ಯಾಂಪ್‌ನಲ್ಲಿರುವಾಗ ಪಕ್ಕದ ಊರಿಗೆ ಅತ್ತೆಯ ಜೊತೆ ಭಿಕ್ಷಾಟನೆಗೆ ಹೊರಟರು. ಬೇಡವೆಂದರು ಕೇಳದೆ ಜೋಳಿಗೆ ಹಾಕಿಕೊಂಡು ಹೊರಟರು. ಹೀಗೆ ಭಿಕ್ಷಾಟನೆ ಮಾಡುವ ಸಮಯದಲ್ಲಿ ನಾಟಕ ನೋಡಿದ್ದ ಜನರು "ಅಜ್ಜನವರ ಕಂಪನಿಯ ಹೆಣ್ಣು ಪಾತ್ರಧಾರಿಯ ಹಾಗೆಯೇ ಇದ್ದಾರಲ್ಲ, ಇವರೇಕೆ ಭಿಕ್ಷೆ ಬೇಡುತ್ತಿದ್ದಾರೆ" ಎಂಬ ಸಂಶಯವಾಗಿ ಸಂಜೀವಪ್ಪನವರನ್ನು ನಿಲ್ಲಿಸಿ "ನೀವು ಅಜ್ಜನವರ ಕಂಪನಿಯವರಲ್ಲವೇ" ಎಂದು ಕೇಳಿದರು. ಹೌದು ಎಂದಾಗ ಸಂಜೀವಪ್ಪನವರನ್ನು ಆಂಜನೇಯನ ಗುಡಿಯಲ್ಲಿ ಕೂಡಿಸಿದರು.

ಅಲ್ಲಿ ಕೂಡಿಸಿ ಜನರೆಲ್ಲ ಸೇರಿ ವಿಚಾರಿಸಲಾಗಿ, ಇವರು ಬಹಳ ಬಡವರು ಆಸ್ತಿ ಅಂತಸ್ತು ಏನು ಇಲ್ಲ, ಇಡೀ ಕುಟುಂಬದ ಜವಾಬ್ದಾರಿ ಇವರ ಮೇಲೆ ಇದೆ, ಹಾಗಾಗಿ ಭಿಕ್ಷೆ ಬೇಡುತ್ತಿದ್ದಾರೆ ಎಂದು ತಿಳಿಯಿತು. ಆಗ ಓಣಿಯ ಎಲ್ಲಾ ಹಿರಿಯರು ಸೇರಿ ಸಂಜೀವಪ್ಪನವರಿಗೆ ಒಂದುವರೆ ಚೀಲ ಜೋಳ, ಅರ್ಧಚೀಲ ಗೋದಿ, ಆಕಳಿಗೆ ಹುಲ್ಲು ಈ ಎಲ್ಲವನ್ನು ಸೇರಿಸಿ ಒಂದು ಚಕ್ಕಡಿಯಲ್ಲಿ ಹಾಕಿ ಅಲಮೇಲ್‌ಗೆ ಕಳುಹಿಸುತ್ತಾರೆ. ಈ ಸಹಾಯವನ್ನು ನೆನೆದು "ನನಗೆ ಕಷ್ಟಗಳೆಲ್ಲಾ ಬಂದಾಗ ಜನರೇ ಪರಿಹರಿಸಿದರು. ಯಾಕೆಂದರೆ ನಾನು ಅಜ್ಜನವರ ಕಂಪನಿಯ ಕಲಾವಿದ" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಅಜ್ಜನವರ ಕಂಪನಿಯ ಕಲಾವಿದರೆಂದರೆ ಜನರಿಗೆ ಅಷ್ಟೊಂದು ಗೌರವ. ಸಂಜೀವಪ್ಪನವರು ಯಾವಾಗಲಾದರು ಹೋಟೆಲ್ ಅಂಗಡಿಗೆ ಹೋದಾಗ ಜನರು

ಅವರನ್ನು ಕಂಡು ಖುಷಿಯಾಗಿ ಬಹಳ ಪ್ರೀತಿಯಿಂದ ಮಾತಾಡಿಸುತ್ತಿದ್ದರು. ಹೋಟೆಲ್‌ನಲ್ಲಿ ಸಿಕ್ಕರೆ ತಿಂಡಿ ತಿನ್ನಿಸುತ್ತಿದ್ದರು. ಸ್ನಾನ ಮಾಡಲು ಊರ ಹೊರಗೆ ತೋಟದ ಕಡೆ ಹೋದರೆ ಅಲ್ಲಲ್ಲಿ ಹೊಲ ಗದ್ದೆಗಳಲ್ಲಿ ಇರುವ ಜನರು ಹೊಲದ ಉತ್ಪನ್ನಗಳನ್ನು ಕೊಟ್ಟು ಕಳುಹಿಸುತ್ತಿದ್ದರು. ತಮ್ಮ ಬುತ್ತಿಯನ್ನು ತೆಗೆದು ಜೊತೆ ಕರೆದುಕೊಂಡು ಊಟಮಾಡಿಸುತ್ತಿದ್ದರು.

ಕುಟುಂಬಕ್ಕೆ ಬಂದ ಎಲ್ಲಾ ನೋವುಗಳ್ನು ತಡೆದುಕೊಳ್ಳುವ ಶಕ್ತಿ ಆ ಸ್ತ್ರಿಪಾತ್ರಗಳಿಂದಾಗಿ ಸಿಕ್ಕಿರಬೇಕು. ಯಾಕೆಂದರೆ ಅಂತಹ ಪಾತ್ರಗಳನ್ನೇ ಸಂಜೀವಪ್ಪನವರು ಮಾಡುತ್ತಿದ್ದರು. ಸಂಜೀವಪ್ಪನವರ ಸಂಸಾರದ ಬಂಡಿ ಸರಿಯಾಗಿ ಸಾಗಲು ಅವರ ಶ್ರೀಮತಿ ಶಾರದಾರನ್ನು ಮರೆಯುವಂತಿಲ್ಲ. ಗಂಡನ ಜೊತೆ ಶಾಂತಳಾಗಿ ಎಲ್ಲವನ್ನು ಸಹಿಸಿದಾಕೆ. ೧೮ ವರ್ಷಗಳ ಕಾಲ ಪತಿಯ ಅಣ್ಣನ ಕಷ್ಟವನ್ನು ಹಿಂಸೆ ಎಂದುಕೊಳ್ಳದೆ ತನ್ನ ಜವಾಬ್ದಾರಿ ಎಂದು ತಿಳಿದು ನಿಭಾಯಿಸುವಲ್ಲಿ ಅವರ ಶ್ರೀಮತಿಯವರ ಕಾಣಿಕೆಯೂ ಇದೆ.

ಅಯ್ಯಾಳದಲ್ಲಿ ಕ್ಯಾಂಪ್ ಇರುವಾಗ ಗೋದಿ ಯಂಕಪ್ಪ ಎಂಬ ದಾಸ ಜನಾಂಗದ ಅಲೆಮಾರಿ ಕಲಾವಿದ ಭಿಕ್ಷಾಟನೆ ಮಾಡುತ್ತಾ ಅಯ್ಯಾಳಕ್ಕೆ ಬಂದಿದ್ದನು. ಹಾಡುತ್ತಾ ಪಿಟೀಲು ನುಡಿಸುತ್ತಾ ಭಿಕ್ಷಾಟನೆ ಮಾಡುತ್ತಿದ್ದುದನ್ನು ಸಂಜೀವಪ್ಪನವರ ಅತ್ತೆ ತಾನೂ ಭಿಕ್ಷೆಗೆ ಹೋದ ಸಂದರ್ಭದಲ್ಲಿ ನೋಡಿದ್ದಳು. ನಮ್ಮವರೆ ಎಂದು ಗುರುತು ಹಿಡಿದು ಮನೆಗೆ ಕರೆದುಕೊಂಡು ಬಂದಿದ್ದಳು. ಅಲ್ಲೊಂದು ರಾತ್ರಿ ಉಳಿದು ನಾಟಕ ನೋಡಿದರು. ಮರುದಿನ ಸ್ಟೇಜಿನಲ್ಲಿ ಕಲಾವಿದರ ಜೊತೆ ಮಾತಾಡುವಾಗ ಆತನನ್ನು ಹಾಡಿಸಿದರು. ವಾಯಲಿನ್ ನುಡಿಸುತ್ತಾ ಮರಾಠಿ ಅಭಂಗಗಳನ್ನು ತುಂಬಾ ಸೊಗಸಾಗಿ ಹಾಡಿದರು. ಆಗ ಶಿವಮೂರ್ತಿ ಸ್ವಾಮಿ ದೇವಗಿರಿ ಮತ್ತು ರೋಣದ ಮರಿಯಪ್ಪನವರು ಆತನನ್ನು ನಾಟಕದಲ್ಲಿ ಹಾಡ್ತಾ ಪಾತ್ರ ಮಾಡುತ್ತಾ ನಮ್ಮಲ್ಲಿಯೇ ಇರು ಎಂದಾಗ "ನಾನು ಮರಾಠಿ ಕಂಪನಿ ಬಿಟ್ಟು ಬಂದವನು, ಮತ್ತೆ ನಾಟಕ ಕಂಪನಿ ಸೇರುವ ಮನಸಿಲ್ಲ" ಎಂದರಂತೆ.

ಇತ್ತಿಚೆಗೆ ಸಿನಿಮಾ ನಾಟಕದಲ್ಲಿ ಗ್ಲಿಸರಿನ ಬಳಕೆ ಹೆಚ್ಚಾಗಿದೆ. ಯಾಕೆಂದರೆ ಅಳುವ ಸನ್ನಿವೇಶ ಬಂದಾಗ ಉಪಯೋಗವಾಗಲೆಂದು ಬಳಸುತ್ತಾರೆ. ಆದರೆ ಸಂಜೀವಪ್ಪನಿಗೆ ಪಾತ್ರವೇ ತಾನಾಗಿ ಅಭಿನಯಿಸುವಾಗಲೆಲ್ಲಾ ಕಣ್ಣೀರು ಸಹಜವಾಗಿ ಬರುತ್ತದೆ. ಹಾಗಾಗಿ ನಾಟಕದ ಕ್ಯಾಂಪ್ ಮುಗಿಯುವಷ್ಟರಲ್ಲಿ ಹೆಣ್ಣು ಮಕ್ಕಳ ಮೆಚ್ಚುಗೆಯನ್ನು ಪಡೆದಿರುತ್ತಿದ್ದರು. ಅಂತೆಯೇ ಆತನ ಸಾತ್ವಿಕ ಪಾತ್ರ ಮುಗಿದರೂ ಊರಿನ ಎಲ್ಲರ ಜೊತೆ ಸಾತ್ವಿಕ ಜೀವಿಯಾಗಿ ವರ್ತಿಸುತ್ತಿದ್ದುದನ್ನು ಕಂಡು ಸಂಜೀವಪ್ಪನನ್ನು ಎಲ್ಲರೂ ಚೆನ್ನಾಗಿ ಮಾತಾಡಿಸಿ ಹೊಗಳುತ್ತಿದ್ದರು. ಅಜ್ಜನವರ

ನಾಟಕ ಕಂಪನಿಯವರೆಂದು ಆದರಿಸಿ ಗೌರವಿಸಿ ಆಗಾಗ ತಮ್ಮ ಹೊಲದಲ್ಲಿ ಬೆಳೆದ ಬೇಳೆ ಕಾಳು ತರಕಾರಿ ಇತರೆ ವಸ್ತುಗಳನ್ನು ಪ್ರೀತಿಯಿಂದ ನೀಡುತ್ತಿದ್ದರು. ನಾಟಕದ ಮತ್ತು ಜೀವನದ ಉದ್ದಕ್ಕೂ ಒಳ್ಳೆಯ ಗುಣಗಳನ್ನು ಹೊಂದಿದ್ದರು. ನೊಂದಿದ್ದರೂ ನೋಯದಂತಿದ್ದು ಮಾಡುವ ಪಾತ್ರಕ್ಕೆ ಜೀವತುಂಬಿ ಅಭಿನಯಿಸುತ್ತಿದ್ದರು.

ನಾಟಕ ಕಂಪನಿಯ ಜೊತೆ ಕುಟುಂಬವಿರುವಾಗ ಯಾವುದಾದರೂ ಮನೆ ಬಾಡಿಗೆಗಾಗಿ ಹಿಡಿಯುವಾಗ ಎಷ್ಟೋ ಸಲ ಸಿಗುತ್ತಿರಲಿಲ್ಲ. ಈಗಿನಂತೆ ಆಗ ಬಾಡಿಗೆ ಮನೆಗಳಿರಲಿಲ್ಲ. ಕೊನೆಗೆ ಯಾರೂ ಇರದ ಪಾಳುಬಿದ್ದ ಮನೆ, ಹಾಳಾದ ದೆವ್ವದ ಮನೆಗಳು ಸಿಗುತ್ತಿದ್ದವು. ಅದಾವುದಕ್ಕೂ ಬೆದರದೆ ಸಂಜೀವಪ್ಪ ಆ ಮನೆಯಲ್ಲಿಯೇ ವಾಸ ಮಾಡುತ್ತಿದ್ದರು. ದೇವರೊಬ್ಬರೇ ಗುರು ಪುಟ್ಟರಾಜರು ಅವರಿರುವಲ್ಲಿ ಯಾವುದೇ ಕೆಟ್ಟದು ಇರುವುದಿಲ್ಲವೆಂದು ತಿಳಿದು ಅಜ್ಜನವರ ಭಾವಚಿತ್ರವನ್ನು ಇಟ್ಟು ಪೂಜೆ ಮಾಡಿ ವಾಸ್ತವ್ಯ ಹೂಡುತ್ತಿದ್ದರು. ಕೆಲವು ಸಲ ಮನೆ ಮಾಡಲು ಊರಿನಲ್ಲಿ ಯಾವುದೇ ಅನುಕೂಲಗಳು ಇಲ್ಲದಿದ್ದಾಗ ನಾಟಕ ಕಂಪನಿಗೆ ಹೊಂದಿಕೊಂಡಂತೆ ತಗಡುಗಳನ್ನು ಹಾಕಿಸಿ ಟೆಂಟ್ ಹಾಕುತ್ತಿದ್ದರು. ಮನೆ ಸಿಕ್ಕರೆ ಹೋಗುವುದು ಇಲ್ಲದಿರೆ ಅಲ್ಲಿಯೇ ವಾಸ ಮಾಡುವುದು. ನಾಟಕ ಕಂಪನಿಯ ಹತ್ತಿರ ಇರುವಾಗ ಕಂಪನಿಯ ನಟರು ಸಂಜೀವಪ್ಪನವರ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದರು. ಸಂಜೀವಪ್ಪನವರ ಕುಟುಂಬವೂ ಸಹ ಕಂಪನಿಯ ನಟರಿಗೆ ನೀಡಿದ ಸಹಕಾರ ಅವರ ಗೆಳೆಯ ಬಳಗ ನೆನೆಯುವುದನ್ನು ಕೇಳಿದ್ದೇವೆ.

ಸಂಜೀವಪ್ಪನ ಕುಟುಂಬದ ಕಷ್ಟವನ್ನು ನೋಡಿ ಜಂಗರಳ್ಳಿ(ಗುಂಜಳ್ಳಿ) ತಾತನವರು ಅವರಿಗೆ ಒಂದು ಆಕಳನ್ನು ದೇಣಿಗೆಯಾಗಿ ನೀಡಿದ್ದರು. ಅದನ್ನು ತಮ್ಮ ಜೊತೆಗೆಯೇ ಇಟ್ಟುಕೊಂಡು ಮೇಯಿಸುತ್ತಿದ್ದರು. ಸಂಜೀವಪ್ಪನವರ ತಾಯಿ ಬಾಬಮ್ಮ ಅದನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತರು. ನಾಟಕ ಕಂಪನಿಯ ಜೊತೆಗೆ ಹಸುವು ಕೂಡಾ ಸಾಗುತ್ತಿತ್ತು. ಹೀಗೆ ಸಾಗುವಾಗ ಒಂದಿದ್ದ ಹಸು ಮೂರಾಗಿದ್ದವು. ಹಾಲು ಸಾಕಷ್ಟು ಸಿಗುತ್ತಿತ್ತು. ಕಂಪನಿಯ ನಟರಿಗೆ ಆಗಾಗ ಚಹದ ಸೇವೆಯಾಗುತ್ತಿತ್ತು. ಅಷ್ಟೇ ಅಲ್ಲ ಮೂರು ಸಲ ಗಿಣ್ಣದ ಸಿಹಿ ಸೇವೆ ಆಗಿತ್ತು. ನಾಟಕ ಕಂಪನಿಯ ಜೊತೆ ಇತರೆ ಕಲಾವಿದರ ಕೆಲವು ಕುಟುಂಬಗಳು ಮನೆ ಮಾಡಿಕೊಂಡಿದ್ದವು. ಅವರೆಲ್ಲರ ಜೊತೆ ಸಂಜೀವಪ್ಪನವರ ಕುಟುಂಬ ಅನ್ಯೋನ್ಯವಾಗಿತ್ತು. ೧೯೮೦ ರಲ್ಲಿ ಗದುಗಿನಿಂದ ಕುಟುಂಬದವರೆಲ್ಲ ನಾಟಕ ಕಂಪನಿ ಬಿಟ್ಟು ಊರಿಗೆ ಬಂದರು. ಮಕ್ಕಳ ವಿದ್ಯಾಭ್ಯಾಸ ಗಬ್ಬೂರಲ್ಲಿ ಮುಂದುವರೆಯಿತು. ೨೦೦೯ರವರೆಗೆ ಸಂಜೀವಪ್ಪ ಒಬ್ಬರೇ ರಂಗಭೂಮಿಯ ಜೊತೆಗಿದ್ದು ನಂತರ ನಿವೃತ್ತರಾದರು.

## ಪುಣ್ಯಪುರುಷನ ನೆರಳಿನಲಿ ಬೆಳೆದ ಪಾತ್ರ

೧೯೬೨ ರಿಂದ ಪುಟ್ಟರಾಜರು ದೈವಾಧೀನ ಆಗುವವರೆಗೂ ಅವರ ಮೆಚ್ಚಿನ ಸಂಜೀವಮಣಿ ಯಾಗಿದ್ದರು. ಬಾಲಕನಾಗಿ ಸಂಗೀತ ಕಲಿಯಲು ಬಂದಾಗ ಗುರುಗಳ ಬಗ್ಗೆ ಭಕ್ತಿ ಇಟ್ಟಿದ್ದರೋ ಅದೇ ರೀತಿ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದರು. ಪುಟ್ಟರಾಜ ಗುರುಗಳು ಕಂಪನಿಯ ಜೊತೆ ಇದ್ದಾರೆಂದರೆ ಅವರ ಕೀರ್ತನೆ ಪ್ರವಚನದ ಅವಕಾಶ ಸಿಗುತ್ತಿತ್ತು. ಅದು ನಮಗೆ ಸಿಕ್ಕ ಸೌಭಾಗ್ಯವೆಂದು ಸಂಜೀವಪ್ಪ ಬಣ್ಣಿಸಿಕೊಳ್ಳುತ್ತಾರೆ. ಅವರೇ ಹೇಳುವಂತೆ "ಪುಟ್ಟರಾಜ ಗುರುಗಳಿಗೆ ಅಪಾರವಾದ ಜನಮನ್ನಣೆ, ಗೌರವ, ಆದರದ ಸ್ವಾಗತ ಸಿಗುತ್ತಿತ್ತು. ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮುಗಿಸಿಕೊಂಡು ಸಂಜೆಗೆ ಅಜ್ಜನವರು ನಾಟಕ ಆರಂಭಕ್ಕೆ ಮುಂಚೆ ಹಾರ್ಮೋನಿಯಂ ಪೆಟ್ಟಿಗೆ ಮುಂದೆ ಕುಳಿತರೆಂದರೆ ಆ ನುಡಿಸುವ ಬೆರಳುಗಳನ್ನು ನೋಡುವುದೇ ಒಂದು ಭಾಗ್ಯ. ಅಷ್ಟೊಂದು ಮಧುರವಾದ ನಾದ ಅವರ ಬೆರಳಲ್ಲಿರುತ್ತಿತ್ತು." ಎಂದು ಹೇಳುತ್ತಾ ಭಾವುಕರಾಗುತ್ತಾರೆ.

ಅಲಮೇಲು ಕ್ಯಾಂಪ್ ಮುಗಿಸಿ ಶಹಾಪುರಕ್ಕೆ ಸಮಾನುಗಳನ್ನು ಲಾರಿಯಲ್ಲಿ ಹೇರಿಕೊಂಡು ಬಂದರು. ಲಾರಿ ನಿಲ್ಲಿಸಿ ಸ್ಟೇಜಿನ ಸಾಮಾನುಗಳನ್ನು ಇಳಿಸುವಾಗ ಲಾರಿಗೆ ಕಟ್ಟಿದ್ದ ಹಗ್ಗ ಬಿಚ್ಚಲು ಮೇಲೇರಿದ್ದ ಯುವನಟ ಗೂಟ ಹಿಡಿಯಲು ಹೋಗಿ ಮೇಲಿನಿಂದ ಬಿದ್ದರು. ಹತ್ತಿರದಲ್ಲಿದ್ದ ಸಂಜೀವಪ್ಪ ಆತ ಸತ್ತನೆಂದು ಗಾಬರಿಯಾಗಿ ಕಣ್ಣು ಮುಚ್ಚಿ ಅಳುತ್ತಾ ಅಜ್ಜನವರನ್ನು ನೆನೆಯುತ್ತಿದ್ದರು. ಕೆಲವೇ ಕ್ಷಣಗಳಲ್ಲಿ ಬಿದ್ದ ಯುವನಟ ಎದ್ದು ನಿಂತನು. ತನಗೇನಾಗಲಿಲ್ಲ ಎಂದಾಗ 'ಎಲ್ಲಾ ಅಜ್ಜನ ಕೃಪೆ' ಎಂದು ಭಾವುಕರಾದರು. ಶಿವಮೊಗ್ಗ ಜಿಲ್ಲೆಯ ತೊಗರಿಸಿ ಕ್ಯಾಂಪ್‌ನಲ್ಲಿರುವಾಗ ಮೇಕಪ್ ರೂಮ್‌ನಲ್ಲಿ ಕಲಾವಿದರೆಲ್ಲರೂ ಕುಳಿತಾಗ ಒಂದು ದೊಡ್ಡ ಸರ್ಪ ಬಂದಾಗ ಎಲ್ಲರೂ ಗಾಬರಿಯಾಗಿರುವಾಗ ಏನೂ ಮಾಡದೆ ಸುಮ್ಮನೆ ಇದ್ದರು. ಸ್ವಲ್ಪ ಹೊತ್ತಿನ ನಂತರ ಸರ್ಪ ಹೊರಗೆ ಹೋಯಿತು.

ಒಂದು ಸಲ ಮಾನ್ವಿ ಕ್ಯಾಂಪ್‌ನಲ್ಲಿರುವಾಗ ಮುಸಲ್ಮಾನರ ಸ್ಮಶಾನದಲ್ಲಿ ಸಾಮಾನುಗಳನ್ನು ಇಳಿಸಿ ಊಟಕ್ಕೆ ಕುಳಿತಾಗ ರಾತ್ರಿ ಒಂದು ಗಂಟೆಯಾಗಿತ್ತು. ಇದ್ದಕ್ಕಿದ್ದಂತೆ ಭಯಾನಕ ಶಬ್ದಗಳು ಕೇಳಿಸಲು ಆರಂಭವಾದವು. ಬೆಳಕು ಜಾಸ್ತಿ ಇರಲಿಲ್ಲ ಕಂದೀಲಿನ ಬೆಳಕಿನಲ್ಲಿ ಊಟ ಮುಗಿಸಿ ಅಜ್ಜನ ನಾಮಾವಳಿ ಹೇಳುತ್ತಾ ಮಲಗಿ ಬೆಳಿಗ್ಗೆ ಎದ್ದಾಗ ಒಂದಿಬ್ಬರಿಗೆ ಜ್ವರ ಬಂದಿದ್ದವು. ಆಮೇಲೆ ಅರಾಮವಾಯಿತು. ಇದೆಲ್ಲವೂ ಅಜ್ಜನವರ ನೆನೆವಿನ ಫಲ ಎನ್ನುವ ಸಂಜೀವಪ್ಪ ಪುಟ್ಟಜ್ಜನವರ ಪರಮ ಭಕ್ತರಂತೆ ಕಾಣಿಸುತ್ತಾರೆ.

"ಅಜ್ಜನವರು ಬಂದರೆಂದರೆ ಎಲ್ಲಾ ಕಲಾವಿದರನ್ನು ಪ್ರೀತಿಯಿಂದ ಕರೆದು ಮಾತಾಡಿಸುತ್ತಿದ್ದರು. ಹಾಗೆಯೇ ಅಜ್ಜನವರ ದರ್ಶನಕ್ಕೆ ಬಂದ ಯಾರನ್ನೂ ಕೂಡ ಹಾಗೆ ಕಳಿಸಿಲ್ಲ. ತಮ್ಮ ನೋವನ್ನು ತೋಡಿಕೊಂಡರೆ ಸಾಂತ್ವನ ಹೇಳುತ್ತಿದ್ದರು. ಅನೇಕ ಮನೋರೋಗಗಳನ್ನು ಗುಣಪಡಿಸಿದರು. ನಮ್ಮ ಅಜ್ಜನವರದೆ ಎಲ್ಲಾ ನಮ್ಮದೇನೂ ಇಲ್ಲ. ಎಲ್ಲಾ ಅಜ್ಜನವರ ಕೃಪೆ" ಎನ್ನುತ್ತಾ ಸಂಜೀವಪ್ಪನವರು ಕಣ್ಣಲ್ಲಿ ನೀರು ತಂದುಕೊಳ್ಳುತ್ತಾರೆ. " ಇತ್ತೀಚಿಗೆ ಪ್ರತಿಸಲ ನಾಟಕದ ಕ್ಯಾಂಪ್‌ಗೆ ಬಂದಾಗಲೆಲ್ಲಾ ಅರ್ಧ ಗಂಟೆವರೆಗೆ ಹಾರ್ಮೋನಿಯಂ ನುಡಿಸುತ್ತಿದ್ದರು. ಆ ಸಮಯದಲ್ಲಿ ಹಾರ್ಮೋನಿಯಂ ಮೇಲೆ ಓಡುವ ಅವರ ಬೆರಳುಗಳನ್ನು ನೋಡುವುದೇ ಸೋಜಿಗ" ಎಂದು ಸಂಜೀವಪ್ಪ ಬಣ್ಣಿಸಿಕೊಳ್ಳುತ್ತಾರೆ.

ಊರೂರು ಕ್ಯಾಂಪ್‌ಗಳಲ್ಲಿರುವಾಗ ಅಜ್ಜನವರ ದರ್ಶನಕ್ಕೆ ಭಕಾದಿಗಳು ಬರುತ್ತಿದ್ದರು. ದರ್ಶನ ಮಾಡಿಸಿರಿ ಎಂದು ಕಲಾವಿದರನ್ನು ಪೀಡಿಸುತ್ತಿದ್ದರು. ತಮ್ಮ ಕಲೆಯಿಂದ ಎಲ್ಲರನ್ನು ಮನಸೂರೆಗೊಂಡ ಸಂಜೀವಪ್ಪನವರನ್ನು ಹಚ್ಚಿಕೊಂಡು ಮಾತಾಡಿಸುವ ಜನರು "ಅಜ್ಜನವರು ಬಂದಾಗ ಸ್ವಲ್ಪ ತಿಳಿಸಿ ನಮ್ಮನ್ನು ಕರೆದುಕೊಂಡು ಹೋಗಿ ದರ್ಶನ ಮಾಡಿಸಿರಿ" ಎನ್ನುವರು. ಅಜ್ಜನವರನ್ನು ಯಾರಾದರು ಮಾತಾಡಿಸಲು, ದರ್ಶನ ಮಾಡಲು ಬಂದರೆ ಸಂಜೀವಪ್ಪನವರಿಗೆ ಅಷ್ಟೊಂದು ಖುಷಿಯಾಗುತ್ತಿತ್ತು. ಅವರ ಮಾತನ್ನು ಕೇಳಿದ ಕೂಡಲೆ ಸರಿ ಎಂದು ಹೇಳಿ ಅಜ್ಜನವರ ಹತ್ತಿರ ಕರೆದು ಕೊಂಡು ಹೋಗುತ್ತಿದ್ದರು. ಸಂಜೀವಪ್ಪ ಬಂದಾನ್ರಿ ಎಂದು ಅಜ್ಜನವರ ಪಕ್ಕದಲ್ಲಿದ್ದವರು ಹೇಳಿದರೆ "ಒಬ್ಬನೇ ಬಂದಾನ ಇಲ್ಲ, ಯಾರನ್ನಾದರು ಕರೆದುಕೊಂಡು ಬಂದಾನ, ಅವ ಒಳಗ ಕರಕೊಂಡು ಬರ್ತಾನ ಒಳಗ ಕಳಿಸು" ಎನ್ನುತ್ತಿದ್ದರು. ಅಜ್ಜನವರ ಹತ್ತಿರ ಹೋಗಿ ನಮಸ್ಕಾರ ಮಾಡಿದ ಕೂಡಲೆ "ಸಂಜೀವ ಒಬ್ಬನೇ ಬಂದೀಯ ಜೊತೆಯಲ್ಲಿ ಯಾರನ್ನಾದರು ಕರೆದುಕೊಂಡು ಬಂದೀಯಾ" ಎನ್ನುತ್ತಿದ್ದರು. ಯಾಕೆಂದರೆ, ಸಂಜೀವಪ್ಪ ಒಬ್ಬನೇ ದರ್ಶನಕ್ಕೆ ಬರುವುದಕ್ಕಿಂತ ನಮ್ಮ ಮೇಲಿನ ಭಕ್ತಿಗಾಗಿ ಅಭಿಮಾನಿ ಬಳಗವನ್ನು ಕರೆದುಕೊಂಡು ಬರುತ್ತಿದ್ದನು ಎಂದು ಅಜ್ಜನವರಿಗೆ ತಿಳಿದಿತ್ತು. ಹಾಗಾಗಿ ಭೆಟ್ಟಿಯಾಗಲು ಹೋದ ಕೂಡಲೆ ಹೀಗೆ ಕೇಳುತ್ತಿದ್ದರು. ಅಜ್ಜನವರ ದರ್ಶನಕ್ಕಾಗಿ ಕರೆದುಕೊಂಡು ಬಂದವರ ತೃಪ್ತಿಯನ್ನು ಗಮನಿಸುವಾಗಲೆಲ್ಲಾ ನಮ್ಮ ಅಜ್ಜ ಎಂಬ ಎಲ್ಲಿಲ್ಲದ ಆನಂದ ಉಂಟಾಗುತ್ತಿತ್ತು. ಭಕ್ತಿಯಿಂದ ಸಮರ್ಪಿಸಿಕೊಳ್ಳುವಂತೆ ಆಗುವುದರ ಜೊತೆಗೆ ಎಲ್ಲರನ್ನು ತೊಡಗಿಸಿಕೊಂಡು ಸಾಗುವುದರ ಮೂಲಕ ಆ ಪ್ರಕ್ರಿಯೆಯನ್ನು ಸಂಪೂರ್ಣಗೊಳಿಸಿಕೊಳ್ಳುತ್ತಿದ್ದರು.

೧೯೯೧ರಲ್ಲಿ ಲಿಂಗಸೂಗೂರಿನಲ್ಲಿ ಎರಡನೆಯ ಸಲ ನಾಟಕದ ಕ್ಯಾಂಪ್

ಇರುವಾಗ 'ಮಲಮಗಳು' ನಾಟಕ ನಡೆದಿತ್ತು. ಮುಂಗಾರಿನ ಸಂದರ್ಭ ಮಳೆ ಬಂದು ನಾಟಕದ ಸಾಮಾನುಗಳೆಲ್ಲಾ ತೋಯ್ದು ಹೋದವು. ಆ ಸಂದರ್ಭದಲ್ಲಿ ಹಾರ್ಮೋನಿಯಂ ಪೆಟ್ಟಿಗೆ ಮೇಲೆ ನೀರು ಬಿದ್ದು ರಿಪೇರಿಗೆ ಬಂದಿತ್ತು. ಮ್ಯಾನೇಜರ್‌ರವರ ಅಪ್ಪಣೆಯ ಮೇರೆಗೆ ಅದನ್ನು ತೆಗೆದುಕೊಂಡು ಸಂಜೀವಪ್ಪನವರು ರಾಯಚೂರಿಗೆ ಬಂದರು. 'ಶಾರದಾ ಸಂಗೀತ ವಾದ್ಯಗಳ ರಿಪೇರಿ' ಎಂಬ ಒಂದು ಅಂಗಡಿ ರಾಯಚೂರಿನ ಸಿಟಿ ಟಾಕೀಸ್ ಹತ್ತಿರ ಇತ್ತು. ಕ್ಲಾರಿಯೋನೆಟ್ ವಾದಕರಾದ ರಾಮುಲು ಅವರು ಅದರ ಮಾಲಕರಾಗಿದ್ದರು. ಪೆಟ್ಟಿಗೆಯನ್ನು ತೆಗೆದುಕೊಂಡು ಸಂಜೀವಪ್ಪ ಅಲ್ಲಿಗೆ ಹೋದರು. ರಾಮುಲುರವರು ತಮ್ಮ ಎಲ್ಲಾ ಕೆಲಸವನ್ನು ಬಿಟ್ಟು ಅಜ್ಜನವರ ನಾಟಕ ಕಂಪನಿಯ ಪೆಟ್ಟಿಗೆಯನ್ನು ರಿಪೇರಿ ಮಾಡಿದರು. ಸಂಜೀವಪ್ಪನವರು "ಬಿಲ್ ಎಷ್ಟಾಯಿತು" ಎಂದು ಕೊಡಲು ಹೋದರು. ಆಗ ರಾಮುಲುರವರು "ಆ ಪರಮ ಪೂಜ್ಯರಾದ ಪುಟ್ಟರಾಜ ಅಜ್ಜನವರು ಮುಟ್ಟಿ ನುಡಿಸಿದ ಕೈಗಳು, ನಾನು ಮುಟ್ಟುವ ಯೋಗ ಸಿಕ್ಕಿದ್ದು ನನ್ನ ಪುಣ್ಯ. ಹಣ ಬೇಡ ಅದು ಅಜ್ಜನವರ ಸೇವೆಗೆ ಇರಲಿ" ಎಂದರು. ಈ ಮಾತನ್ನು ಕೇಳಿದ ಸಂಜೀವಪ್ಪನವರಿಗೆ ರಾಮ ಭಕ್ತಿಯನ್ನು ಹನುಮಂತನ ಮುಂದೆ ಕೊಂಡಾಡಿದಷ್ಟೇ ಆನಂದವಾಯಿತು. ತಾನು ಆ ಹಣವನ್ನು ಮುಟ್ಟ ಬಾರದೆಂದು "ಅಜ್ಜನವರಿಗೆ ಕಾಣಿಕೆಯಾಗಿ ಎಂದು ತಿಳಿಸಿ ನಾಲ್ಕು ಮಾತು ಬರೀರಿ, ನಾನು ಅದನ್ನು ಅವರಿಗೆ ಅರ್ಪಿಸ್ತೀನಿ" ಎಂದು ಭಾವುಕರಾಗಿ ನುಡಿದು ಚೀಟಿ ಬರೆಯಿಸಿಕೊಂಡು ಹೋದರು.

ಕುಟುಂಬದ ಜೊತೆಗೆ ಕಂಪನಿಯಲ್ಲಿರುವಾಗ ಎಲ್ಲ ಕುಟುಂಬಗಳ ಬಗೆಗೆ ಅಜ್ಜನವರು ಕಾಳಜಿ ವಹಿಸುತ್ತಿದ್ದರು. ಅವರ ಊಟ, ವಸತಿ ಇತರೆ ಎಲ್ಲಾ ವಿಚಾರಗಳನ್ನು ಕೇಳುತ್ತಿದ್ದರು. ಅಜ್ಜನವರ ಅನುಷ್ಠಾನ ಆದ ನಂತರ 'ಸಂಜೀವಣ್ಣನ ಕುಟುಂಬಕ್ಕ ಊಟ ಮಾಡಿಸ್ರಿ' ಅಂತ ಹೇಳುತ್ತಿದ್ದರು. ಅವರ ಮಾತಿಗೆ ಕರೆದು ಊಟ ಮಾಡಿಸುತ್ತಿದುದನ್ನು ನೆನೆದು ಅಜ್ಜನ ಪ್ರೀತಿ ಆಕಾಶದಷ್ಟು ಅಗಲ ಎಂದು ನೆನೆಯುತ್ತಾರೆ.

ಜಗದಲಿ ಏನೊಂದೂ ಬೇಡದ ಜೀವ ಅಂತೆಯೇ ಎಲ್ಲವನು ನಮಗೆ ಕರುಣಿಸಿದ ದೈವವಾಗಿ ಅಜ್ಜನವರನ್ನು ಕಾಣುತ್ತಾರೆ. ಇತ್ತೀಚೆಗೆ ಅವರು ಲಿಂಗೈಕ್ಯರಾಗುವ ಮುನ್ನ ಕಾಣಲು ಹೋದಾಗ ಪುಟ್ಟರಾಜ ಗುರುಗಳು ಸಂಜೀವಪ್ಪನವರ ಮೈದಡವುತ್ತಾ "ನಮ್ಮ ಸಂಜೀವಮಣಿ ನಮ್ಮ ಹಳೇಮನುಷ್ಯ ಅರಾಮಿದ್ದಿ ಏನಯ್ಯ" ಎಂದು ಕೇಳಿದ್ದನ್ನು ನೆನೆದು ಗದ್ಗದಿತರಾಗುತ್ತಾರೆ. ಹೀಗೆ ಹೇಳುವಾಗಲೆಲ್ಲಾ ಸಂಜೀವಪ್ಪ ನಮಗೆ ಹೆಣ್ಣು ಜೀವವಾಗಿ, ಅಜ್ಜನ ಕರುಣೆಯ ಪ್ರತೀಕವಾಗಿ ಕಾಣುತ್ತಾರೆ.

## ಮಹಾದೇವ ಮನೆಗೆ ಬಂದ ದಿನ

ಸಂಜೀವಪ್ಪ ಮತ್ತು ಶೇಷಪ್ಪ ಜೊತೆಯಾಗಿ ಆಶ್ರಮ ಸೇರಿದ್ದರೂ, ಸಂಜೀವಪ್ಪ ಮೊದಲು ನಾಟಕ ಕಂಪನಿ ಸೇರಿದ್ದರು. ಆರು ವರ್ಷ ಸಂಗೀತ ಅಭ್ಯಾಸ ಮಾಡಿದ ಶೇಷಪ್ಪ ನಂತರ ಅಜ್ಜನವರ ಅಪ್ಪಣೆಯಂತೆ ನಾಟಕ ಕಂಪನಿ ಸೇರಿದ್ದರು. ಇಬ್ಬರೂ ಗೆಳೆಯರು ನಾಟಕದಲ್ಲಿ ಪಾತ್ರ ಮಾಡುತ್ತಾ ಐದು ಆರು ವರ್ಷ ಕಾಲ ಕಳೆಯಿತು. ರಾಣೆಬೆನ್ನೂರಿನ ಕ್ಯಾಂಪ್‌ನಲ್ಲಿರುವಾಗ ಒಂದು ಸಂಜೆ ಗೆಳೆಯರಿಬ್ಬರೂ ವಾಯುವಿಹಾರಕ್ಕೆ ತೆರಳಿದಾಗ ಪುಟ್ಟರಾಜ ಗುರುಗಳನ್ನು ರಾಯಚೂರಿಗೆ ಹಾಗೆಯೇ ನಮ್ಮ ಊರುಗಳಿಗೆ ಕರೆಸುವುದು ಹೇಗೆ? ಎಂದು ಯೋಚಿಸುತ್ತಾ ಸಾಗಿದ್ದರು. ಸಂಜೀವಪ್ಪವನರು ಒಂದು ಸಲಹೆ ನೀಡಿದರು. "ನೀನು ಸಂಗೀತವನ್ನು ಚೆನ್ನಾಗಿ ಕಲಿತು ಗಾಯಕನಾದರೆ ಪುಣ್ಯತಿಥಿ ಹೆಸರಿನಲ್ಲಿ ಅಜ್ಜನವರನ್ನು ರಾಯಚೂರಿಗೆ ಕರೆಸಬಹುದು, ಹಾಗೆಯೇ ನಮ್ಮೂರಿಗೂ ಕರೆಸಬಹುದು". ಆ ಸಲಹೆಯನ್ನು ಗಂಭೀರವಾಗಿ ತೆಗೆದುಕೊಂಡ ಶೇಷಪ್ಪ ಅಂದಿನಿಂದ ಸಂಗೀತವನ್ನು ಚೆನ್ನಾಗಿ ಅಭ್ಯಾಸ ಮಾಡಲು ಆರಂಭಿಸಿದರು.

ಮನದಲಿ ಕಾದು ಕುಳಿತ ಕಲೆ ಕಲಾವಿದರ ಮಕ್ಕಳಿಗೆ ಕರಗತವಾಗಲು ಕಾಯುತ್ತಿತ್ತೇನೋ ಅಂತೆಯೇ ಶೇಷಪ್ಪನವರು ಸಂಗೀತ ಕಲಿತರು. ಸಂಗೀತದ ಹಲವು ಪರೀಕ್ಷೆಗಳಲ್ಲಿ ತೇರ್ಗಡೆಯಾದರು. ನಂತರ ಗುರುಗಳ ಅಪ್ಪಣೆ ಪಡೆದು ನಾಟಕ ಕಂಪನಿಯನ್ನು ಬಿಟ್ಟು ಸಂಗೀತವನ್ನು ಮೈಗೂಡಿಸಿಕೊಂಡು ರಾಯಚೂರಿಗೆ ಬಂದರು. ಗೆಳೆಯರಾದ ಬೂದೆಪ್ಪ ನಾಗಲೀಕರ, ನರಸಿಂಹಲು ವಡವಾಟಿ ಅವರೊಡನೆ ಚರ್ಚಿಸಿದರು. ರಾಯಚೂರಿನ ಸಂಗೀತ ಕಲಾ ಬಳಗವನ್ನು ಸೇರಿಸಿಕೊಂಡು ಪಂಚಾಕ್ಷರ ಸಂಗೀತ ಪಾಠ ಶಾಲೆಯನ್ನು ಆರಂಭಿಸಿದರು.

ರಾಯಚೂರಿನಲ್ಲಿ ಸಂಗೀತ ಶಾಲೆಯನ್ನು ಆರಂಭಿಸಲಾಯಿತು. ಅಂತೆಯೇ ಅವರ ಆಸೆ ಈಡೇರುವ ಕಾಲವೂ ಬಂತು. ೧೯೮೧-೮೨ರಲ್ಲಿ ಅಜ್ಜನವರ ನಾಟಕ ಕಂಪನಿಯು ಮಟಮಾರಿಯಲ್ಲಿ ಕ್ಯಾಂಪ ಮಾಡಿತ್ತು. ಆ ಸಂದರ್ಭದಲ್ಲಿ ಅಜ್ಜನವರ ದರ್ಶನ ಪಡೆದು ಪುಣ್ಯತಿಥಿ ಮಾಡಲು ಅಪ್ಪಣೆ ಪಡೆದರು. ರಾಯಚೂರಿನಲ್ಲಿ ಸಂಗೀತ ಶಾಲೆ ತೆರೆಯಲು ಸಹಕರಿಸಿದ ಎಲ್ಲಾ ಗೆಳೆಯರನ್ನು ಸೇರಿಸಿ ಸಲಹೆಗಳನ್ನು ಸಂಗ್ರಹಿಸಿ ಟ್ರಸ್ಟ ಮಾಡಿದರು. ಆ ಸಮಿತಿಯ ಮೂಲಕ ಪಂಚಾಕ್ಷರ ಗವಾಯಿಗಳ ಪುಣ್ಯತಿಥಿ ಆಚರಣೆ ಆರಂಭ ಮಾಡಿದರು. ಇದೆಲ್ಲದರ ಹಿಂದೆ ಡಾ॥ ಎ.ಶಂಕರ, ಗಣದಿನ್ನಿ ಚೆನ್ನಪ್ಪ ಸಾಹುಕಾರ, ಗೌಸ್ ಮಾಸ್ತರ್, ಗುರುಪಾದಯ್ಯ ಸ್ವಾಮಿ, ಸದಾಶಿವಪ್ಪ, ರಾಮುಲು, ಲಕ್ಷ್ಮಣ ಗೌಡರು, ಮಾಣಿಕ್‌ರಾವ್ ರಾಯಚೂರಕರ್ ಹಾಗು ಇನ್ನುಳಿದ ಸಂಗೀತಾಸಕ್ತರ ನೆರವಿತ್ತು. ಅಜ್ಜನವರು ಪುಣ್ಯತಿಥಿಗೂ ಮತ್ತು ಗಬ್ಬೂರಿಗೂ ಬಂದು

ದರ್ಶನ ನೀಡಿದರು. ಪುಟ್ಟಪುಟ್ಟ ಗುಡಿಸಲುಗಳಿಗೆ ಪುಟ್ಟರಾಜರ ದರ್ಶನವಾಗಿ ಇಡೀ ದಾಸರ ಓಣಿ ಅಷ್ಟೇ ಅಲ್ಲ ಊರಿಗೆ ಊರೆ ಸಂಭ್ರಮದಿಂದಿತ್ತು. ಮಹಾದೇವ ಮನೆಗೆ ಬಂದ ದಿನ ಭಕ್ತ ಸಂಜೀವಪ್ಪನ ಮನಸ್ಸು ಆನಂದದಿಂದಿತ್ತು

ಒಂದೆರಡು ವರ್ಷಗಳಲ್ಲಿ ಶೇಷಪ್ಪನವರು ಬಸವಕಲ್ಯಾಣಕ್ಕೆ ಸಂಗೀತ ಶಿಕ್ಷಕರೆಂದು ನೇಮಕಗೊಂಡು ಹೋದರು. ಆದರೂ ಅಜ್ಜನವರ ಪುಣ್ಯತಿಥಿಯನ್ನು ಟ್ರಸ್ಟ ನಡೆಸುತ್ತಲೇ ಇದೆ. ಸಂಜೀವಪ್ಪನವರ ಹಾಗು ಶೇಷಪ್ಪನವರ ಆಸೆ ಈಡೇರಿದೆ. ರಾಜಸಭೆಯಲ್ಲಿರುವ ಸಂಗೀತವನ್ನು ಸಾಮಾನ್ಯರು ಕೇಳುವಂತೆ ಕಲಿಯುವಂತೆ ಮಾಡಿದ ಗುರು ಪುಟ್ಟರಾಜರನ್ನು ಇಂದಿಗೂ ನೆನೆಸುತ್ತಾರೆ. ಪ್ರತಿವರ್ಷ ಸಂಗೀತ ಕಾರ್ಯಕ್ರಮಗಳನ್ನು ಮಾಡುತ್ತಾ ರಾಯಚೂರು ಭಾಗದಲ್ಲಿ ಸಂಗೀತವನ್ನು ಮನೆಮನೆಗೂ ತಂದ ಕೀರ್ತಿ ಗಾನಗಂಧರ್ವ ಉಭಯಗಾಯನ ವಿಶಾರದ ಪಂಡಿತ ಪುಟ್ಟರಾಜ ಕವಿ ಗವಾಯಿ ಅವರ ಶಿಷ್ಯ ಬಳಗ, ಸಂಗೀತಗಾರ, ಹಾಗೂ ಕಲಾಬಳಗಕ್ಕೆ ಸಲ್ಲುತ್ತದೆ.

ಸಂಜೀವಪ್ಪನವರಿಗೆ ನಾಟಕ ಕಂಪನಿ ಸೇರಿ ನಟನಾಗಿ ರಂಗಭೂಮಿಯಲ್ಲಿ ಸೇವೆ ಮಾಡಲು ಅವಕಾಶ ಒದಗಿಸಿ ಕೊಟ್ಟವರು ಗಬ್ಬೂರಿನವರು. ಅವರಲ್ಲಿನ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸಿ ಬೆಳೆಸಿದವರು ಬೂದೆಪ್ಪ ನಾಗಲೀಕರರವರು, ಮಠದ ಶಾಂತಮೂರ್ತಿ ಶಿವಾಚಾರ್ಯರು, ಗುರುವಿನ ನಾಗಯ್ಯ ತಾತನವರು, ಮಂದಕಲ್ ತಮ್ಮಣಗೌಡ್ರು, ಬಿಬ್ಬಣ್ಣ ಧಣಿಗಳು, ದೊಡ್ಡ ಬೂದೆಪ್ಪ ಸಾಹುಕಾರ, ಸಣ್ಣ ಬೂದೆಪ್ಪ ಸಾಹುಕಾರ, ಸಿದ್ರಾಮಯ್ಯ ತಾತನವರು, ಮೂಕಯ್ಯ ತಾತನವರು, ಜಾಡರ ಬಸ್ಸಣ್ಣ ಸಾಹುಕಾರರು ಮತ್ತು ಸೂಗಪ್ಪ ಸಾಹುಕಾರರು. ಸಿದ್ರಾಮಯ್ಯ ಸಾಹುಕಾರರವರು, ಗಣದಿನ್ನಿ ಚೆನ್ನಪ್ಪ ಸಾಹುಕಾರರು, ಕೋರಿ ಸಾಹುಕಾರರು, ಅನ್ವರಿ ಸಾಹುಕಾರರು ಮತ್ತು ಯಲಿ ಶಾಂತಪ್ಪ ಸಾಹುಕಾರರು. ಶಿವಪ್ಪ ಹೆಡ್‌ಮಾಸ್ತರ್, ಅಮರಣ್ಣ ಮಾಸ್ತರ್, ಎಮ್.ಬೂದೆಪ್ಪನವರು, ಕರಿಗಾರ ಬಂಧುಗಳು, ಹೂಗಾರ ಬಂಧುಗಳು, ಭಜಂತ್ರಿ ಬಂಧುಗಳು, ನಿಜಾನಂದಾಶ್ರಮದ ಎಲ್ಲಾ ಬಂಧುಗಳು. ಹೀಗೆ ಊರಿನ ಪ್ರೋತ್ಸಾಹಿಸಿದವರ ಪಟ್ಟಿ ಬೆಳೆಯುತ್ತದೆ. ಇವರೆಲ್ಲರನ್ನು ಈಗಲೂ ಸ್ಮರಿಸಿಕೊಳ್ಳುವ ಸಂಜೀವಪ್ಪನವರು ವಯಸ್ಸು ಮತ್ತು ಆರೋಗ್ಯದ ಕಾರಣದಿಂದಾಗಿ ರಂಗಭೂಮಿಯಿಂದ ದೂರಾದ ಬಗೆಗೆ ವ್ಯಥೆ ಪಟ್ಟುಕೊಳ್ಳುತ್ತಾರೆ. ಎಲ್ಲಾ ಅಜ್ಜನ ಕೃಪೆ ಎಂದು ಶಾಂತರಾಗುತ್ತಾರೆ. ಇವರ ಪ್ರತಿಭೆಗೆ ಕುಂದಿಲ್ಲ. ಇವರ ಕಲೆಯನ್ನು ಬಳಸಿಕೊಂಡು ರಂಗಭೂಮಿಯ ಚಟುವಟಿಕೆಗಳಿಗೆ, ಇಂದಿನ ಪೀಳಿಗೆಗೆ ಅನುಭವ ವಾಗಿ ಬಳಸಿಕೊಳ್ಳಬೇಕಾದ ಜವಾಬ್ದಾರಿ ಎಲ್ಲರ ಮೇಲಿದೆ.

## ಬಣ್ಣ ಒರೆಸಿಕೊಂಡ ಪಾತ್ರ

ಬಾಲ್ಯದ ಹದಿನೈದು ವರ್ಷದ ಬಾಲಕನಾಗಿದ್ದಾಗ ರಂಗಭೂಮಿಗೆ ಪಾದಾರ್ಪಣೆ ಮಾಡಿದ ಸಂಜೀವಪ್ಪ ಅಜ್ಜನವರ ಅಭಿಮಾನಿಯಾಗಿ, ಕಲೆಯನ್ನು ಗೌರವಿಸುವ ಒಬ್ಬ ನಟನಾಗಿ ನಲವತ್ತು ವರ್ಷಗಳ ಕಾಲ ಒಂದೇ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ್ದು ನೋಡಿದರೆ ನಿಜಕ್ಕೂ ಇದು ಅಭಿನಂದನೀಯವಾದುದು. ಯಾವ ರಂಗಭೂಮಿಯ ನಟನೂ ಕೂಡಾ ತನಗೆ ಅನ್ನ ನೀಡಿದ ಕಂಪನಿಗೆ ಬದ್ಧನಾಗಿ, ಭಕ್ತಿಯಿಂದ ಬಾಗಿ, ಬಣ್ಣ ಹಚ್ಚಿಕೊಂಡು ಮೈ ಬಾಡಿಸಿಕೊಂಡು ನಿಲ್ಲಿಸುವವರೆಗೂ ಸೇವೆ ಸಲ್ಲಿಸಿದ ಉದಾಹರಣೆಗಳು ಬಹಳ ವಿರಳ. ಅಂತಹದರಲ್ಲಿ ತನ್ನ ಕುಟುಂಬ ಮನೆ ಮಕ್ಕಳನ್ನು ದೂರವಿಟ್ಟು ಜೀವನವನ್ನೆಲ್ಲ ರಂಗಭೂಮಿಗಾಗಿ ಮುಡಿಪಾಗಿಟ್ಟವರು. ಅರವತ್ತು ದಾಟಿದಾಗ ದೇಹ ಸ್ಪಂದಿಸಲಿಲ್ಲವೆಂದು ನಟನೆಯನ್ನು ಕಡಿಮೆ ಮಾಡಿದರು. ೨೦೦೯ರಲ್ಲಿ ಲಕ್ಕುಂಡಿ, ದೋಣಿಯಲ್ಲಿ 'ಶಿಶುವಿನಾಳ ಷರೀಫ' ನಾಟಕದಲ್ಲಿ ತಾಯಿಯಾಗಿ ಮತ್ತು 'ಶಿವಶರಣೆ ಅಕ್ಕಮಹಾದೇವಿ' ನಾಟಕದಲ್ಲಿ ಅಕ್ಕಮಹಾದೇವಿಯ ತಾಯಿ ಸುಮತಿಯಾಗಿ ಪಾತ್ರ ಮುಗಿಸಿಕೊಂಡು ಬಣ್ಣಕ್ಕೆ ವಿರಾಮ ನೀಡಿದರು. ಬದುಕು ಕಟ್ಟಿಕೊಟ್ಟ ಬಣ್ಣವನು ನೆನೆಸುತ್ತಾ ಗುರು ಪುಟ್ಟರಾಜರ ದರ್ಶನ ಪಡೆದು ಭಾರವಾದ ಹೆಜ್ಜೆಗಳನ್ನಿಡುತ್ತಾ ಊರಿಗೆ ನಡೆದರು.

ಇದೇ ಸಂದರ್ಭದಲ್ಲಿ ತನ್ನ ಬಾಲ್ಯದ ಗೆಳೆಯ ಹಾಗು ಬಂಧುವಾದ ಶೇಷಪ್ಪ ಗವಾಯಿ ಗಬ್ಬೂರು ದೈವಾಧೀನರಾದರು. ಅಂದು ತನ್ನೊಂದಿಗೆ ಆಶ್ರಮ ಸೇರಿದ ಗೆಳೆಯ ಬಸವಕಲ್ಯಾಣದಲಿ ಈ ಭೂಮಿಯ ನಂಟು ಕಳೆದುಕೊಂಡಾಗ ಏನೋ ಕಳೆದುಕೊಂಡಂತಾಗಿ ವಿಚಲಿತರಾದರು. ೧೯೬೨ರಿಂದ ೨೦೦೯ರವರೆಗೆ ಸತತವಾಗಿ ೪೫ವರ್ಷಗಳ ಕಾಲ ಒಂದೇ ಕಂಪನಿಯಲ್ಲಿ ತನ್ನ ಕನಸಿನ ದೇವರಾದ ಪುಟ್ಟರಾಜರ ಸನ್ನಿಧಿಯಲ್ಲಿ ಇರುತ್ತಾ ಅವರ ಮಾರ್ಗದರ್ಶನ ಪಡೆದುಕೊಂಡವರು. ಪುಟ್ಟರಾಜ ಗುರುಗಳ ನಿಧನದ ನಂತರ ಅಂತರ್ಮುಖಿಯಾದರು.

ವೀರೇಶ್ವರ ಪುಣ್ಯಾಶ್ರಮ ಮತ್ತು ರಂಗಭೂಮಿಯ ಎಲ್ಲ ಗೆಳೆಯರ ನಂಟಿನೊಂದಿಗೆ ಆಶ್ರಮಕ್ಕೆ ಮತ್ತು ನಾಟಕ ಕಂಪನಿಗೆ ಆಗಾಗ ಬಂದು ಹೋಗುತ್ತಾ ತಮ್ಮ ವಿಶ್ರಾಂತಿಯ ಜೀವನವನ್ನು ಊರಲ್ಲಿ ಕಳೆಯುತ್ತಿದ್ದಾರೆ. ಸಂಜೀವಪ್ಪನವರಿಗೆ ಮೂವರು ಹೆಣ್ಣು ಮಕ್ಕಳು ರೇಣುಕಾ, ಮಲ್ಲಮ್ಮ ಮತ್ತು ಜಯಮ್ಮ. ಒಬ್ಬ ಮಗ ಸಂಗಮೇಶ. ಮೂವರು ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕೊಟ್ಟಿದ್ದಾರೆ. ಮಗನಾದ ಸಂಗಮೇಶ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈತನಿಗೆ ತನ್ನ ಬಾಲ್ಯದ ಗೆಳೆಯ, ನಟ ಹಾಗು ಪುಟ್ಟರಾಜ ಗುರುಗಳ ಶಿಷ್ಯರಾಗಿದ್ದ ಶೇಷಪ್ಪ ಗವಾಯಿಗಳವರ ಎರಡನೆಯ ಮಗಳು ಹೊನ್ನಮ್ಮ(ಮೀನಾಕ್ಷಿ)ಯನ್ನು ಸೊಸೆಯನ್ನಾಗಿ ತಂದುಕೊಂಡು ಸ್ನೇಹದ ಜೊತೆಗೆ ಬಂಧುತ್ವವನ್ನು ಉಳಿಸಿಕೊಂಡಿದ್ದಾರೆ.

## ಸಂಜೀವಪ್ಪನವರಿಗೆ ದೊರೆತ ಗೌರವ ಪ್ರಶಸ್ತಿಗಳು

- ೧೯೭೪ರಲ್ಲಿ ಅನ್ನದಾನೀಶ್ವರ ಶಿವಯೋಗಿಗಳ ಸಂಸ್ಥಾನ ಮಠ ಮುಂಡರಗಿ ಸನ್ಮಾನಿಸಿದೆ.
- ೧೯೮೦ರಲ್ಲಿ ಎಮ್.ಜಿ.ಬ್ರದರ್ಸ್ ಫೈನ್ ಆರ್ಟ್ಸ್ ಅಸೋಸಿಯೇಶನ್ ಯಮ್ಮಿಗನೂರು ಇವರಿಂದ 'ಕಲಾಚತುರ' ಪ್ರಶಸ್ತಿ.
- ೨೦೦೬ರಲ್ಲಿ ಪುಟ್ಟರಾಜ ಗವಾಯಿಗಳ ೯೩ನೇ ಜನ್ಮದಿನೋತ್ಸವ ಗದಗ "ನಾಟ್ಯಶ್ರೀ-೨೦೦೬" ಪ್ರತಿಭಾ ಪುರಸ್ಕಾರ ಪ್ರಶಸ್ತಿ
- ೨೦೦೭ರಲ್ಲಿ ಸ್ಫೂರ್ತಿ ಸೇವಾ ಸಂಸ್ಥೆ(ರಿ) ಬೊಮ್ಮನಳ್ಳಿ, ಹಾವೇರಿಯಲ್ಲಿ ಸನ್ಮಾನ
- ೨೦೦೮ರಲ್ಲಿ ಗಜಾನನ ಉತ್ಸವ ಸಮಿತಿ ಕಟಕೋಳ ಬೆಳಗಾವಿಯಲ್ಲಿ ಸನ್ಮಾನ
- ೨೦೦೮ರಲ್ಲಿ ಮಹಾಯೋಗಿ ಲಕ್ಷ್ಮಮ್ಮ ದೇವಸ್ಥಾನ ಸಮಿತಿ ಆದೋನಿಯಲ್ಲಿ ಸನ್ಮಾನ
- ೨೦೦೮ರಲ್ಲಿ ಶ್ರೀಸಂಗಮೇಶ್ವರ ದೇವಸ್ಥಾನ ಸಮಿತಿ ಸವಡಿಯಲ್ಲಿ ಸನ್ಮಾನ
- ೨೦೦೮ರಲ್ಲಿ ರಾಯಚೂರು ಜಿಲ್ಲಾ ಆಡಳಿತದ "ರಾಜ್ಯೋತ್ಸವ ಪ್ರಶಸ್ತಿ"
- ರಂಗಭಾರತಿ ೪೦ರ ಸಂಭ್ರಮ. ಕರ್ನಾಟಕ ನಾಟಕ ಅಕಾಡೆಮಿ, ಎಮ್.ಪಿ.ಪ್ರಕಾಶ್ ರವರಿಂದ ಸನ್ಮಾನ
- ಪಂ.ಪಂಚಾಕ್ಷರ ಗವಾಯಿಗಳವರ ೬೫ನೇ ಪುಣ್ಯತಿಥಿ ಕಾರ್ಯಕ್ರಮದಲ್ಲಿ 'ಹಾಸ್ಯಪ್ರವೀಣ' ಪ್ರಶಸ್ತಿ.
- ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿಯವರ ೪೫ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಕೂಡಲಸಂಗಮದಲ್ಲಿ ಸನ್ಮಾನ
- ೨೦೦೮ರಲ್ಲಿ ಯೋಗಗುರು ರಾಮದೇವ ಮಹಾರಾಜ ಪ್ರತಿಷ್ಠಾನ ಗಬ್ಬೂರಿನಿಂದ ಸನ್ಮಾನ
- ೨೦೧೪ರಲ್ಲಿ 'ನಾಟಕ ಅಕಾಡೆಮಿ' ಪ್ರಶಸ್ತಿ.
- ೨೦೧೫ರಲ್ಲಿ ಕರ್ನಾಟಕ ಸರ್ಕಾರದ 'ರಾಜ್ಯ ಪ್ರಶಸ್ತಿ'

## ಪರದಾ ಬಿಡುವ ಮುನ್ನ

ಭಿಕ್ಷಾಟನೆಯನ್ನು ಕಾಯಕವಾಗಿಸಿಕೊಂಡ 'ದಾಸ' ಪರಂಪರೆಯ ಸಂಜೀವಪ್ಪನವರು ರಂಗಭೂಮಿಗೆ ಪ್ರವೇಶಿಸಿದ್ದು ಆಕಸ್ಮಿಕವಾದರೂ ಅದರ ಹಿಂದಿನ ಪ್ರೇರಣೆ ಸತ್ಯ ಮತ್ತು ಸೂಕ್ತವಾದುದಾಗಿತ್ತು. ಆರಂಭದಲ್ಲಿ ಏನನ್ನು ನಿರೀಕ್ಷಿಸದೆ ಕೊಟ್ಟಷ್ಟು ತೆಗೆದುಕೊಂಡು ನಟಿಸುತ್ತಾ ನುರಿತು ಪ್ರಸಿದ್ಧಿಗೆ ಬಂದಕೂಡಲೆ ಬೇರೆಬೇರೆ

ನಾಟಕ ಕಂಪನಿಗಳು ತೋರಿಸುವ ಸಂಭಾವನೆಯತ್ತ ಕೈಚಾಚುವ ಹಾಗು ಬೆಳೆದ ಕಂಪನಿಗೆ ಕೈ ಕೊಡುವುದನ್ನು ಆಗಾಗ ಕೇಳಿದ್ದೇವೆ. ಆದರೆ ಸಂಜೀವಪ್ಪನವರು ಯಾವುದೇ ಸಂಭಾವನೆ ಆಶಿಸದೆ ೧೯೬೨ ರಲ್ಲಿ ನಾಟಕ ಕಂಪನಿಗೆ ಸೇರಿ ಬಾಲಕನಾಗಿ, ಯುವಕನಾಗಿ, ಮದುವೆಯಾಗಿ, ಮಕ್ಕಳಾಗಿ, ಸಂಸಾರ ಸಮೇತ ಊರೂರು ಸುತ್ತುತ್ತಾ ಕೊನೆಗೆ ನಿವೃತ್ತಿಯಾಗುವವರೆಗೂ ಅದೇ ಕಂಪನಿಯಲ್ಲಿದ್ದು ಸೇವೆಸಲ್ಲಿಸಿದ್ದು ಗಮನಿಸಿದರೆ ಅವರ ಕಲಾರಾಧನೆ ಮತ್ತು ನಿಷ್ಠೆಯನ್ನು ತೋರಿಸುತ್ತದೆ. ಅನ್ನಕೊಟ್ಟ ರಂಗಭೂಮಿಗಾಗಿ ಭಕ್ತಿಯಿಂದ ಸೇವೆ ಸಲ್ಲಿಸಿ ೪೦ ವರ್ಷಗಳಿಗೂ ಹೆಚ್ಚು ಕಾಲ ಹಲವಾರು ಪಾತ್ರ ನಿರ್ವಹಿಸಿ ಪ್ರಬುದ್ಧ ನಟರಾಗಿ ಎಲೆಮರೆಯ ಕಾಯಿಯಂತೆ ಮರೆಯಾಗಿದ್ದವರು. ಸಂಜೀವಪ್ಪನವರು ಈನಾಡು ಮರೆಯದ ಅಪೂರ್ವ ಕಲಾವಿದರು.

ಅಜ್ಜನವರ ನಾಟಕ ಕಂಪನಿಯಲ್ಲಿ ಒಂಬತ್ತು ಜನ ಮ್ಯಾನೇಜರ್‌ಗಳು ಬದಲಾದರೂ ಸಂಜೀವಪ್ಪ ಮಾತ್ರ ಕಲಾವಿದನಾಗಿ ಉಳಿದವರು. ಯಾವುದೇ ಆಸೆ ಆಮಿಶಗಳಿಗೆ ಬಲಿಯಾಗದೆ ಕಲಾವಿದನಿಗಿರಬೇಕಾದ ಸಭ್ಯ ಜೀವನವನ್ನು ನಡೆಸುತ್ತಾ ದಾಸ ಜನಾಂಗದ ಹಲವಾರು ಓದುವ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದವರು. ಬಿಳಿಯ ಜುಬ್ಬಾ ಬಿಳಿಯ ಪೈಜಾಮು ಹಾಕುತ್ತಾ ತಲೆ ಮೇಲೊಂದು ಟೋಪಿ ಇಡುತ್ತಾ ಸಾಗುತ್ತಿದ್ದರೆ ಗಾಂಧಿಯಂತೆ ಸರಳ ಮತ್ತು ಮೌಲಿಕವಾದ ಬದುಕು ನಮ್ಮೆದುರು ಕಾಣುತ್ತದೆ. ಅವರನ್ನು ನೋಡಿದ ಪ್ರತಿ ಜೀವಿಗೂ ಗೌರವಿಸಬೇಕೆನಿಸುತ್ತದೆ. ವ್ಯಕ್ತಿಯು ಸರಳ, ಬದುಕು ಹಗುರ ಆದರೆ ಅವರ ಕಲಾಪ್ರೌಢಿಮೆ ಆ ತಾಯಿ ಸರಸ್ವತಿಗೂ ಪ್ರೀತಿ. ಅಂತೆಯೇ ಬಣ್ಣ ಒರೆಸಿಕೊಂಡು ಮನೆಯಲ್ಲಿದ್ದರೂ ರಂಗಭೂಮಿಯ ಪಾತ್ರದಿಂದ ಹೊರಬರದೆ ಹೆಣ್ಣಾಗುವ ಪರಿ ಸಂಜೀವಪ್ಪನಂತಹ ನಟರಿಗೆ ಮಾತ್ರ ಸಾಧ್ಯ.

❖❖❖



'ಶಿವಶರಣೆ ಅಕ್ಕಮಹಾದೇವಿ' ನಾಟಕದಲ್ಲಿ ಕೌಶಿಕ ಮಹಾರಾಜನ ಜೊತೆ ದಾಸಿ ಪಾತ್ರದಲ್ಲಿ



'ಶಿವಶರಣೆ ಅಕ್ಕಮಹಾದೇವಿ' ನಾಟಕದಲ್ಲಿ ಸಖಿ ಪಾತ್ರದಲ್ಲಿ



'ಮಾಂಗಲ್ಯಭಾಗ್ಯ' ನಾಟಕದಲ್ಲಿ 'ಮಾಳಿ'ಯಾಗಿ ಮರಿಯನ ಜೊತೆ



'ಮಾಂಗಲ್ಯಭಾಗ್ಯ' ನಾಟಕದಲ್ಲಿ 'ಮಾಳಿ'ಯಾಗಿ



'ಮಲಮಗಳು' ನಾಟಕದಲ್ಲಿ 'ಅಚ್ಚಮ್ಮ'ನ ಪಾತ್ರ



'ರತ್ನಮಾಂಗಲ್ಯ' ನಾಟಕದಲ್ಲಿ 'ಮಾಳಿ'ಯ ಪಾತ್ರ



‘ಶಿವಶರಣೆ ಅಕ್ಕಮಹಾದೇವಿ’ ನಾಟಕದಲ್ಲಿ ‘ಶರಣ’ನ ಪಾತ್ರ



‘ಆದವಾನಿ ಮಹಾಯೋಗಿ ಲಕ್ಷ್ಮಮ್ಮ’ ನಾಟಕದಲ್ಲಿ ‘ಮಂಗಳಮ್ಮ’ನ ಪಾತ್ರ



'ಶ್ರೀಕೃಷ್ಣಗಾರುಡಿ' ನಾಟಕದಲ್ಲಿ 'ಮೋಹಿನಿ' ಪಾತ್ರ



'ಮುದುಕನ ಮದುವೆ' ನಾಟಕದಲ್ಲಿ 'ಅಚ್ಚಮ್ಮ'ನ ಪಾತ್ರ



'ಚನ್ನಪ್ಪ ಚನ್ನಗೌಡ' ನಾಟಕದಲ್ಲಿ 'ರುದ್ರಮ್ಮ'ನ ಪಾತ್ರ



'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕದಲ್ಲಿ 'ನಾಗಮ್ಮ'ನ ಪಾತ್ರ



'ಶಿವಶರಣೆ ಅಕ್ಕಮಹಾದೇವಿ' ನಾಟಕದಲ್ಲಿ 'ದಾಸಿ' ಪಾತ್ರ



'ವರನೋಡಿ ಹೆಣ್ಣುಕೊಡು' ನಾಟಕದಲ್ಲಿ 'ಚಿನ್ನಮ್ಮ'ನ ಪಾತ್ರ



'ಚನ್ನಪ್ಪಚನ್ನಗೌಡ' ನಾಟಕದ ರುದ್ರಮ್ಮನ ಪಾತ್ರ



'ಶಿವಶರಣೆ ಅಕ್ಕಮಹಾದೇವಿ' ನಾಟಕದಲ್ಲಿ 'ಸುಮತಿ' ಪಾತ್ರದಲ್ಲಿ
ಅಜ್ಜನವರು ನಾಟಕ ಕಂಪನಿಗೆ ಬಂದಾಗ



‘ರಂಗಭಾರತಿ ೪೦’ರ ಸಂಭ್ರಮ ಕರ್ನಾಟಕ ನಾಟಕ ಅಕಾಡೆಮಿಯಿಂದ ಸನ್ಮಾನ



‘ರಾಯಚೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ-೨೦೦೮’



'ಯೋಗಗುರು ಬಾಬಾ ರಾಮದೇವ ಪ್ರತಿಷ್ಠಾನ ಗಬ್ಬೂರು ಅವರಿಂದ ಸನ್ಮಾನ'



'ಗಾನಯೋಗಿ ಪಂ.ಪುಟ್ಟರಾಜ ಗವಾಯಿಗಳ ದರ್ಶನ'




ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ನಾಟಕ
'ಹಾನಗಲ್ಲಿನ ಬೊಮ್ಮನಳ್ಳಿ ಶ್ರೀಗಳಿಂದ ಸನ್ಮಾನ'



ಗುಡಿಗೇರಿ ಬಸವರಾಜರ ೪೫ನೇ ರಂಗ ಸಂಭ್ರಮ
'ಕೂಡಲಸಂಗಮ ಶ್ರೀಗಳಿಂದ ಸನ್ಮಾನ'



ಕಲಬುರಗಿಯಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (೨೦೦೪) ಸ್ವೀಕರಿಸಿದ ಸಂದರ್ಭ. ಸಂಸ್ಕೃತಿ ಸಚಿವರಾದ ಉಮಾಶ್ರೀ, ನಾಟಕ ಅಕಾಡೆಮಿ ಅಧ್ಯಕ್ಷ ಶೇಖ ಮಾಸ್ತರ ಇದ್ದಾರೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ೨೦೧೫ರ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು. ಸಂಸ್ಕೃತಿ ಸಚಿವರಾದ ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಕೆ.ಎ. ದಯಾನಂದ ಮುಂತಾದವರು ಇದ್ದಾರೆ.